# ಯುಗರಶ್ಮಿ

- ವೃತಾನುಷ್ಠಾನದ ಪ್ರಯೋಜನಗಳು
- ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ
- ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲ
- ಸೌಹಾರ್ದ ಸಂಭಾಷಣೆಗೆ ಆಹ್ವಾನ ಮತ್ತು ಸ್ವೀಕಾರ
- ಇಸ್ಲಾಂಮತ ತತ್ತ್ವಜ್ಞಾನ

ತ್ರೈಮಾಸಿಕ

ಸಪ್ಟೆಂಬರ್ 1978

ತಬೂಕ್ 1357

ಬೆಲೆ: ರೂ. 1-00

ವ್ಯವಹಾರಬಂಧವಾಗಲೀ ಸ್ನೇಹಬಂಧವಾಗಲೀ ಸ್ಥಾಪಿಸಲ ಸಾಧ್ಯವಾದ ಆ ದಿನ ಬರುವ ಮೊದಲು, ಪ್ರಾರ್ಥನೆಯನ್ನು ಸ್ಥಿರವಾಗಿ ಅನುಷ್ಠಿಸಲಿಕ್ಕೂ ನಾವು ಅನುಗ್ರಹಿಸಿದುದರಿಂದ ರಹಸ್ಯವಾಗಿಯೂ ಬಹಿರಂಗವಾಗಿಯೂ (ಸತ್ಕಾರ್ಯಕ್ಕಾಗಿ) ವ್ಯಯಿಸಲಿಕ್ಕೂ ವಿಶ್ವಾಸಿಗಳಾದ ನನ್ನ ಭಕ್ತರೊಡನೆ ಹೇಳು.

—ಪವಿತ್ರ ಖುರ್‌ಆನ್ (14 : 32)

# ಯುಗರಶ್ಮಿ

## ತ್ರೈಮಾಸಿಕ

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575001.

ಸಂಪುಟ: 4 ಜುಲಾಯಿ-ಸಪ್ಟೆಂಬರ್ 1978/ವಫಾ-ತಬೂಕ್ 1357 ಸಂಚಿಕೆ: 2

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:** ಪುಟ


* ರಂಝಾನ್ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ವ್ರತಾನುಷ್ಠಾನದ ಪ್ರಯೋಜನಗಳು ... 3
* ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ ... 5
* ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲ— ಲಂಡನಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ... 8
* ಸೌಹಾರ್ದ ಸಂಭಾಷಣೆಗೆ ಬ್ರಿಟಿಷ್ ಕೌನ್ಸಿಲ್ ಓಫ್ ಚರ್ಚಸಿನ ಆಹ್ವಾನ ಮತ್ತು ಅಹ್ಮದಿಯಾ ಖಲೀಫರ ಸ್ವೀಕಾರ ... 13
* ಜಗತ್ಪ್ರಸಿದ್ಧ ಅಹ್ಮದಿ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮರ ಕ್ರಾಂತಿಕಾರಕ ಸಂಶೋಧನೆ ... 17
* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು ... 18
* ಸಂಪಾದಕರಿಗೆ ಪತ್ರ ... 20
* ಓದಿದ್ದು......! ... 22
* ಪುಸ್ತಕ ವಿಭಾಗ — ಇಸ್ಲಾಂಮತ ತತ್ತ್ವಜ್ಞಾನ



## Ahmadiyya Urdu Literature

1. Ahmadiyyat Ka Paigham
2. Imam Mahdi Ka Zuhoor
3. Sadakat Hazrat Masih Mauwood
4 Silsila Nubuwwat Allah Ka Abdi Ahd Hai
5. Khatamunnabiyeen
6. Zuroorath-e-Mazhab
7. Hujjathul Baligha
8 Kya Hazrat Masih Nasiree Zinda Hein?
9. Hazrat Masih Mashriq Mein
10. Wafat Hazrat Masih Par Ulamaye Misr Ka Fatawe

**Will be sent free.**

Apply with 20 paise stamp for each book to:

**The Editor, Yugarashmi Kannada Quarterly,**

23/1008, Ansari Road, Bunder,

Mangalore-575 001,

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


| ಸಂಪುಟ: 4 | ಜುಲಾಯಿ–ಸಪ್ಟೆಂಬರ್ 1978 / ವಫಾ–ತಬೂಕ್ 1357 | ಸಂಚಿಕೆ: 2 |
| --- | --- | --- |


## ರಂಝಾನ್

"ರಮಝ್" ಎಂಬ ಪದದ ಅರ್ಥ ಊಷ್ಮ ಎಂದಾಗಿದೆ. ರಂಝಾನ್ ಮಾಸದಲ್ಲಿ, ಮನುಷ್ಯನು ಒಂದು ಕಡೆಯಲ್ಲಿ ಭಕ್ಷ್ಯಪೇಯಗಳನ್ನೂ ಶಾರೀರಿಕ ಸುಖಗಳನ್ನೂ ವರ್ಜಿಸುತ್ತಾ; ಇನ್ನೊಂದು ಕಡೆಯಲ್ಲಿ ದೈವಾಜ್ಞೆಗಳನ್ನು ಶಿರಸಾವಹಿಸುವುದರಲ್ಲಿ ಚುರುಕುತನವನ್ನೂ ಆವೇಶವನ್ನೂ ತೋರಿಸುತ್ತಾನೆ. ಆತ್ಮಿಕ ಹಾಗೂ ಭೌತಿಕ ಉಜ್ವಲನಗಳ ಸಮ್ಮಿಲನವಾಗಿದೆ ರಂಝಾನ್. ಪ್ರತಾನುಷ್ಠಾನ ಮೊತ್ತಮೊದಲು ಒಂದು ಉಷ್ಣಮಾಸದಲ್ಲಿ ಸಂಭವಿಸಿದುದರಿಂದ ರಂಝಾನ್ ಎಂಬ ಹೆಸರು ಬಂತೆಂಬ ಕೆಲವು ನಿಘಂಟುಕರ್ತರ ಅಭಿಪ್ರಾಯ ಸರಿಯಲ್ಲವೆಂದು ನನಗೆ ತೋರುತ್ತದೆ; ಅದು ಅರೇಬ್ಯಕ್ಕೆ ಮಾತ್ರವುಳ್ಳ ಒಂದು ಪ್ರತ್ಯೇಕ ಸಂಗತಿಯಲ್ಲ. ಆಧ್ಯಾತ್ಮಿಕ ಅರ್ಥದಲ್ಲಿ ರಮಝ್ ಎಂದು ಹೇಳಿದರೆ ಆತ್ಮೋಲ್ಲಾಸ ಮತ್ತು ಆತ್ಮೋಜ್ವಲತೆ ಆಗಿದೆ. ಕಲ್ಲುಗಳನ್ನೂ ಇತರ ವಸ್ತುಗಳನ್ನೂ ಬಿಸಿಮಾಡುವ ಶಾಖವನ್ನು ಸಹ ರಮಝ್ ಎಂದು ಹೇಳುತ್ತಾರೆ.

—ಹಝ್ರತ್ ಅಹ್ಮದ್.
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೈತಿಕ ಮೌಲ್ಯಗಳು

1. ಸ್ವರ್ಗವು ಉದಾರಿಗಳ ವಾಸಕೇಂದ್ರವಾಗಿದೆ.

2. ಪರರ ಹುಳುಕನ್ನು ಕಂಡುಹಿಡಿಯಲು ಹೊರಟವರು ದುಷ್ಟತೆಯನ್ನು ಹೆಚ್ಚಿಸುವುದರಲ್ಲಿ ವಿಜಯಿಗಳಾಗುವರು.

3. ಸಂಶಯವನ್ನು ತ್ಯಜಿಸಿರಿ; ಸಂಶಯವು ಸುಳ್ಳಿನ ಬೇರಾಗಿದೆ. ಪರರ ಕುಂದುಕೊರತೆಗಳನ್ನು ನೇರಾಗಿ ಅಥವಾ ಇತರರ ಮೂಲಕ ಕಂಡುಹಿಡಿಯಲು ಪ್ರಯತ್ನಿಸಬೇಡಿರಿ; ಕೃತಕವಾಗಿ ಹರಾಜು ಕರೆಯಬಾರದು; ಯಾರೊಡನೆಯೂ ಅಸೂಯೆಗೊಳ್ಳಬಾರದು. ಯಾರ ಸ್ನೇಹ ಬಂಧವನ್ನೂ ಮುರಿಯಬಾರದು; ಸಹೋದರತೆಯನ್ನು ಹೆಚ್ಚಿಸಿರಿ; ಅಲ್ಲಾಹನಿಗೆ ವಿಧೇಯರಾಗಿರಿ.

4. ಯಾರಿಂದ ಜನರು ದೂರವಿರಲು ಇಚ್ಛಿಸುತಾರೋ ಅವನು ಜನರ ಪೈಕಿ ನಿಕೃಷ್ಟನು. ಅವನಿಂದುಂಟಾಗುವ ದ್ರೋಹಕ್ಕೆ ಜನರು ಹೆದರುತ್ತಾರೆ.

5. ಇಹಲೋಕದ ಮೇಲಿನ ಸ್ನೇಹ ಸಕಲ ಕೆಡುಕುಗಳ ಮೂಲವಾಗಿದೆ.

6. ಲೌಕಿಕ ಕಾರ್ಯಗಳಲ್ಲಿ ವಿರಕ್ತಿ ಹೊಂದಿರುವ ಮತ್ತು ಮಿತಭಾಷಿಯಾದವನನ್ನು ಕಂಡರೆ ಆತನ ಜೊತೆಗೂಡಿರಿ; ಆತನು ಜ್ಞಾನಿಯಾಗುವನು.

7. ಹೊನ್ನನ್ನೂ ಬೆಳ್ಳಿಯನ್ನೂ ಪೂಜಿಸುವವನೂ ಈ ಲೋಕವನ್ನು ಹಿಂಬಾಲಿಸಿ ಹೋಗುವವನೂ ಶಪಿಸಲ್ಪಟ್ಟವನು.

8. ಧನಸಂಪಾದನೆ ನಿಯಮಾನುಸಾರವಾಗಿದೆಯೋ ನಿಯಮ ವಿರುದ್ಧವಾಗಿದೆಯೋ ಎಂಬ ಚಿಂತೆ ಮನುಷ್ಯನ ಮನಸ್ಸನ್ನು ಬಾಧಿಸದ ಒಂದು ಕಾಲ ಖಂಡಿತವಾಗಿಯೂ ಬರುವುದು.

9. ಎರಡು ದೋಷಗಳು ಮನುಷ್ಯನನ್ನು ಹಾಳು ಮಾಡುತ್ತವೆ. ಕಡುಲೋಭಿತ್ವ ಮತ್ತು ಅತಿಭೀರುತ್ವ.

10. ಅತ್ಯಾಶೆ ಮತ್ತು ಅಧಿಕಾರಲಾಲಸೆ ಒಬ್ಬನ ಸತ್ಯವಿಶ್ವಾಸವನ್ನು ಹಾನಿಗೊಳಿಸುವಷ್ಟು ಎರಡು ಹಸಿದ ತೋಳಗಳು ಒಂದು ಕುರಿಮಂದೆಯನ್ನು ಹಾನಿಗೊಳಿಸಲಾರವು.

11. ವಾಚಾಳಿತನ, ಅಶ್ಲೀಲ ಮಾತು, ಜಿಪುಣತೆ, ಅಂಜುಗುಳಿತನ ಇವು ಒಬ್ಬನಲ್ಲಿದ್ದರೆ ಅವನೊಡನೆ ಸಾಕಷ್ಟು ಕೆಡುಕಾಯಿತು.

12. ದಯಾಪರತೆ ಜ್ಞಾನದ ಬೇರಾಗಿದೆ.

(ಸರ್ ಮುಹಮ್ಮದ್ ಝುಫರುಲ್ಲಾ ಖಾನರ Wisdom of The Holy Prophet Muhammad ಎಂಬ ಪುಸ್ತಕದಿಂದ ಆಯ್ದುದು).

# ವ್ರತಾನುಷ್ಠಾನದ ಪ್ರಯೋಜನಗಳು

—ಎಂ. ಕೆ. ಅಬ್ದುಲ್ ಖಾದಿರ್, ಕರುನಾಗಪಳ್ಳಿ.

ಇಸ್ಲಾಂ ವಿಧಿಸಿದ ಉತ್ಕೃಷ್ಟ ಕರ್ಮಾನುಷ್ಠಾನಗಳಲ್ಲಿ ಒಂದು ರಂಝಾನಿನ ವ್ರತಾನುಷ್ಠಾನವಾಗಿದೆ. ಎಲ್ಲಾ ಪ್ರೌಢ ಸ್ತ್ರೀ ಪುರುಷರಿಗೆ ವ್ರತಾನುಷ್ಠಾನ ಕಡ್ಡಾಯವಾಗಿದೆ. ರೋಗ, ಯಾತ್ರೆ ಮೊದಲಾದ ಪ್ರತಿಬಂಧವಿರುವವರಿಗೆ ಮಾತ್ರ ಇಸ್ಲಾಂ ಈ ಶಾಸನದಿಂದ ವಿನಾಯಿತಿಯನ್ನೀಯುತ್ತದೆ. ಅವರು ಸಹ, ಪ್ರತಿಕೂಲ ಪರಿಸ್ಥಿತಿ ನೀಗಲ್ಪಟ್ಟಾಗ, ಬಿಟ್ಟುಹೋದ ವ್ರತಗಳನ್ನು ಅನುಷ್ಠಿಸಬೇಕಾಗಿದೆ. ರೋಗ ಉಪಶಮನಗೊಂಡು ವ್ರತ ಅನುಷ್ಠಿಸಲು ಸಾಧ್ಯತೆ ಇಲ್ಲದವರು, ಸಾಮರ್ಥವಿದ್ದರೆ ಪ್ರತಿಯೊಂದು ಉಪವಾಸಕ್ಕೆ ಬದಲಾಗಿ ಒಬ್ಬ ನಿರ್ಗತಿಕನಿಗೆ ಭೋಜನವೀಯಬೇಕು. ಅನುಷ್ಠಿಸಲು ಸಾಧ್ಯವಾಗದುದಕ್ಕೆ ಪ್ರಾಯಶ್ಚಿತ್ತಮಾಡುವ ಸೌಲಭ್ಯ ವ್ರತಕ್ಕೆ ಮಾತ್ರವಿದೆ. ಇಸ್ಲಾಂ ಧರ್ಮದಲ್ಲಿ ವ್ರತಕ್ಕೆ ಎಷ್ಟು ಮಹತ್ವಾದ ಸ್ಥಾನವಿದೆಯೆಂದು ಈ ಪ್ರಾಯಶ್ಚಿತ್ತ ನಿಯಮವು ತಿಳಿಸಿಕೊಡುತ್ತದೆ.

ಇತರ ಧರ್ಮಗಳಲ್ಲೂ ವ್ರತವನ್ನನುಷ್ಠಿಸುವ ಆಜ್ಞೆ ಇದೆ. ಧರ್ಮ ಸಾಹಿತ್ಯಗಳನ್ನು ಪರಿಶೋಧಿಸಿದರೆ ವ್ರತಾನುಷ್ಠಾನಕ್ಕೆ ಸಂಬಂಧಿಸಿದ ಹಲವು ವಿಧಿಗಳನ್ನು ಕಾಣಬಹುದಾಗಿದೆ. ಹಾಗೆಯೇ ಎಲ್ಲಾ ಧರ್ಮಾನುಯಾಯಿಗಳಲ್ಲಿ ಒಂದು ವಿಭಾಗ ಯಾವುದಾದರೂ ರೀತಿಯಲ್ಲಿ ವ್ರತವನ್ನನುಷ್ಠಿತ್ತಿರುವುದನ್ನು ಕಾಣಬಹುದು. ವ್ರತಾನುಷ್ಠಾನವು ಏಕದೇವ ವಿಶ್ವಾಸದಂತೆಯೇ ಎಲ್ಲಾ ಧರ್ಮಗಳ ಒಂದು ಮೂಲ ಅಧ್ಯಾಪನವಾಗಿದೆಯೆಂದು ಮತಾನುಯಾಯಿಗಳ ಪ್ರಸ್ತುತ ಆಚರಣೆ ವ್ಯಕ್ತಗೊಳಿಸುತ್ತದೆ.

"ವ್ರತ ನನಗಾಗಿ; ಅದಕ್ಕೆ ಪ್ರತಿಫಲ ನೀಡುವವನು ನಾನು" ಎಂಬುದು ಅಲ್ಲಾಹುವಿನ ವಿಧಿವಾಕ್ಯವೆಂದು ಮುಹಮ್ಮದ್ ಪೈಗಂಬರರು ನುಡಿದಿರುವರು. ಆರಾಧನೆಗಳ ಪೈಕಿ ವ್ರತಾನುಷ್ಠಾನದೊಡನೆ ಅಲ್ಲಾಹುವಿಗೆ ಒಂದು ವಿಶಿಷ್ಟತರದ ಬಂಧವಿದೆಯೆಂದು ಇದರಿಂದ ತಿಳಿದುಬರುತ್ತದೆ. ಇದು ವ್ರತಾನುಷ್ಠಾನಕ್ಕಿರುವ ಒಂದು ವಿಶೇಷತೆಯಾಗಿದೆ.

ಪೂರ್ವಕಾಲದ ಎಲ್ಲಾ ಮಹಾತ್ಮರು ದೇವರ ವರ ಪ್ರಸಾದಕ್ಕೆ ಪಾತ್ರರಾಗುವುದಕ್ಕೆ ಮುಂಚಿತವಾಗಿಯೇ ವ್ರತವನ್ನನುಷ್ಠಿಸುತ್ತಿದ್ದರೆಂಬುದು ಐತಿಹಾಸಿಕ ಸತ್ಯವಾಗಿದೆ. ವ್ರತಾನುಷ್ಠಾನವು ಆತ್ಮೋನ್ನತಿಗಿರುವ ಒಂದು ಸೋಪಾನವೆಂದು ಅವರ ಈ ಚರಿತ್ರೆ ಸ್ಪಷ್ಟಪಡಿಸುತ್ತದೆ.

ವ್ರತಾನುಷ್ಠಾನದಿಂದ ಮನುಷ್ಯನಿಗೆ ಆಧ್ಯಾತ್ಮಿಕ ಪ್ರಯೋಜನಗಳು ಮಾತ್ರವಲ್ಲ ಕೆಲವು ಭೌತಿಕ ಪ್ರಯೋಜನಗಳೂ ಸಿದ್ಧಿಸುತ್ತವೆ. ಅದರಲ್ಲೊಂದು ಆರೋಗ್ಯಕ್ಕೆ ಸಂಬಂಧಿಸಿದುದು. ಮನುಷ್ಯ ಶರೀರದ ಒಂದು ಪ್ರಧಾನ ಅಂಗವಾದ ಪಚನೇಂದ್ರಿಯಕ್ಕೆ ಅಗತ್ಯವಿರುವ ವಿಶ್ರಾಂತಿ ಸಾಮಾನ್ಯವಾಗಿ ಲಭಿಸುವುದಿಲ್ಲ. ಒಮ್ಮೆ ತಿಂದ ತಿನಿಸು ಪಚನಗೊಳ್ಳುವ ಮೊದಲು ಪದೇ ಪದೇ ಹೊಟ್ಟೆತುಂಬಿಸುವುದರಿಂದಾಗಿ ಪಚನೇಂದ್ರಿಯಕ್ಕೆ ಶ್ರಮ ಹೆಚ್ಚುತ್ತದೆ.

ಕೆಲಸಗಾರನಿಗೆ ಆರೋಗ್ಯವನ್ನು ಕಾಪಾಡಲು ವಿರಾಮದ ಅಗತ್ಯವಿದೆ. ನಿಸರ್ಗವೇ ವಿಶ್ರಾಮದ ಆವಶ್ಯಕತೆಯನ್ನು ವ್ಯಕ್ತಗೊಳಿಸುತ್ತದೆ. ವಿರಾಮವಿಲ್ಲದೆ ದುಡಿಯುವವನಿಗೆ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುತ್ತದೆ. ಈ ತತ್ವವನ್ನನುಸರಿಸಿ ಕೆಲಸ ಮಾಡುವವರು ವಿಶ್ರಾಂತಿ ಪಡೆಯಲು ನಿರ್ಬಂಧಿತರಾಗುತ್ತಾರೆ. ಆದರೆ ಪಚನೇಂದ್ರಿಯಕ್ಕೆ ವಿರಾಮ ಲಭಿಸುವುದಿಲ್ಲ. ಅದರ ಗೊಡವೆಗೆ ಯಾರೂ ಹೋಗುವುದಿಲ್ಲ. ಈ ಕಾರಣದಿಂದ ಒಂದು ವಿಭಾಗ ಜನರು ಹಲವಿಧ ಅಸ್ವಸ್ಥತೆಗಳಿಗೆ ಗುರಿಯಾಗಿ ಕೊನೆಗೆ ಉದರರೋಗಿಗಳಾಗುತ್ತಾರೆ. ಈ ವಿಪತ್ತಿಗೆ ವ್ರತಾನುಷ್ಠಾನ ಒಂದು ಪರಿಹಾರವಾಗಿದೆ. ದಿನಾಲು ಸುಮಾರು ಹದಿನೈದು ಗಂಟೆಗಳ ಪ್ರಕಾರ ಒಂದು ತಿಂಗಳ ಕಾಲ ಪಚನೇಂದ್ರಿಯಕ್ಕೆ ಸಿಗುವ ಈ ವಿಶ್ರಾಂತಿಯ ಮೂಲಕ ಅದರ ನಷ್ಟಹೊಂದಿದ ಶಕ್ತಿಯನ್ನು ಪುನಃ ಪಡೆಯಲಿಕ್ಕೂ ರೋಗದಿಂದ ರಕ್ಷಣೆ ಪಡೆಯಲಿಕ್ಕೂ ಸಾಧ್ಯವಾಗುತ್ತದೆ. ಇದು ವ್ರತಾನುಷ್ಠಾನದಿಂದ ಶಾರೀರಿಕವಾಗಿ ಲಭ್ಯವಾಗುವ ಒಂದು ಅಮೂಲ್ಯ ಪ್ರಯೋಜನವಾಗಿದೆ.

ಅಗತ್ಯಕ್ಕೆ ಬೇಕಾದಷ್ಟು ಆಹಾರ ಸಿಗದಿರುವ ಪರಿಸ್ಥಿತಿಯಲ್ಲೂ ವ್ರತಾನುಷ್ಠಾನದಿಂದ ಪ್ರಯೋಜನವಿದೆ. ಕೃಷಿನಾಶ, ದಾರಿದ್ರ್ಯ, ದೂರಯಾತ್ರೆ, ವಿಷಮ ಪರಿಸ್ಥಿತಿ ಮೊದಲಾದ ಕಾರಣಗಳಿಂದ ಕೆಲವು ಬಾರಿ ಆಹಾರ ವಸ್ತುಗಳು ಬೇಕಾದಷ್ಟು ಸಿಗದೆಯೂ, ಸೇವಿಸಲು ಸಾಧ್ಯವಾಗದೆಯೂ ಇರುತ್ತದೆ. ಅಂತಹ ಸಂದರ್ಭಗಳಲ್ಲಿ ಕ್ರಮಪ್ರಕಾರ ಆಹಾರ ಸೇವಿಸಿ ಅಭ್ಯಾಸವುಳ್ಳವರು ತುಂಬಾ ಕಷ್ಟಕ್ಕೊಳಗಾಗುತ್ತಾರೆ. ತನ್ಮೂಲಕ ಕೆಲವು ಸರ್ತಿ ಅಂತಹವರಿಗೆ ಯಾವುದಾದರೂ ರೋಗ ಪೀಡಿಸಲಿಕ್ಕೂ ಸಾಕು. ಆದರೆ ರಂಝಾನಿನಲ್ಲಿ ಕ್ರಮಾನುಸಾರ ವ್ರತವನ್ನನುಷ್ಠಿಸಿ ಅಭ್ಯಾಸ ಮಾಡಿದವರಿಗೆ ಇದೊಂದು ಪ್ರಶ್ನೆ ಅಲ್ಲ. ಪ್ರತಿ ವರ್ಷ ವ್ಯತ್ಯಸ್ತ ಕಾಲದಲ್ಲಿ ರಂಝಾನ್ ಬರುತ್ತದೆ; ಒಮ್ಮೆ ಅತ್ಯುಷ್ಣ ಕಾಲದಲ್ಲಾದರೆ ಮತ್ತೊಮ್ಮೆ ಕಡುಚಳಿಗಾಲದಲ್ಲಾಗುತ್ತದೆ. ಈ ಕಾಲಾವಸ್ಥೆಗಳಲ್ಲೆಲ್ಲಾ ಮುಸ್ಲಿಮನು ವ್ರತವನ್ನನುಷ್ಠಿಸಬೇಕು; ಅನುಕೂಲ ಕಾಲಾವಸ್ಥೆಯಲ್ಲಿ ಮಾತ್ರ ಸಾಲದು. ಇದೇ ಕಾರಣದಿಂದ ಇಸ್ಲಾಂ ಧರ್ಮದ ವ್ರತಾನುಷ್ಠಾನಕ್ಕೆ ಚಂದ್ರಮಾಸವು ನಿಶ್ಚಯಿಸಲ್ಪಟ್ಟಿದೆ. ಈ ಮಾಸದಲ್ಲಿ ಕ್ರಮಪ್ರಕಾರ ವ್ರತ ಅನುಷ್ಠಿಸಿದವರಿಗೆ ಕೆಲವು ದಿವಸ ಅಥವಾ ಕೆಲವು ತಿಂಗಳು ಆಹಾರದ ಮಟ್ಟಿಗೆ ಪ್ರತಿಕೂಲ ಪರಿಸ್ಥಿತಿ ಉಂಟಾದರೂ ಏನೂ ಅನಿಷ್ಟ ಸಂಭವಿಸುವುದಿಲ್ಲ.

ವ್ರತಾನುಷ್ಠಾನದ ಮತ್ತೊಂದು ಪ್ರಯೋಜನ ಸ್ವಭಾವಸಂಸ್ಕರಣವಾಗಿದೆ. ವ್ರತಾನುಷ್ಠಾನಿ ಅನಾವಶ್ಯಕ ಮಾತನ್ನೂ ಪ್ರವೃತ್ತಿಯನ್ನೂ ತ್ಯಜಿಸಬೇಕು. ಯಾರಾದರೂ ಆತನನ್ನು ಆಕ್ಷೇಪಿಸಲಿಕ್ಕೋ ಬಯ್ಯಲಿಕ್ಕೋ ಬಂದರೆ ಸಹ ನಾನು ವ್ರತಾನುಷ್ಠಾನಿ ಎಂದು ಹೇಳಿ ಜಗಳದಿಂದ ದೂರವುಳಿಯಬೇಕು. ಅನಾವಶ್ಯಕ ಮಾತು ಮತ್ತು ಪ್ರವೃತ್ತಿ ಉಪೇಕ್ಷಿಸದವರು ಆಹಾರ ಪಾನೀಯಗಳನ್ನು ಉಪೇಕ್ಷಿಸುವುದರಿಂದ ಏನೂ ಫಲವಿಲ್ಲ. ಇದು ಮುಹಮ್ಮದ್ ಪೈಗಂಬರರು ಕಲಿಸಿದ ಪಾಠವಾಗಿದೆ. ಹೀಗೆ ಒಂದು ತಿಂಗಳ ಕಾಲವನ್ನು ಕಳೆಯುವ ವ್ರತಾನುಷ್ಠಾನಿಗೆ ಭಾವೀಕಾಲದಲ್ಲೂ ಇಂತಹ ಪ್ರವೃತ್ತಿಯಿಂದ ದೂರವುಳಿಯಲಿಕ್ಕೆ ಸಾಮರ್ಥ್ಯ ಉಂಟಾಗುತ್ತದೆ. ಹಾಗೆಯೇ ಕೆಲವರು ಹೊಗೆಬತ್ತಿ, ನಸ್ಯಸೇವನೆ, ವೀಳ್ಯ ಜಗಿಯುವುದು, ಮೊದಲಾದ ಚಟುಕ್ಕೆ ಬಲಿಯಾಗಿ ಕೊನೆಗೆ ಅದನ್ನು ತ್ಯಜಿಸಲಿಕ್ಕೆ ಸಾಧ್ಯವಾಗದೆ ತೊಂದರೆಗೊಳಗಾಗುತ್ತಾರೆ. ದಿನಾಲೂ ಹದಿನೈದು ಗಂಟೆಗಳಷ್ಟು ಒಂದು ತಿಂಗಳು ಅದನ್ನು ನಿಲ್ಲಿಸಬೇಕಾಗುವುದರಿಂದ ನಂತರ ಸಂಪೂರ್ಣ ತ್ಯಜಿಸಲಿಕ್ಕೆ ಸಾಮರ್ಥ್ಯ ಅವನಿಗುಂಟಾಗುತ್ತದೆ. ಹೀಗೆ ವ್ರತಾನುಷ್ಠಾನ ಸ್ವಭಾವಸಂಸ್ಕರಣಕ್ಕೆ ಸಹಾಯಕಾರಿಯಾಗಿದೆ.

ದರಿದ್ರಕುಟುಂಬಗಳ ಎಳೆಯ ಮಕ್ಕಳು ಹಸಿದು ಅಲ್ಪ ಗಂಜಿಗಾಗಿ ಹಾತೊರೆಯುತ್ತಿರುವ ಸಂಗತಿ, ಸದಾಕಾಲ ಮಿತಿಮೀರಿ ಆಹಾರ ಸೇವಿಸಿ ಹೊಟ್ಟೆ ಉಬ್ಬಿಸಿ ದಿನ ಕಳೆಯುವ ಧನಿಕನಿಗೆ ತಿಳಿಯುವುದಿಲ್ಲ. ಅಥವಾ ತಿಳಿದರೂ ಸಹ ದುಡಿದು ಸಂಪಾದಿಸಿದ ಧನವನ್ನು ವೃಥಾ ಅನ್ಯರಿಗೆ ಕೊಡಲಿಕ್ಕೆ ಅವನು ಇಚ್ಛಿಸುವುದಿಲ್ಲ. ಧನಿಕನ ಈ ಮನೋಭಾವವನ್ನು ಮಾರ್ಪಾಟು ಮಾಡಲಿಕ್ಕೆ ವ್ರತದಂತಹ ಗುಣಕಾರಿ ಬೇರೊಂದಿಲ್ಲ. ವ್ರತ ಅನುಷ್ಠಿಸುವ ಧನಿಕನು ಸ್ವಾನುಭವದಿಂದ ತನ್ನ ದರಿದ್ರ ಸಹೋದರರ ಹಸಿವಿನ ವಿಷಮತೆಯನ್ನು ಅರಿತುಕೊಳ್ಳಲಿಕ್ಕೂ ತನ್ನ ಸಾಮರ್ಥ್ಯವನ್ನನುಸರಿಸಿ ಅವರಿಗೆ ಸಹಾಯವನ್ನೀಯಲಿಕ್ಕೂ ಪ್ರಚೋದಿತನಾಗುತ್ತಾನೆ.

ಇಸ್ಲಾಮಿನ ಪ್ರಧಾನ ಕರ್ಮಾನುಷ್ಠಾನಗಳೆಲ್ಲಾ ಸಮತ್ವ ಹಾಗೂ ಸಹೋದರತೆಯಲ್ಲಿ ಅಧಿಷ್ಠಿತವಾಗಿವೆ. ವ್ರತ ಸಹ ಅದರಿಂದ ಭಿನ್ನವಾದುದಲ್ಲ. ವ್ರತಾನುಷ್ಠಾನದಿಂದ ಸಂಪನ್ನ ಹಾಗೂ ದರಿದ್ರರ ಮಧ್ಯೆ ಆಹಾರ ಪಾನೀಯ ಸಂಗತಿಗಳಲ್ಲಿ ಕೆಲವು ಸಮಯಕ್ಕಾದರೂ ಸಮತ್ವ ಉಂಟಾಗುತ್ತದೆ. ಹಸಿವಿನ ರುಚಿಯನ್ನು ಧನಿಕನು ಸ್ವಂತ ಅನುಭವದಿಂದ ಅರಿತುಕೊಳ್ಳುವನಾದರೆ, ಅವನು ಬಡವರಿಗೆ ಸಹಾಯ ನೀಡಿ ಅವರೆಡೆಯಲ್ಲಿ ಸಹೋದರತೆಯನ್ನು ಹೆಚ್ಚಿಸುತ್ತಾನೆ. ಹೀಗೆ ವ್ರತವು ಸಹ ಸಮುದಾಯದಲ್ಲಿ ಸಮತ್ವವನ್ನೂ ಸಹೋದರತೆಯನ್ನೂ ಕಾಪಾಡಲು ಉಪಕರಿಸುತ್ತದೆ.

ಆರೋಗ್ಯಕ್ಕೆ ಹಾನಿಕರವೆಂದು ಬಗೆದು ಆರೋಗ್ಯವಂತರಾದ ಹಲವರು ವ್ರತ ಅನುಷ್ಠಿಸುವುದಿಲ್ಲ; ರೋಗಿಗಳೂ ದುರ್ಬಲರೂ ಆದ ಜನರು ಭಕ್ತಿಯ ಹೆಸರಿನಲ್ಲಿ ವ್ರತ ಅನುಷ್ಠಿಸುತ್ತಾರೆ. ಈ ಎರಡು ಕ್ರಮಗಳೂ ಸರಿಯಲ್ಲ. "ಅಲ್ಲಾಹು ನಿಮಗೆ ಸುಲಭವನ್ನು ಇಚ್ಛಿಸುತ್ತಾನೆ; ಕಷ್ಟವನ್ನಲ್ಲ" ಮತ್ತು "ನೀವು ನಿಮ್ಮ ಶರೀರವನ್ನು ನಾಶದೆಡೆಗೆ ಕೊಂಡೊಯ್ಯದಿರಿ" ಎಂಬ ಪವಿತ್ರ ಖುರ್‌ಆನಿನ ಅಧ್ಯಾಪನಗಳಿಗೆ ಇದು ವಿರುದ್ಧವಾಗಿದೆ. ಆದುದರಿಂದ ರೋಗಿಗಳು ಉಪವಾಸವನ್ನು ಉಪೇಕ್ಷಿಸಬೇಕು: ಆರೋಗ್ಯವಂತರು ಅನುಷ್ಠಿಸಬೇಕು. ●

# ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ

ಇದು ಅಹ್ಮದಿಯಾ ಸಂಘಟನೆಯ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು 1924ರಲ್ಲಿ ಲಂಡನಿನ ವೆಂಬ್ಲೀ (Wembley) ನಗರದಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನಕ್ಕಾಗಿ ವಿರಚಿಸಿದ "ಟ್ರೂ ಇಸ್ಲಾಂ" ಎಂಬ ಉಪನ್ಯಾಸದ ಒಂದು ಚಿಕ್ಕ ಭಾಗವಾಗಿದೆ.

ಪರದಾ ಸಂಪ್ರದಾಯದ ತತ್ವವೇನೆಂದೂ ಅದರಿಂದ ಮನುಷ್ಯನಿಗೆ ಪ್ರಾಪ್ತವಾಗುವ ನೈತಿಕ ಗುಣಗಳೇನೆಂದೂ ತಿಳಿಯದೆ ಪರದಾ ಸಂಪ್ರದಾಯವನ್ನು ಟೀಕಿಸುವ ಆಧುನಿಕರಿಗೆ ಈ ಲೇಖನವು ಉತ್ತರ ರೂಪದಲ್ಲಿದೆ. —ಸಂ.

ಮನುಷ್ಯನ ನೈತಿಕ ಸ್ಥಿತಿಯನ್ನು ಉತ್ತಮಗೊಳಿಸಲು ಇಸ್ಲಾಂ ನಿರ್ದೇಶಿಸಿರುವ ಪದ್ಧತಿಗಳಲ್ಲಿ ಒಂದು, ಹೃದಯದಲ್ಲಿ ಪಾಪವಿಚಾರ ಹುಟ್ಟಲಿಕ್ಕೆ ಎಡೆಕೊಡುವ ಎಲ್ಲಾ ದಾರಿಗಳನ್ನು ಮುಚ್ಚುವುದಾಗಿದೆ. ಇಸ್ಲಾಂಮತ ಸಿದ್ಧಾಂತ ಪ್ರಕಾರ ಮನುಷ್ಯನ ಸ್ವಭಾವ ನಿರ್ದೋಷವೂ ಪರಿಶುದ್ಧವೂ ಆಗಿದೆ; ಪಾಪ ಹೊರಗಿನಿಂದ ಬಂದು ಸೇರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಳಿತನ್ನು ಪ್ರೀತಿಸುವ ಮತ್ತು ಕೆಡುಕನ್ನು ದ್ವೇಷಿಸುವ ಒಂದು ಅಂತರ್ಬೋಧ ಅಥವಾ ಅಂತಃಕರಣ ಮನುಷ್ಯನಿಗೆ ದೈವದತ್ತವಾದುದಾಗಿದೆ. ಜಾತಿ ಮತ ಬೇಧವಿಲ್ಲದೆ ಸಕಲರೂ ಈ ಶುದ್ಧವಾದ ಸ್ವಭಾವದಿಂದ ಕೂಡಿ ಜನಿಸುತ್ತಾರೆ. ಆದರೆ, ಈ ಅಂತರ್ಬೋಧ ಮಾತ್ರವೇ ಮನುಷ್ಯನನ್ನು ಪಾಪದಿಂದ ರಕ್ಷಿಸಲು ಪರ್ಯಾಪ್ತವಲ್ಲ. ಕಾರಣವೇನೆಂದರೆ ಅದು ಅವನೊಡನೆ ಒಳಿತನ್ನು ಮಾಡಲಿಕ್ಕೆ ಮತ್ತು ಕೆಡುಕನ್ನು ವರ್ಜಿಸಲಿಕ್ಕೆ ಮಾತ್ರವೇ ಹೇಳುತ್ತದೆ. ಒಳಿತು ಯಾವುದು ಕೆಡುಕು ಯಾವುದು ಎಂಬ ವ್ಯತ್ಯಾಸವನ್ನು ತೋರಿಸಿಕೊಡುವ ಕೆಲಸವನ್ನು ಮನುಷ್ಯನ ವಿವೇಕವು ಮಾಡುತ್ತದೆ. ಈ ಗುಣದೋಷ ವಿವೇಚನೆಗೆ ಇಂದ್ರಿಯಗಳ ಮುಖಾಂತರ ಮನುಷ್ಯನಿಗೆ ಸಿದ್ಧಿಸುವ ಅರಿವೇ ಆಧಾರ. ಆದುದರಿಂದ, ಈ ಬಾಹ್ಯಪ್ರೇರಣೆಗಳನ್ನು ಸ್ವೀಕರಿಸುವುದರಲ್ಲಿ ಅವನು ತಪ್ಪಿಬೀಳುವ ಪಕ್ಷದಲ್ಲಿ, ಒಂದು ಸಂಗತಿ ಒಳ್ಳೆಯದೋ ಕೆಟ್ಟದೋ ಎಂದು ವಿವೇಚಿಸುವ ವಿಷಯದಲ್ಲೂ ಅವನಿಗೆ ತಪ್ಪು ಸಂಭವಿಸುವುದೆಂಬುದು ಖಂಡಿತ. ಆಗ ಅವನ ಅಂತಃಬೋಧ ಅಥವಾ ಅಂತಃಕರಣ ಒಳ್ಳೆದನ್ನು ಕೆಟ್ಟದೆಂದೂ ಕೆಟ್ಟದನ್ನು ಒಳ್ಳೆದೆಂದೂ ತಪ್ಪಾಗಿ ತಿಳಿದು ಅದರ ಫಲವಾಗಿ ಸತ್ಕರ್ಮವನ್ನು ಆಕ್ಷೇಪಿಸಿ ದುಷ್ಕರ್ಮವನ್ನು ಪ್ರಶಂಸಿಸುತ್ತದೆ. ಆದ್ದರಿಂದ, ಮನುಷ್ಯನು ಸ್ವೀಕರಿಸುವ ಈ ಬಾಹ್ಯಪ್ರೇರಣೆಗಳನ್ನು ಇಲ್ಲವಾಗಿಸಬೇಕು ಅಥವಾ ತಡೆಯಬೇಕು. ಇದೇ ಪ್ರಕಾರವೇ ಮನುಷ್ಯನನ್ನು ದುಷ್ಕೃತ್ಯಡೆಗೆ ದೂಡಿಬಿಡುವ ವಿಕಾರ ವಿಲೋಭನಗಳ ಪ್ರೇರಣೆ ಸಹ ಹೊರಗಿನಿಂದ ಬಂದು ಸೇರುವುದರಿಂದ, ಅದನ್ನು ನಿವಾರಿಸಬೇಕಾದುದು ಅಗತ್ಯ. ಏಕೆಂದರೆ ಈ ಬಾಹ್ಯಪ್ರೇರಣೆಗಳನ್ನು ತಡೆಗಟ್ಟಿದರೆ ಮಾತ್ರ ಮನುಷ್ಯನಿಗೆ ಆತ್ಮನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಮದ್ಯಪಾನಮಾಡಿ ಅಭ್ಯಾಸವುಳ್ಳವನಿಗೆ ಇತರರು ಮದ್ಯಪಾನ ಮಾಡುವುದನ್ನು ಕಾಣುವಾಗ, ಅಥವಾ ಮದ್ಯ ಸೇವಿಸಲಿಕ್ಕೋ ಅದನ್ನು ಶೇಖರಿಸಿಡಲಿಕ್ಕೋ ಉಪಯೋಗಿಸುವ ಪಾತ್ರೆಗಳನ್ನು ಕಾಣುವಾಗ, ಅಥವಾ ಅವನು ದಿನಾಲು ಮದ್ಯಪಾನಮಾಡುವ ಸಮಯ ಬರುವಾಗ ವಿಕಾರಕ್ಕೆ ಅಧೀನನಾಗುತ್ತಾನೆ. ಇಂತಹ ಮನುಷ್ಯನನ್ನು ಮದ್ಯ ಸಿಕ್ಕುವ ಸ್ಥಳದಿಂದ ದೂರವಿರಿಸಿ ಮದ್ಯಪಾನದ ನೆನಪನ್ನುಂಟುಮಾಡುವ ವಸ್ತುಗಳು ಅವನ ಕಣ್ಣಮುಂದೆ ಬಾರದಂತೆ ಜಾಗ್ರತೆ ವಹಿಸಿದರೆ ಒಂದು ಕ್ಲಪ್ತಕಾಲದೊಳಗೆ ಅವನ ಈ ದುಶ್ಚಟ ಬಿಟ್ಟುಹೋಗಿ, ಆತ್ಮನಿಯಂತ್ರಣದ ಶಕ್ತಿ ಲಭಿಸುತ್ತದೆ.

ಈ ತತ್ವವನ್ನು ಮುಂದಿರಿಸಿ, ಪಾಪ ಅಥವಾ ಪಾಪವಿಚಾರ ಉಂಟಾಗುವ ಮಾರ್ಗಗಳನ್ನೆಲ್ಲಾ ಮುಚ್ಚಲು ಪರ್ಯಾಪ್ತವಾದ ನಿರ್ದೇಶಗಳನ್ನು ಇಸ್ಲಾಂ ನೀಡಿರುತ್ತದೆ. ಆದರೆ, ಲೋಕಕ್ಕೆ ಇಸ್ಲಾಂ ಹಲವು ವಿಧ ಒಳಿತುಗಳನ್ನು ನೀಡಿದ್ದರೂ ಸಹ, ಆ ಬಗ್ಗೆ ಲೋಕದ ಬಾಧ್ಯತೆಗಳನ್ನು ಇನ್ನೂ ಹೆಚ್ಚಿಸಲು ಮನೋತತ್ವ ಶಾಸ್ತ್ರಕ್ಕನುಸಾರವಾಗಿ

ರುವ ಈ ನಿರ್ದೇಶಗಳು ಜನರ ಆಕ್ಷೇಪಗಳಿಗೂ ಟೀಕೆಗಳಿಗೂ ಪಾತ್ರವಾಗಿವೆಯೆಂಬುದು ಆಶ್ಚರ್ಯಕರವಾಗಿದೆ. ಮಾತ್ರವಲ್ಲ ಸತ್ಯಾನ್ವೇಷಣ ತೃಷ್ಣೆಯೂ ತತ್ವಜ್ಞಾನ ತತ್ಪರತೆಯೂ ಉಳ್ಳವರು ಸಹ ಈ ನಿರ್ದೇಶಗಳ ನಿಜಾಂಶವನ್ನು ಗ್ರಹಿಸಲಿಲ್ಲವೆಂಬುದು ಇನ್ನೂ ವಿಸ್ಮಯಕರವಾಗಿದೆ. ಪಾಪ ಪ್ರೇರಕವಾದ ಮಾರ್ಗಗಳನ್ನು ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದ ಸಂಗತಿಗಳನ್ನೆಲ್ಲಾ ಇಲ್ಲಿ ವಿವರಿಸುವುದು ಕಷ್ಟಕರವಾದುದರಿಂದ ನಾನು ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಿವೆನು.

ಈ ನಿರ್ದೇಶಗಳಲ್ಲಿ ಪ್ರಥಮವಾಗಿ ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಶಾಸನಗಳ ಕುರಿತು ವಿವರಿಸುವೆನು. ಇಸ್ಲಾಂ ಇತರ ಮತಗಳಂತೆ "ವ್ಯಭಿಚರಿಸಬಾರದು" ಎಂದು ಮಾತ್ರವಲ್ಲ ಹೇಳುವುದು. ವ್ಯಭಿಚಾರ ನಿಂದನೀಯ ಪಾಪಕರ್ಮವೆಂಬ ಸಂಗತಿಯನ್ನು ಮಾತ್ರ ತಿಳಿಸುವುದಲ್ಲ ನಮ್ಮ ಆವಶ್ಯಕತೆ. ನಾವು ಈ ಪಾಪದಿಂದ ಸಂರಕ್ಷಣೆಯನ್ನು ಪಡೆಯುವುದು ಹೇಗೆಂದು ತಿಳಿಯಬೇಕಾಗಿದೆ. ಈ ಪ್ರಶ್ನೆಗೆ ಇಸ್ಲಾಂ ನೀಡುವ ಪರಿಹಾರ, ಈ ವಿಪತ್ತಿನ ಪ್ರವೇಶ ಮಾರ್ಗಗಳನ್ನು ಅಂದರೆ ನೋಟ, ಶ್ರವಣ ಮತ್ತು ಸ್ಪರ್ಶನದ ಮಾರ್ಗಗಳನ್ನು ನಿರೋಧಿಸುವುದರ ಮೂಲಕ ಅದರಿಂದ ರಕ್ಷಣೆಯನ್ನು ಪಡೆಯಬಹುದೆಂದಾಗಿದೆ. ಏಕೆಂದರೆ, ವ್ಯಭಿಚಾರಕ್ಕೆ ಪ್ರೇರಣೆ ಈ ಮಾರ್ಗಗಳ ಮೂಲಕ ಉಂಟಾಗುತ್ತದೆ. ಒಬ್ಬನು ಸೌಂದರ್ಯವನ್ನು ನೋಡಿದಾಗ, ಅದರ ವರ್ಣನೆಯನ್ನು ಕೇಳಿದಾಗ, ಅಥವಾ ಕರ್ಣಮಧುರವಾದ ರಾಗವನ್ನು ಶ್ರವಿಸಿದಾಗಯಾ ಮೃದುಲಕೋಮಲವಾದ ಶರೀರವನ್ನು ಸ್ಪರ್ಶಿಸಿದಾಗ, ಆ ಸೌಂದರ್ಯಕಾಂತಿಯಾಗಲಿ, ಅದರ ವರ್ಣನೆಯಾಗಲಿ, ಶಬ್ದಮಾಧುರ್ಯವಾಗಲಿ, ಶರೀರ ಮಾರ್ದವವಾಗಲಿ ಅವನಿಗೆ ಇಷ್ಟವೆಂದಾದರೆ ಅವನು ಆಕರ್ಷಿತನಾಗುತ್ತಾನೆ. ಅದರ ಫಲ ಸಮುದಾಯಕ್ಕೂ ಸದಾಚಾರ ಕರ್ಮಕ್ಕೂ ನಾಶಹೇತುಕವೆಂದು ಲೋಕವೆಲ್ಲಾ ಒಮ್ಮತವಾಗಿ ಆಕ್ಷೇಪಿಸುವ ಸಂಭವವಾಗಿದೆ. ಆದ್ದರಿಂದ ಈ ಪಾಪದ ಪ್ರವೇಶಮಾರ್ಗಗಳನ್ನೆಲ್ಲಾ ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವಿಶ್ವಾಸಿಗಳೊಡನೆ ಅವರ ನೋಟಗಳನ್ನು ಕೆಳಮುಖವಾಗಿರಿಸಲಿಕ್ಕೂ ದುಷ್ಟವಿಚಾರಗಳನ್ನು ಪ್ರವೇಶಿಸಲು ಎಡೆಯಿರುವ ಮಾರ್ಗಗಳನ್ನೆಲ್ಲಾ ಭದ್ರಪಡಿಸಲಿಕ್ಕೂ ಹೇಳು; ಇದು ಅವರ ಒಳಿತಿಗೆ ಕಾರಣವಾಗುವುದು; ಅವರು ವರ್ತಿಸುವುದನ್ನು ಅಲ್ಲಾಹು ಚೆನ್ನಾಗಿ ತಿಳಿಯುತ್ತಾನೆ. ಅದೇ ಪ್ರಕಾರ ವಿಶ್ವಾಸಿನಿಯರೊಡನೆಯೂ ಅವರ ನೋಟಗಳನ್ನು ಅಧೋಮುಖವಾಗಿರಿಸಲಿಕ್ಕೂ, ಪಾಪವಿಚಾರಗಳು ಬಂದುಸೇರುವ ಸಕಲ ಮಾರ್ಗಗಳನ್ನು ತಡೆಯಲಿಕ್ಕೂ ತಮ್ಮ ಸೌಂದರ್ಯವನ್ನು, ಸ್ವಯಂ ತೋರ್ಪಡುವ ಭಾಗದ ಹೊರತು, ಜನರಿಗೆ ತೋರಿಸದಿರಲಿಕ್ಕೂ ಹೇಳು. ಅವರು ತಮ್ಮ ಕುತ್ತಿಗೆಯನ್ನೂ ತಲೆಯನ್ನೂ ಮುಖವನ್ನೂ ವಸ್ತ್ರದಿಂದ ಮುಚ್ಚಲಿ. ತಮ್ಮ ಗಂಡಂದಿರಿಗೂ ಪಿತರಿಗೂ ಮಾವಂದಿರಿಗೂ ಸ್ವಪುತ್ರರಿಗೂ ಗಂಡನ ಪುತ್ರರಿಗೂ ಸಹೋದರರಿಗೂ ಸಹೋದರನ ಪುತ್ರರಿಗೂ ಸಹೋದರಿಯ ಪುತ್ರರಿಗೂ ತಮ್ಮ ಸ್ತ್ರೀಯರಿಗೂ ತಮ್ಮ ದಾಸರಿಗೂ, ಸ್ತ್ರೀಮೋಹವಿಲ್ಲದ ಹಾಗೂ ವೃದ್ಧರಾದ ಭೃತ್ಯರಿಗೂ ಲೈಂಗಿಕ ಬೋಧವಿಲ್ಲದ ಬಾಲಕರಿಗೂ ಹೊರತು ಬೇರಾರಿಗೂ ತಮ್ಮ ಸೌಂದರ್ಯವನ್ನು ಪ್ರದರ್ಶಿಸದಿರಲಿ; ಅವರು ತಮ್ಮ ಗುಪ್ತವಾಗಿರುವ ಸೌಂದರ್ಯವನ್ನು ತೋರ್ಪಡಿಸಲಿಕ್ಕಾಗಿ ಕಾಲುಗಳನ್ನು ಕುಣಿಸಿ ನಡೆಯಬಾರದು. ಎಲೈ ವಿಶ್ವಾಸಿಗಳೇ ನಿಮಗೆ ವಿಜಯ ಪ್ರಾಪ್ತವಾಗಲಿಕ್ಕಾಗಿ ನೀವೆಲ್ಲರೂ ಅಲ್ಲಾಹುವಿನೆಡೆಗೆ ತಿರುಗಿರಿ," (24: 30, 31)

ಈ ಪವಿತ್ರ ವಾಕ್ಯಗಳಲ್ಲಿ, ಪಾಪಕರ ವಿಚಾರಗಳು ಹೃದಯವನ್ನು ಪ್ರವೇಶಿಸಲು ಎಡೆಕೊಡುವ ಸಕಲ ಮಾರ್ಗಗಳನ್ನು ಸ್ತ್ರೀ–ಪುರುಷರು ಮುಚ್ಚಬೇಕೆಂದು ಆಜ್ಞಾಪಿಸಲಾಗಿದೆ. ಕಣ್ಣು ಆ ಮಾರ್ಗಗಳ ಪೈಕಿ ಒಂದಾದುದರಿಂದ ವಿಶ್ವಾಸಿಗಳು ಅವರ ನೋಟಗಳನ್ನು ಕೆಳಮುಖವಾಗಿರಿಸಲಿಕ್ಕೆ ವಿಧಿಸಲಾಗಿದೆ. ಇನ್ನೊಂದು ಮಾರ್ಗ ಕರ್ಣೇಂದ್ರಿಯವಾದುದರಿಂದ, ಸ್ತ್ರೀಯರು ಪುರುಷರ ಹಾಗೂ ಪುರುಷರು ಸ್ತ್ರೀಯರ ಮಧುರಗಾನಗಳನ್ನೂ ರಾಗ ವಿಶೇಷಗಳನ್ನೂ ಗಮನಿಸದಿರಲಿಕ್ಕೂ ಪರಸ್ಪರ ಶೃಂಗಾರ ಕಥೆಗಳನ್ನು ಶ್ರವಿಸದಿರಲಿಕ್ಕೂ ವಿಧಿಸಲಾಗಿದೆ. ಪಾಪ ಪ್ರೇರಣೆಗೆ ಮೂರನೆಯ ಮಾರ್ಗ ಸ್ಪರ್ಶನವಾದುದರಿಂದ ನ್ಯಾಯೋಚಿತ ಅಗತ್ಯ ಮತ್ತು ಕಾರಣದ ಹೊರತು ಸ್ತ್ರೀಪುರುಷರು ಪರಸ್ಪರ ಸ್ಪರ್ಶಿಸಬಾರದೆಂದು ವಿರೋಧಿಸಲಾಗಿದೆ. ಸ್ತ್ರೀ-ಪುರುಷರು ಆವಶ್ಯಾರ್ಥ ಒಟ್ಟುಗೂಡುವ ರಸ್ತೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ನೋಟವನ್ನು ಕೆಳಮುಖವಾಗಿರಿಸು

ವುದು ಕಷ್ಟಕರವಾದುದರಿಂದ, ಸ್ತ್ರೀಯರೊಡನೆ ಅವರು ಹೊರಗೆ ಇಳಿಯುವಾಗ ಎದೆಯನ್ನೂ ಮುಖವನ್ನೂ, ಅಂದರೆ ಅವರ ಕುತ್ತಿಗೆಯನ್ನೂ ತಲೆಯನ್ನೂ ಅವರಿಗೆ ನೋಡಲಿಕ್ಕೆ ಮತ್ತು ಉಸಿರಾಡಲಿಕ್ಕೆ ಅಗತ್ಯವಿರುವ ಭಾಗ ಹೊರತು ಮುಖದ ಬಾಕಿ ಭಾಗವನ್ನೂ ಮರೆಯಾಗಿ ರಿಸಬೇಕೆಂದು ಸಹ ವಿಧಿಸಲಾಗಿದೆ.

ಅತ್ಯಂತ ವಿವೇಕಯುತವಾದ ಈ ನಿರ್ದೇಶಗಳ ಕುರಿತು ನಿಷ್ಪಕ್ಷವಾಗಿಯೂ ಸ್ವತಂತ್ರವಾಗಿಯೂ ಚಿಂತನೆ ಮಾಡುವ ಯಾರಿಗೂ ಅವುಗಳ ಮಹತ್ವವನ್ನು ಸಮ್ಮತಿಸ ದಿರಲಿಕ್ಕೆ ನಿರ್ವಾಹವಿಲ್ಲ. ಏಕೆಂದರೆ, ಅವು ಲೈಂಗಿಕವಾದ ಸಕಲ ದುರ್ವಿಕಾರಗಳನ್ನೂ ಪಾಪಗಳನ್ನೂ ನಿವಾರಿಸಲು ಪರ್ಯಾಪ್ತವಾಗಿವೆ.

ಸ್ತ್ರೀಯರು ಮನೆಯೊಳಗೆ ನಾಲ್ಕು ಗೋಡೆಗಳ ಮಧ್ಯೆ ಅಡಗಿರಬೇಕೆಂದು ಇಸ್ಲಾಂ ಉಪದೇಶಿಸುವುದಿಲ್ಲ. ಇಸ್ಲಾಂ ಧರ್ಮದ ಪ್ರಾರಂಭದಲ್ಲಿ ಮುಸ್ಲಿಂ ಸ್ತ್ರೀಯರು ಹಾಗೆ ಆಚರಿಸಿರಲಿಲ್ಲ. ಅವರು ಪುರುಷರೊಂದಿಗೆ ಯುದ್ಧ ಕಣಕ್ಕೆ ಹೋಗುತ್ತಿದ್ದರು. ಗಾಯಗೊಂಡವರಿಗೂ ರೋಗಿ ಗಳಿಗೂ ಶುಶ್ರೂಷೆ ಮಾಡುತ್ತಿದ್ದರು. ಸವಾರಿ ಮಾಡು ತ್ತಿದ್ದರು. ಪುರುಷರಿಂದ ಕಲೆ, ವಿಜ್ಞಾನಗಳನ್ನು ಕಲಿಯು ತ್ತಿದ್ದರು; ಇತರ ಪುರುಷರಿಗೆ ಅದನ್ನು ಕಲಿಸುತ್ತಿದ್ದರು. ಸಂಕ್ಷಿಪ್ತವಾಗಿ ಅವರಿಗೆ ಪ್ರವೃತ್ತಿಯಲ್ಲಿ ಪೂರ್ಣ ಸ್ವಾತಂತ್ರ್ಯ ವನ್ನು ಅನುಭವಿಸಲು ಸಾಧ್ಯವಾಗಿತ್ತು. ಅವರಿಗೆ ಇದ್ದ ಆಜ್ಞೆ, ಪಾಪವಿಚಾರಗಳು ಬಂದುಸೇರಲು ಎಡೆಕೊಡುವ ಎಲ್ಲಾ ದಾರಿಗಳನ್ನು ವಿರೋಧಿಸಲಿಕ್ಕಾಗಿ ಅವರು ಹೊರ ಗಿಳಿಯುವಾಗ ಅವರ ಕುತ್ತಿಗೆಯನ್ನೂ ತಲೆಯನ್ನೂ ಮುಖ ವನ್ನೂ ಮರೆಯಾಗಿರಬೇಕು ಅಥವಾ ಮುಸುಕು ಧರಿಸ ಬೇಕೆಂದಾಗಿತ್ತು. ಹಾಗಲ್ಲದೆ, ಅವರು ಮನೆಯೊಳಗೆ ಅಡಗಿರಬೇಕೆಂದೋ ವೈಜ್ಞಾನಿಕ ಕಾರ್ಯಗಳಿಂದೆಲ್ಲಾ ದೂರವಿರಬೇಕೆಂದೋ ಇಸ್ಲಾಂ ಉಪದೇಶಿಸುವುದಿಲ್ಲ. ಅಂತಹ ಸಂಪ್ರದಾಯ ಉತ್ತರಕಾಲದಲ್ಲಿ ರಾಜಕೀಯ ಕಾರಣಗಳನ್ನು ಆಧಾರವಾಗಿರಿಸಿ ಆಚರಿಸಿಕೊಂಡು ಬಂದ ದ್ದಾಗಿದೆ. ಕೆಲವು ರಾಜ್ಯಗಳಲ್ಲಿ ಸ್ತ್ರೀಯರ ಚಾರಿತ್ರ್ಯದ ಬೆಲೆ ಕೆಲವೇ ನಾಣ್ಯಗಳಿಂದ ಗಣಿಸಲ್ಪಟ್ಟಿತೆಂಬುದು ಸ್ತ್ರೀ ತ್ವದೊಡನೆ ತೋರಿಸಿದ ದೊಡ್ಡ ಧಿಕ್ಕಾರವೂ ನಿಂದ್ಯೆಯೂ ಆಗಿರುವುದರಿಂದ, ಅಂತಹ ರಾಜ್ಯಗಳಲ್ಲಿ ಮುಸ್ಲಿಮರು ಸ್ತ್ರೀಯರ ಮಾನವನ್ನೂ ಚಾರಿತ್ರ್ಯವನ್ನೂ ಸಂರಕ್ಷಿಸಲಿಕ್ಕೆ ಇಂತಹ ನಿಬಂಧನೆಗಳನ್ನು ಸ್ವಯಂ ಸ್ವೀಕರಿಸಿದರು. ಆದರೆ ಈ ಪದ್ಧತಿಯನ್ನು ಮತ ನಿರ್ದೇಶಿಸಲಿಲ್ಲ.

ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಪ್ರಸ್ತುತ ನಿರ್ದೇಶಗಳು ಸ್ತ್ರೀಯರಿಗೆ ಅಪಮಾನಕರವೆಂದು ಕೆಲವರು ತಿಳಿದುಕೊಳ್ಳುವುದರ ಕುರಿತು ನನಗೆ ಆಶ್ಚರ್ಯವಾಗುತ್ತದೆ. ಸ್ತ್ರೀಯರು ತಲೆಯನ್ನೂ ಮುಖವನ್ನೂ ಮರೆಯಾಗಿರ ಬೇಕೆಂದು ಇರುವುದೇಕೆಂದರೆ, ಇದು ಜನನಿಬಿಡವಾದ ಸ್ಥಳಗಳಲ್ಲಿಯೂ ರಾಜಬೀದಿಗಳಲ್ಲಿಯೂ ಪುರುಷರು ನೋಟವನ್ನು ಕೆಳಭಾಗಕ್ಕೆ ಮಾಡುವ ಆವಶ್ಯಕತೆಯನ್ನು ಪರಿಹರಿಸುವ ಒಂದು ಏರ್ಪಾಡಾಗಿದೆ. ಪ್ರಥಮವೂ ಪ್ರಧಾನವೂ ಆದ ಆಜ್ಞೆ, ನೋಟವನ್ನು ಕೆಳಮುಖ ಮಾಡು ವುದಾಗಿದೆ. ಇದು ಸ್ತ್ರೀಪುರುಷರಿಗೆ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ಈ ಆಜ್ಞೆ ಅಪಮಾನಕರವೆಂದಾದರೆ, ಅದು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಅಪಮಾನ ಕರವಾಗಿರಬೇಕಾಗುತ್ತದೆ. ಆದರೆ ಸ್ತ್ರೀಯರೊಡನೆ ಮುಖ ವನ್ನು ಮರೆಯಾಗಿರಿಸಲು ಹೇಳಿ ಪುರುಷರೊಡನೆ ಹಾಗೆ ಹೇಳದಿರಲಿಕ್ಕೆ ಕಾರಣವೇನೆಂದು ಇಲ್ಲಿ ಪ್ರಶ್ನೆಯೇಳಬಹು ದು. ಅದಕ್ಕೆ ಉತ್ತರ ಈ ರೀತಿಯಾಗಿದೆ: ಇಸ್ಲಾಂ ಧರ್ಮ ಸ್ತ್ರೀಯರ ಮತ್ತು ಪುರುಷರ ಪ್ರವರ್ತನ ರಂಗಗಳು ಬೇರೆಬೇರೆಯೆಂದು ಕಲಿಸುತ್ತದೆ. ಸ್ತ್ರೀಯರ ಪ್ರಥಮ ಹಾಗೂ ಪ್ರಧಾನ ಕರ್ತವ್ಯ ಮುಂದಿನ ಪೀಳಿಗೆಯ ಪಾಲನೆ ಪೋಷಣೆ ಮತ್ತು ಶಿಕ್ಷಣಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಾಗಿದೆ. ಆದರೆ, ಅವರಿಗೆ ಜೀವನೋಪಾಯ ಗಳನ್ನು ಒದಗಿಸಿ ಕೊಡುವುದು ಪುರುಷರ ಧರ್ಮ. ಪುರು ಷರಿಗೆ ಈ ಧರ್ಮನಿರ್ವಹಣೆಗಾಗಿ ತಮ್ಮ ಹೆಚ್ಚಿನ ಸಮಯ ವನ್ನು ಮನೆಯಿಂದ ಹೊರಗೆ ವ್ಯಯಿಸಬೇಕಾಗಿದೆ. ಹಾಗೆ ಪುರುಷರ ಪ್ರವೃತ್ತಿರಂಗ ರಸ್ತೆಗಳೂ ಸಾರ್ವಜನಿಕ ಸ್ಥಳ ಗಳೂ ಆಗಿರುವಾಗ ಸ್ತ್ರೀಯರದು ಸ್ವಂತ ಮನೆಯಾಗಿದೆ. ಇಸ್ಲಾಂ ಮತ ಪ್ರತಿಯೋರ್ವರಿಗೆ ಅವರವರ ಪ್ರವೃತ್ತಿ ರಂಗಗಳಲ್ಲಿ ಸ್ವಾತಂತ್ರ್ಯ ನೀಡಿ, ಇತರರ ಪ್ರವೃತ್ತಿರಂಗ ಗಳಲ್ಲಿ ಆ ಸ್ವಾತಂತ್ರ್ಯಕ್ಕೆ ಒಂದು ಪರಿಮಿತಿಯನ್ನು ನಿಶ್ಚಯಿ ಸಿದೆ. ಪುರುಷರು ಅನ್ಯಗ್ರಹವನ್ನು ಪ್ರವೇಶಿಸುವಾಗ ಆ ಮನೆಯವರೊಡನೆ ಪ್ರಥಮವಾಗಿ ಒಪ್ಪಿಗೆಯನ್ನು

(12ನೇ ಪುಟಕ್ಕೆ)

# ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲ-

## ಲಂಡನಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

ಜೂನ್ 2ರಿಂದ 4ರ ವರೆಗೆ ಇಂಗ್ಲೆಂಡಿನ ಅಹ್ಮದಿಯಾ ಸಂಘಟನೆಯ ವತಿಯಿಂದ "ಶಿಲುಬೆಯಿಂದ ಯೇಸುವಿನ ವಿಮೋಚನೆ" ಎಂಬ ವಿಷಯದಲ್ಲಿ ಒಂದು ಅಂತಾರಾಷ್ಟ್ರೀಯ ಸಮ್ಮೇಳನ ಲಂಡನಿನ ಕೋಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ಜರಗಿತು.

ಪ್ರಾಚ್ಯವಸ್ತು ಸಂಶೋಧಕರನ್ನೂ ವಿದ್ವಾಂಸರನ್ನೂ ಪೌರ್ವಾತ್ಯ ಭಾಷಾತಜ್ಞರನ್ನೂ ಪಂಡಿತಾಚಾರ್ಯರನ್ನೂ ಈ ಸಮ್ಮೇಳನ ಒಂದುಗೂಡಿಸಿತು. ಜಗತ್ತಿನಾದ್ಯಂತ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದರು. ಬ್ರಿಟನಿನ ಕೆಥೋಲಿಕ್ ಚರ್ಚಿನ ಮುಖಂಡ ಕಾರ್ಡಿನಲ್ ಹ್ಯೂಮ್ ತನ್ನೋರ್ವ ನಿರೀಕ್ಷಕನನ್ನು ಈ ಸಮ್ಮೇಳನಕ್ಕೆ ಕಳುಹಿಸಿದರು. ಪೋಲೆಂಡಿನ ಕೆಥೊಲಿಕ್ ಚರ್ಚ್ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಿತು. ಆಂಗ್ಲಿಕನ್ ಚರ್ಚಿನ ಹಲವಾರು ಬಿಷಪರು ಶುಭಾಶಯಗಳನ್ನು ಕಳುಹಿಸಿದರು. ಮೊರೀಷಸ್, ಲೈಬೀರಿಯಾ, ಘಾನಾ ಮತ್ತು ಗಾಂಬಿಯಾದ ಹೈಕಮಿಷನರುಗಳು ಸಹ ಈ ಸಮ್ಮೇಳನದಲ್ಲಿ ಭಾಗವಹಿಸಿದರು.

ಸಮ್ಮೇಳನದ ಪ್ರಥಮದಿನ ಲಂಡನ್ ಮಸೀದಿಯ ಇಮಾಮರಾದ ಬಶೀರ್ ಅಹ್ಮದ್ ರಫೀಕ್‌ರವರು ಪ್ರಪಂಚದಾದ್ಯಂತ ಆಗಮಿಸಿದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಸಮ್ಮೇಳನದ ಉದ್ದೇಶವನ್ನು ಈ ರೀತಿ ವ್ಯಕ್ತಗೊಳಿಸಿದರು: "ಈ ಸಮ್ಮೇಳನದ ಏಕಮಾತ್ರ ಉದ್ದೇಶ ಯಥಾರ್ಥ ಯೇಸುಕ್ರಿಸ್ತರ ಕುರಿತು ನಮ್ಮ ನಂಬಿಕೆಯನ್ನು ವರ್ಧಿಸುವುದಾಗಿದೆ".

ಈ ಸಮ್ಮೇಳನವನ್ನು ಚೌಧರಿ ಸರ್ ಮುಹಮ್ಮದ್ ಝಫರುಲ್ಲಾ ಖಾನರು (ಹೇಗ್‌ನಲ್ಲಿರುವ ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ) ಉದ್ಘಾಟಿಸುತ್ತಾ ಈ ರೀತಿ ಹೇಳಿದರು: "ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿರುವರೋ ಇಲ್ಲವೋ ಎಂಬ ಸಂಗತಿ ಪ್ರಪಂಚದಾದ್ಯಂತ ತುಂಬಾ ಗಮನ ಸೆಳೆಯಬಹುದಾದರೂ ಮುಸ್ಲಿಮರಿಗೆ ಈ ಸಂಗತಿಯ ಕುರಿತು ಇಷ್ಟೊಂದು ಆಸಕ್ತಿಯೇಕೆ? ಅಹ್ಮದಿಯಾ ಮುಸ್ಲಿಮರು ಈ ಕುರಿತು ಸಮ್ಮೇಳನವನ್ನೇಕೆ ಕರೆಯಬೇಕು? ಎಂಬ ಸಂಗತಿ ಕೆಲವರಿಗೆ ಮನದಟ್ಟಾಗಿಲ್ಲ. ಕ್ರೈಸ್ತಮತಸ್ಥರೂ ಯಹೂದಿಗಳೂ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣಹೊಂದಿದ ಕುರಿತು ವ್ಯತ್ಯಸ್ಥವಾದ ಮತ್ತು ತಪ್ಪಾದ ಅಭಿಪ್ರಾಯಗಳನ್ನು ಹೊಂದಿರುವರು. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿಲ್ಲವೆಂದು ಮುಸ್ಲಿಮರು ಯಾವಾಗಲೂ ನಂಬುತ್ತಾ ಬಂದಿದ್ದರು. ಆದರೆ ಇತ್ತೀಚೆಗೆ ಸಂಪ್ರದಾಯವಾದಿಗಳಾದ ಮುಸ್ಲಿಮರು, ವಸಾಹತುಶಾಹಿ ಆಡಳಿತೆಗಳಿಗೆ ಪಾತ್ರರಾದ ನಂತರ ಯೇಸುಕ್ರಿಸ್ತರು ಸ್ಥೂಲಶರೀರದೊಂದಿಗೆ ಆಕಾಶಾರೋಹಣ ಗೈದರೆಂದೂ ಸ್ಥೂಲ ಶರೀರದೊಂದಿಗೆ ಇನ್ನೊಮ್ಮೆ ಹಿಂತಿರುಗಿ ಬರುವರೆಂದೂ ನಂಬಲು ತೊಡಗಿದರು. ಈ ರೀತಿಯ ತಪ್ಪಾದ ನಂಬಿಕೆಗಳನ್ನು ನಿರ್ಮೂಲಗೊಳಿಸಲಿಕ್ಕಾಗಿ ಮತ್ತು ಇಸ್ಲಾಮಿನ ಯಥಾರ್ಥ ತತ್ವಗಳನ್ನು ಪುನರುಜ್ಜೀವನಗೊಳಿಸಲಿಕ್ಕಾಗಿ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು ಯೇಸುಕ್ರಿಸ್ತರು ಶಿಲುಬೆಯ ಶಾಪಗ್ರಸ್ತ ಮರಣದಿಂದ ವಿಮೋಚಿತರಾಗಿ ಪೂರ್ವಾಭಿಮುಖರಾಗಿ ಪ್ರಯಾಣಿಸಿ ಕೊನೆಗೆ ವೃದ್ಧಾಪ್ಯದಲ್ಲಿ ಕಾಶ್ಮೀರದಲ್ಲಿ ಮೃತರಾದ ಕುರಿತು ಬೋಧಿಸಿದರು. ಯೇಸುಕ್ರಿಸ್ತರು ಸ್ವಶರೀರದೊಂದಿಗೆ ಇನ್ನೆಂದಿಗೂ ಹಿಂದಿರುಗಲಾರದೆಂದೂ ಅವರ ಪುನರಾಗಮನ ಆತ್ಮಸಂಬಂಧವಾಗಿರುವುದೆಂದೂ ತಾನು ಯೇಸುಕ್ರಿಸ್ತರ ಪುನರಾಗಮನದ ಪ್ರತೀಕವೆಂದೂ ಸಾರಿದರು. ಯಾವ ನಂಬಿಕೆ ಸತ್ಯವಾಗಿದೆ? ಇದೇ ಈಗಿನ ಪ್ರಶ್ನೆಯಾಗಿದೆ. ಇದಕ್ಕೊಂದು ಉತ್ತರವನ್ನು ಕಂಡುಹಿಡಿಯುವುದಕ್ಕಾಗಿ ಈ ಸಮ್ಮೇಳನವನ್ನು ಕರೆಯಲಾಗಿದೆ.......ಸತ್ಯವನ್ನು ಕಂಡುಹಿಡಿಯುವುದಕ್ಕಾಗಿ ಮಾನವ ಸೇವೆಯ ದೃಷ್ಟಿಯಿಂದ ಅಹ್ಮದಿಯಾ ಸಂಘಟನೆಯು ಈ ಸಮ್ಮೇಳನವನ್ನು ಏರ್ಪಡಿಸಿದೆ."

ಅನಂತರ ಕಾಶ್ಮೀರ ಸರಕಾರದ ಪ್ರಾಕ್ತನ ಸಂಶೋಧನ ವಿಭಾಗದ ಪ್ರೊಫೆಸರ್ F. M. ಹಸನೈನ್‌ರವರು

ತನಗೆ ಸಮ್ಮೇಳನದಲ್ಲಿ ಭಾಗವಹಿಸಲು ಅನಿವಾರ್ಯ ಕಾರಣದಿಂದ ಸಾಧ್ಯವಾಗದುದರಿಂದ ತಾನು ಬರೆದು ಕಳುಹಿಸಿದ ಭಾಷಣವನ್ನು ಪಾಕಿಸ್ತಾನದ ರಿಟಾಯರ್ಡ್ ಏರ್ ಮಾರ್ಶಲ್ ಝಫರ್ ಅಹ್ಮದ್ ಚೌಧರಿ ಓದಿದರು. ಶ್ರೀನಗರದ ಖಾನ್‌ಯಾರ್‌ನಲ್ಲಿರುವ "ರೌಝಾಬಾಲ್'' ಸಮಾಧಿ ಯೇಸುಕ್ರಿಸ್ತರ ಸಮಾಧಿ ಎಂಬುದಕ್ಕೆ ಹಲವಾರು ರುಜುವಾತುಗಳನ್ನು ಆ ಭಾಷಣದಲ್ಲಿ ಸ್ಪಷ್ಟಪಡಿಸಲಾಗಿದೆ. ಹಲವಾರು ಪುರಾತನ ದಾಖಲೆ ಪತ್ರಗಳ ಮತ್ತು ಭವಿಷ್ಯ ಮಹಾಪುರಾಣದ ಆಧಾರವನ್ನು ಆ ಭಾಷಣದಲ್ಲಿ ವ್ಯಕ್ತಗೊಳಿಸಲಾಗಿದೆ.

ಆಮೇಲೆ ''ಯೇಸುಕ್ರಿಸ್ತರು ಕಾಶ್ಮೀರದಲ್ಲಿ ಮೃತರಾಗಿರುವರು'' (Jesus Died in Kashmir) ಎಂಬ ಗ್ರಂಥದ ಲೇಖಕರಾದ ಜರ್ಮನಿಯ ವಿದ್ವಾಂಸ ಏಂಡ್ರಿಯಸ್ ಫೇಬರ್ ಕೈಸರ್ "ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ'' ಎಂಬ ವಿಷಯದ ಕುರಿತು ಭಾಷಣ ಮಾಡಿದರು. ಯೇಸುಕ್ರಿಸ್ತರು ಶಿಲುಬೆಗೇರಿಸಲ್ಪಟ್ಟಾಗ ನಡೆದ ಸಂಭವಗಳು, ಅವರ ದೇಹವನ್ನು ಸಂಸ್ಕಾರಗೈದ ರೀತಿ ಅವರು ಶಿಲುಬೆಯಲ್ಲಿ ಮೃತರಾಗಿಲ್ಲವೆಂಬುದನ್ನು ಸ್ಪಷ್ಟಗೊಳಿಸುತ್ತವೆಯೆಂದು ಅವರು ಹೇಳಿದರು. ಟ್ಯೂರಿನಿನಲ್ಲಿರುವ "ಪವಿತ್ರ ಶವವಸ್ತ್ರ" (The Holy Shroud)ದ ಕುರಿತು ನಡೆಸಿದ ವೈಜ್ಞಾನಿಕ ಪರೀಕ್ಷೆಗಳು ಇದನ್ನು ಸಮರ್ಥಿಸುತ್ತವೆಯೆಂದು ಸಹ ಅವರು ಹೇಳಿದರು. 1976ರಲ್ಲಿ ಶವವಸ್ತ್ರದ ಸಂಶೋಧನೆಯ ಕೊನೆಯಲ್ಲಿ ಹೊರಡಿಸಲಾದ ಪ್ರಕಟಣೆಯಲ್ಲಿ ಈ ರೀತಿ ಬರೆಯಲಾಗಿದೆ: "ಯೇಸುಕ್ರಿಸ್ತರ ಶರೀರವನ್ನು ಸುತ್ತಿದ ಶವವಸ್ತ್ರವನ್ನು ಏಳು ವರ್ಷಗಳಷ್ಟು ಕಾಲ ಪರಿಶೋಧಿಸಿದ ನಂತರ ವಿಜ್ಞಾನಿಗಳು 'ಯೇಸುಕ್ರಿಸ್ತರು ಸಜೀವರಾಗಿದ್ದಾಗಲೇ ಅವರನ್ನು ಈ ವಸ್ತ್ರ ಹೊದಿಸಿ ಸಮಾಧಿಯಲ್ಲಿಡಲಾಯಿತು' ಎಂದು ತೀರ್ಮಾನಿಸಿರುವರು". ತಾನಿದ್ದ ದೇಶದಲ್ಲಿ ವೈರಿಗಳ ಕೈಗೆ ಸಿಕ್ಕದಂತೆ ಪಾರಾಗುವುದಲ್ಲದೆ ಇನ್ನೊಂದು ಉದ್ದೇಶದಿಂದ ಸಹ ಯೇಸುಕ್ರಿಸ್ತರು ಪೂರ್ವಾಭಿಮುಖರಾಗಿ ಪ್ರಯಾಣಿಸಿದರು. ಇಸ್ರಾಯೆಲ್ ಮನೆತನದ ಕಳೆದು ಹೋದ ಗೋತ್ರಗಳನ್ನು ಕಂಡುಹಿಡಿದು ಬೋಧಿಸುವುದು ಯೇಸುಕ್ರಿಸ್ತರ ಆಗಮನೋದ್ದೇಶವಾಗಿತ್ತು. ಈ ಉದ್ದೇಶವನ್ನು ಪೂರ್ತಿಗೊಳಿಸಲಿಕ್ಕಾಗಿ ಅವರು ಪೂರ್ವ ದೇಶಗಳ ಕಡೆಗೆ ಪ್ರಯಾಣಿಸಿ ಕೊನೆಗೆ ಕಾಶ್ಮೀರವನ್ನು ತಲುಪಿದರು.

ಆದರೆ ಅತ್ಯಂತ ಖಚಿತವಾದ ಸಾಕ್ಷ್ಯ ಶ್ರೀನಗರದ ಸಮಾಧಿಯಡಿಯಲ್ಲಿ ಇರಬಹುದು. ಈ ಸಾಕ್ಷ್ಯ ದೊರೆಯುವ ತನಕ ತಾನು ನಿರಂತರ ಪರಿಶ್ರಮಿಸುವೆನೆಂದು ಅವರು ಹೇಳಿದರು. ಅವರು ಕಾಶ್ಮೀರದಲ್ಲಿರುವ ಯೇಸು ಕ್ರಿಸ್ತರ ಸಮಾಧಿ ಮತ್ತು ಕಾಶ್ಮೀರಿ ಜನರ ಚಿತ್ರಗಳಿರುವ ಸ್ಲೈಡುಗಳನ್ನು ಪ್ರದರ್ಶಿಸಿ ಕಾಶ್ಮೀರಿಗಳಿಗೂ ಯಹೂದಿಗಳಿಗೂ ಶಾರೀರಿಕವಾಗಿ ಕಾಣುವ ಸ್ಪಷ್ಟ ಹೋಲಿಕೆಯನ್ನು ವ್ಯಕ್ತಗೊಳಿಸಿದರು.

ಸಮ್ಮೇಳನದ ಪ್ರಥಮ ದಿನದ ಕೊನೆಯ ಭಾಷಣ ಝೆಕೋಸ್ಲೊವಾಕಿಯಾದ ಡಾಕ್ಟರ್ ಲ್ಯಾಡಿಸ್ಲಾವ್ ಫಿಲಿಪ್ ಅವರದ್ದಾಗಿತ್ತು. ಕ್ರಿ. ಶ. 35ನೆಯ ಇಸವಿಯ ನಂತರ ಯೇಸುಕ್ರಿಸ್ತರು ಜೀವಿಸಿದ್ದರೆಂದು ನಾವು ಸಾಕ್ಷ್ಯಾಧಾರಗಳನ್ನು ಒದಗಿಸಬಲ್ಲೆವಾದರೆ, ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲವೆಂದು ವ್ಯಕ್ತವಾಗುವುದೆಂದೂ ಮೆಸಪೊಟೇಮಿಯಯವನ್ನು ಸಂದರ್ಶಿಸಿದ ಒಬ್ಬ ಪ್ರವಾಸಿಯ ಕುರಿತು ಪ್ರಚಾರಗೊಂಡಿರುವ ಕೆಲವು ಐತಿಹ್ಯಗಳು ಯಥಾರ್ಥವಾಗಿ ಯೇಸುಕ್ರಿಸ್ತರ ಕುರಿತೇ ಆಗಿರಲು ಸಾಧ್ಯವೆಂದೂ ಅವರು ಹೇಳಿದರು. ಅವರು ಯೇಸು ಕ್ರಿಸ್ತರ ಮತ್ತು ಬುದ್ಧ ಮತದ ತತ್ವಗಳಿಗಿರುವ ಸಂಬಂಧವನ್ನು ವಿವರಿಸಿದರು.

ಸಮ್ಮೇಳನದ ಪ್ರಥಮ ದಿನದ ಭಾಷಣಗಳ ನಂತರ ಸಭಿಕರ ಹಲವಾರು ಪ್ರಶ್ನೆಗಳಿಗೆ ತಕ್ಕುದಾದ ಉತ್ತರಗಳನ್ನು ನೀಡಲಾಯಿತು.

### ದ್ವಿತೀಯ ದಿನ

ಸಮ್ಮೇಳನದ ದ್ವಿತೀಯ ದಿವಸ ಮೊದಲ ದಿವಸಕ್ಕಿಂತ ಹೆಚ್ಚು ಜನರು ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಲು ನೆರೆದಿದ್ದರು. ಪ್ರಥಮ ಭಾಷಣ ಅಬ್ದುಸ್ಸಲಾಮ್ ಮೆಡಸನ್ ಅವರದ್ದಾಗಿತ್ತು. ಡ್ಯಾನಿಶ್ ಭಾಷೆಗೆ ಅವರು ಪವಿತ್ರ ಖುರ್‌ಆನ್ ಭಾಷಾಂತರಿಸಿದ್ದಾರೆ. ಅವರು ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ವಚನಗಳ ಆಧಾರದಿಂದ ಯೇಸು ಕ್ರಿಸ್ತರು ಸ್ಥೂಲ ಶರೀರದೊಂದಿಗೆ ಆಕಾಶಕ್ಕೇರಿಸಲ್ಪಟ್ಟಿಲ್ಲವೆಂದೂ ಅವರು ಮನುಷ್ಯ ಸಹಜವಾದ ಮರಣವನ್ನು ಹೊಂದಿರುವರೆಂದೂ ವ್ಯಕ್ತಗೊಳಿಸಿದರು.

ಅನಂತರ ಲಂಡನ್ ಮಸೀದಿಯ ಇಮಾಮರಾದ ಬಶೀರ್ ಅಹ್ಮದ್ ರಫೀಕ್ ಬೈಬಲಿನ ಆಧಾರದಿಂದ ಯೇಸುಕ್ರಿಸ್ತರ ಸಂಬಂಧಿಸಿ ಯಹೂದಿಗಳ, ಕ್ರೈಸ್ತರ ಮತ್ತು ಸಂಪ್ರದಾಯವಾದಿಗಳಾದ ಮುಸ್ಲಿಮರ ನಂಬಿಕೆಗಳನ್ನು ಆಧಾರಸಹಿತವಾಗಿ ತಪ್ಪೆಂದು ತೋರಿಸಿಕೊಟ್ಟರು.

ಲಂಡನ್ ಮಸೀದಿಯ ಇಮಾಮರ ಭಾಷಣ ಮುಕ್ತಾಯವಾದನಂತರ ಹಝ್ರತ್ ಚೌಧರಿ ಮುಹಮ್ಮದ್ ಝಫರುಲ್ಲಾಖಾನರು ಭಾಷಣ ಮಾಡುತ್ತಾ ಈ ರೀತಿ ಹೇಳಿದರು: ''ಹೊಸ ಒಡಂಬಡಿಕೆಯಲ್ಲಾಗಲೀ, ಬೈಬಲಿನ ಪತ್ರಿಕೆಗಳಲ್ಲಾಗಲೀ ಯೇಸುಕ್ರಿಸ್ತರು ತನ್ನನ್ನು ದೇವರೆಂದು ಘೋಷಿಸಿದುದಾಗಲೀ ತಾನು ದೇವರೆಂದು ಸೂಚಿಸುವಂತೆ ವರ್ತಿಸಿದುದಾಗಲೀ ಉಲ್ಲೇಖಿತವಾಗಿಲ್ಲ. ಯೇಸುಕ್ರಿಸ್ತರ ಕಾಲ ಕಳೆದು ದೀರ್ಘ ಸಮಯದ ನಂತರ 'ದೇವರ ಪುತ್ರ' ಎಂಬ ಶಬ್ದವು 'ಪುತ್ರ ದೇವ' ಎಂಬುದಾಗಿ ಬದಲಾಯಿಸಲ್ಪಟ್ಟು ಯೇಸುಕ್ರಿಸ್ತರು ಮೂರು ದೇವರುಗಳಲ್ಲಿ ಎರಡನೆಯವರಾಗಿ ಪರಿಗಣಿಸಲ್ಪಟ್ಟರು. ತ್ರಿದೇವ ವಿಶ್ವಾಸ ಯೇಸುಕ್ರಿಸ್ತರ ಸ್ಪಷ್ಟವಾದ ಉಪದೇಶಗಳಿಗೆ ವಿರುದ್ಧವಾಗಿದೆ. ಯೇಸುಕ್ರಿಸ್ತರು ತಾನು ದೇವರಿಂದ ಕಳುಹಿಸಲ್ಪಟ್ಟುದಾಗಿ ಯಾವಾಗಲೂ ಹೇಳುತ್ತಿದ್ದರು. ತಾನು ದೇವರ ದೂತನೆಂದು ಅವರು ಈ ರೀತಿ ಸ್ಪಷ್ಟಗೊಳಿಸುತ್ತಿದ್ದರು. ಇತರ ಪ್ರವಾದಿಗಳನ್ನು ಉದ್ದೇಶಿಸಿ ಸಹ 'ದೇವರ ಪುತ್ರ' ಎಂಬುದಾಗಿ ಬೈಬಲಿನಲ್ಲಿ ಬರೆಯಲಾಗಿದೆ. ತ್ರಿದೇವರಲ್ಲಿ ಯಾರಾದರೊಬ್ಬ ದೇವರ ಸ್ಥಾನಮಾನ ಇನ್ನೊಬ್ಬ ದೇವರ ಸ್ಥಾನ ಮಾನಕ್ಕಿಂತ ಕಮ್ಮಿಯಾದರೆ ಕಮ್ಮಿ ಸ್ಥಾನದ ವ್ಯಕ್ತಿ ದೇವರಾಗಲು ಹೇಗೆ ತಾನೆ ಸಾಧ್ಯ? ಬೈಬಲನ್ನು ಪಠಿಸಿದರೆ ಪಿತದೇವರು ಪುತ್ರದೇವನಿಗಿಂತ ಎಷ್ಟೋ ಶ್ರೇಷ್ಠನೆಂಬುದಾಗಿ ತೋರುವುದರಿಂದ "ಪುತ್ರದೇವ" ಯಥಾರ್ಥ ದೇವರಾಗಿರಲು ಸಾಧ್ಯವಿಲ್ಲ. ಯೇಸುಕ್ರಿಸ್ತರು "ಪುತ್ರದೇವ"ನೆಂಬ ಭಾವನೆ ಧರ್ಮಸಂಕಟವನ್ನುಂಟುಮಾಡುತ್ತದೆ. ಮನಸ್ಸಾಕ್ಷಿಯನ್ನು ಘಾಸಿಗೊಳಿಸುತ್ತದೆ, ದೇವರ ದಯಾಗುಣವನ್ನು ಪ್ರಶ್ನಿಸುವಂತಿದೆ ಮತ್ತು ದೈವತ್ವಕ್ಕೆ ವ್ಯತಿರಿಕ್ತವಾಗಿದೆ. ಇತ್ತೀಚೆಗೆ ಆಂಗ್ಲಿಕನ್ ಚರ್ಚಿಗೆ ಸೇರಿದ ಪಂಡಿತರು ಇದನ್ನು ಸಮರ್ಥಿಸಿ ಪುತ್ರದೇವನೆಂಬ ಕಲ್ಪನೆ ಒಂದು ಐತಿಹ್ಯ ಮಾತ್ರವಾಗಿದೆಯೆಂದು ಹೇಳಿರುವರು." ಹಝ್ರತ್ ಝಫರುಲ್ಲಾ ಖಾನ್‌ರವರ ಭಾಷಣದೊಂದಿಗೆ ಬೆಳಗಾತದ ಸಭೆ ಮುಕ್ತಾಯಗೊಂಡಿತು.

ಮಧ್ಯಾಹ್ನದ ನಂತರ ಅಹ್ಮದಿಯಾ ಸಂಘಟನೆಯ ಸ್ಥಾಪಕರ ಮೊಮ್ಮಗ ಮಿರ್ಝಾ ಮುಝಫರ್ ಅಹ್ಮದ್ ರವರು "ಇಸ್ರಾಯೆಲ್ ಸಂತತಿಯ ಕಾಣೆಯಾದ ಗೋತ್ರಗಳು" ಎಂಬ ವಿಷಯದ ಕುರಿತು ಭಾಷಣ ಮಾಡಿದರು. ಯೇಸುಕ್ರಿಸ್ತರು ಶಿಲುಬೆಯಿಂದ ವಿಮೋಚಿತರಾದನಂತರ ಇಸ್ರಾಯೆಲ್ ಸಂತತಿಯ ತಪ್ಪಿಸಿಕೊಂಡ ಗೋತ್ರಗಳನ್ನು ಹುಡುಕುತ್ತಾ ಹೋದರೆಂದು ವ್ಯಕ್ತಗೊಳಿಸಿ 30 ಐರೋಪ್ಯ ಲೇಖಕರ, ಕಾಶ್ಮೀರದ 6 ಪ್ರಾಚೀನ ಮುಸ್ಲಿಮ್ ಚರಿತ್ರೆಗಾರರು ಮತ್ತು ಇಬ್ಬರು ಹಿಂದೂ ವಿದ್ವಾಂಸರ ಗ್ರಂಥಗಳ ಆಧಾರದಿಂದ ಅಫಘಾನಿಸ್ಥಾನ, ಕಾಶ್ಮೀರ ಮತ್ತು ಭಾರತದ ಇತರ ಕೆಲವು ಭಾಗಗಳ ಜನರು ಇಸ್ರಾಯೆಲ್ ಸಂತತಿಯ ಕಾಣೆಯಾದ ಗೋತ್ರಕ್ಕೆ ಸೇರಿದವರೆಂದು ವ್ಯಕ್ತಗೊಳಿಸಿದರು. ಅವರು ಈ ಪ್ರದೇಶಗಳ ಜನರ ಆಚಾರ ವಿಚಾರಗಳು ಪುರಾತನ ಯಹೂದಿಗಳ ಸಂಪ್ರದಾಯಗಳನ್ನು ಯಾವ ರೀತಿ ಹೋಲುತ್ತಿವೆಯೆಂದು ತೋರಿಸಿದರು. ಸುಮಾರು 405 ಉದಾಹರಣೆಗಳನ್ನು ಕೊಡುತ್ತಾ ಬೈಬಲಿನ ಜನರ ಹೆಸರು, ಗೋತ್ರದ ಹೆಸರು ಮತ್ತು ಸ್ಥಳದ ಹೆಸರು ಈ ಪ್ರದೇಶದ ಜನ, ಗೋತ್ರ ಮತ್ತು ಸ್ಥಳಗಳಿಗೆ ಹೇಗೆ ಹೋಲುತ್ತಿವೆಯೆಂಬುದನ್ನು ತೋರಿಸಿದರು.

ಅನಂತರ ಲಾಹೋರಿನ ಶೇಖ್ ಅಬ್ದುಲ್ ಖಾದಿರ್ ರವರು ಶಿಲುಬೆಗೇರಿಸಲ್ಪಟ್ಟ ನಂತರದ ಯೇಸುಕ್ರಿಸ್ತರ ಜೀವನದ ಕುರಿತು ವಿವರಿಸಿದರು. ಕ್ರೈಸ್ತರು ಅಂಗೀಕರಿಸದ ಧಾರ್ಮಿಕ ಗ್ರಂಥಗಳಲ್ಲಿ ಇದು ವಿವರಿಸಲ್ಪಟ್ಟಿದೆಯೆಂದು ಅವರು ಹೇಳಿದರು. ಉದಾಹರಣೆಗೆ "ಸೊಲೋಮನನ ಪದ್ಯಗಳು" (The Odes of Solomon) ಎಂಬ ಗ್ರಂಥ ಕ್ರಿ. ಶ. ಒಂದನೆಯ ಶತಮಾನದ ಕ್ರೈಸ್ತರ 42 ಸಿರಿಯನ್ ಭಾಷೆಯ ಪದ್ಯಗಳನ್ನೊಳಗೊಂಡಿದೆ. ಅದರಲ್ಲಿ ಯೇಸುಕ್ರಿಸ್ತರು ಈ ರೀತಿ ಹೇಳಿದುದಾಗಿ ಬರೆದಿದೆ: "ನನ್ನ ವಿರೋಧಿಗಳು ನನ್ನನ್ನು ಮೃತ್ಯುವಿನ ದವಡೆಗೆ ನೂಕಿದರು. ನಾನು ಸತ್ತವನಂತೆ ಕಾಣಿಸಿದೆನು, ಆದರೆ ನಾನು ಮೃತನಾಗಿರಲಿಲ್ಲ. ಜನರು ಆ ರೀತಿ ಗ್ರಹಿಸಿದರು. ಆದರೆ ನಾನು ಜೀವಂತನಾಗಿದ್ದು ಪ್ರಪಂಚದ ಔನ್ನತ್ಯದಲ್ಲಿ ಅಭಿವೃದ್ಧಿ ಹೊಂದುತ್ತಿದ್ದೇನೆ." ಕ್ರಿ. ಶ. ಎರಡನೆಯ ಶತ ಶತಮಾನದಲ್ಲಿ ಅಲೆಕ್ಸಾಂಡ್ರಿಯದಿಂದ ಭಾರತದ ವಾಯುವ್ಯ ಭಾಗಕ್ಕೆ ಒಬ್ಬ ಕ್ರೈಸ್ತ ವಿದ್ವಾಂಸರು ಬಂದಾಗ ಯಹೂದಿ ಜನಾಂಗಕ್ಕೆ ಸೇರಿದ ಕ್ರೈಸ್ತರನ್ನು ಕಂಡನೆಂಬುದಾಗಿಯೂ

ಅವರ ಬಳಿ ಹೊಸ ಒಡಂಬಡಿಕೆಯ ಹಿಬ್ರೂ ಭಾಷೆ ಮತ್ತು ಲಿಪಿಯ ಗ್ರಂಥವನ್ನು ಕಂಡನೆಂದೂ ಚರಿತ್ರೆಯಲ್ಲಿ ಬರೆದಿದೆ. ಇನ್ನಿತರ ಹಲವಾರು ಸಾಕ್ಷ್ಯಗಳ ಆಧಾರದಿಂದ ಅವರು ತನ್ನ ಭಾಷಣದಲ್ಲಿ ಯೇಸುಕ್ರಿಸ್ತರ ಜೀವನವನ್ನು ವಿವರಿಸಿದರು.

ಎರಡನೆಯ ದಿನದ ಕೊನೆಯ ಭಾಷಣ R. C. E. ಸ್ಕೋಲ್‌ಫೀಲ್ಡ್ ಎಂಬ ಬ್ರಿಟಿಷ್ ವಿದ್ವಾಂಸರದ್ದಾಗಿತ್ತು. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದದೆ ರಕ್ಷಿಸಲ್ಪಟ್ಟಿದನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರು ಲೋಕದ ಮುಂದೆ ಪ್ರಕಟಿಸಿದುದಕ್ಕೆ ಅವರನ್ನು ಶ್ಲಾಘಿಸಿದರು. ಯೇಸುಕ್ರಿಸ್ತರು ಶಿಲುಬೆಯಿಂದ ರಕ್ಷಿತರಾದುದರಿಂದ ದೇವರ ಇರುವಿಕೆಯಲ್ಲಿ ವಿಶ್ವಾಸ ದೃಢಗೊಳ್ಳುವುದಲ್ಲದೆ ಭವಿಷ್ಯವಾಣಿಗಳು ಪೂರ್ತಿಗೊಂಡಂತಾಗುವುದೆಂದು ಸಹ ಅವರು ಹೇಳಿದರು.

ದ್ವಿತೀಯ ದಿನದ ಸಮ್ಮೇಳನದ ಕೊನೆಯಲ್ಲಿ ಇಮಾಂ ಬಶೀರ್ ಅಹ್ಮದ್ ರಫೀಕ್‌ರವರು ಒಂದು ಚಾರಿತ್ರಿಕ ಗೊತ್ತುವಳಿಯನ್ನು ಮಂಡಿಸಿದರು. ಪ್ರತಿನಿಧಿಗಳಿಂದ ಈ ಗೊತ್ತುವಳಿಯು ಅವಿರೋಧವಾಗಿ ಸ್ವೀಕೃತವಾಯಿತು. ದೇವರ ಸತ್ಯಪ್ರವಾದಿಯಾದ ನಜರೆತಿನ ಯೇಸುಕ್ರಿಸ್ತರ ಸಮಾಧಿಯೆಂದು ನಂಬಲಾಗಿರುವ, ಕಾಶ್ಮೀರದ ಶ್ರೀನಗರದ ಖಾನ್‌ಯಾರ್ ಬೀದಿಯಲ್ಲಿರುವ ಐತಿಹಾಸಿಕ ಧಾರ್ಮಿಕ ಸ್ಮಾರಕವಾದ, 'ರೌಝಾಬಾಲಿ'ನ ನೆಲೆಯನ್ನು ಕಾಪಾಡಬೇಕೆಂದು ಈ ಗೊತ್ತುವಳಿಯಲ್ಲಿ ಭಾರತ ಸರಕಾರವನ್ನು ಕೇಳಿಕೊಳ್ಳಲಾಯಿತು. ಈ ಸಮಾಧಿಯನ್ನು ಯೋಗ್ಯ ರೀತಿಯಲ್ಲಿ ಬಾಕಿಯುಳಿಸಲಿಕ್ಕಾಗಿ ತಕ್ಕುದಾದ ದುರಸ್ತಿ ಕಾರ್ಯವನ್ನು ತುರ್ತಾಗಿ ಮಾಡಬೇಕೆಂದೂ ಈ ಸಮಾಧಿಯ ವಾಸ್ತವಿಕತೆಯನ್ನು ತಿಳಿಯಲಿಕ್ಕಾಗಿ ಮಾಡುವ ಇನ್ನೂ ಹೆಚ್ಚಿನ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಬೇಕೆಂದೂ ಗೊತ್ತುವಳಿಯಲ್ಲಿ ವಿನಂತಿಸಲಾಗಿದೆ.

ಈ ಗೊತ್ತುವಳಿಯ ಒಂದು ಪ್ರತಿಯನ್ನು ವಿಶ್ವಸಂಸ್ಥೆಯ 'ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಅಂಗ' (UNESCO)ದ ಕಾರ್ಯದರ್ಶಿಗೆ ಕಳುಹಿಸಿ, ಈ ಬಗ್ಗೆ ಎಲ್ಲಾ ವಿಧ ನೆರವನ್ನು ಭಾರತ ಸರಕಾರಕ್ಕೆ ನೀಡಬೇಕೆಂದೂ ಕೋರಲಾಯಿತು.

## ತೃತೀಯ ದಿನ

ಸಮ್ಮೇಳನದ ಕೊನೆಯ ದಿನ ಅಹ್ಮದಿಯಾ ಸಂಘಟನೆಯ ಸರ್ವೋನ್ನತ ನಾಯಕರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ಖಲೀಫತುಲ್ ಮಸೀಹ್ III) ಅವರ ಭಾಷಣದ ಕಾರ್ಯಕ್ರಮ ಮಾತ್ರವಿತ್ತು. ಲೋಕದ ನಾನಾ ಕಡೆಯ ಸುಮಾರು 1500ಕ್ಕೆ ಮಿಕ್ಕಿದ ಪ್ರತಿನಿಧಿಗಳು ಅಂದು ಭಾಗವಹಿಸಿದರು.

ಹಝ್ರತ್ ಸಾಹೇಬರು ತನ್ನ ಭಾಷಣದಲ್ಲಿ ದೇವರ ಏಕತ್ವವನ್ನು ಸಾರಿದರು. ಪರಮಾತ್ಮನು ಏಕನೂ ನಿಸ್ತುಲನೂ ಅದ್ವಿತೀಯನೂ ಆಗಿರುವನೆಂದು ಅವರು ಪ್ರತಿಪಾದಿಸಿದವರು. ಪರಮಾತ್ಮನ ಸಾಮಿಪ್ಯವನ್ನು ಗಳಿಸಲಿಕ್ಕೆ ಅವನನ್ನು ಪರಿಪೂರ್ಣವಾಗಿ ತಿಳಿದುಕೊಂಡಿರಬೇಕೆಂದೂ ಯಥಾರ್ಥ ಮೋಕ್ಷಮಾರ್ಗ ಇದೇ ಆಗಿದೆಯೆಂದೂ ಅವರು ಹೇಳಿದರು.

ಏಕದೇವ ಸಿದ್ಧಾಂತವು ಬೈಬಲಿನಲ್ಲೂ ಘೋಷಿಸಲ್ಪಟ್ಟಿದೆಯೆಂದೂ ಈ ಸಿದ್ಧಾಂತವನ್ನು ಸಾರಲಿಕ್ಕಾಗಿ ಅನೇಕ ಪ್ರವಾದಿಗಳು ಬಂದಿರುವರೆಂದೂ ಈ ಸಿದ್ಧಾಂತಕ್ಕೆ ವಿರುದ್ಧವಾಗಿ ಬೋಧಿಸುವ ಯಾವ ಇಸ್ರಾಯೆಲ್ ಪ್ರವಾದಿಯೂ ಬಂದಿಲ್ಲವೆಂದೂ ಅವರು ನುಡಿದರು.

ಯೇಸುಕ್ರಿಸ್ತರು ದೇವರ ಸತ್ಯಪ್ರವಾದಿಯೂ ಪುಣ್ಯಪುರುಷರೂ ಆಗಿರುವರೆಂದೂ ಅವರು ಶಿಲುಬೇಗೇರಿಸಲ್ಪಟ್ಟು ಶಾಪಗ್ರಸ್ತಮರಣಕ್ಕೆ ಗುರಿಯಾದರೆಂದು ಭಾವಿಸುವುದು ಅತಿದೊಡ್ಡ ಅನೀತಿಯೆಂದೂ ಓರ್ವನ ಹೃದಯವು ದೇವರಿಂದ ವಿಮುಖವಾಗಿ, ದೇವರ ಪ್ರೀತಿಗೆ ಪಾತ್ರನಾಗದೆಯೂ ದೇವರನ್ನು ಅರಿಯದೆಯೂ ಇರುವಾಗ ಮಾತ್ರ ಅವನು ಶಾಪಗ್ರಸ್ತನೆಂದು ಭಾವಿಸಲ್ಪಡುತ್ತಾನೆಂದೂ ಅವರು ಹೇಳಿದರು.

ನಾವು ನಮ್ಮ ಸೃಷ್ಟಿಕರ್ತನ ಪ್ರೀತಿಯನ್ನು ಪಡೆಯಲಿಕ್ಕೆ ಪ್ರಯತ್ನಿಸಬೇಕೆಂದೂ ದೇವರಿಗೆ ವಿಧೇಯರಾಗಿಯೂ ಕೃತಜ್ಞರಾಗಿಯೂ ಇರಬೇಕೆಂದೂ ಅವರು ಕರೆ ನೀಡಿದರು. ಈ ಲೋಕದ ಮಿಥ್ಯಾನಂದ ಮತ್ತು ಕೃತಕ ಸುಮ್ಮಾನ ಪರಮಾತ್ಮನ ಪ್ರೀತಿಯ ಮುಂದೆ ಸರಿಹೋಲದೆಂದೂ ಪರಮಾತ್ಮನೆಡೆಗಿರುವ ಬಾಗಿಲು ಯಾವಾಗಲೂ ತೆರೆದಿರು

ತ್ತದೆಯೆಂದೂ ಪರಮಾತ್ಮನ ಕಡೆಯಿಂದ ಬರುವ ಕರೆಗೆ ಓಗೊಡುವ ಜನರು ವಿನಾಶದಿಂದ ಸಂರಕ್ಷಿಸಲ್ಪಡುವರೆಂದೂ ಅವರು ಎಚ್ಚರಿಸಿದರು.

ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್‌ನವರು ಧಾರ್ಮಿಕ ತತ್ವಗಳ ಕುರಿತು ಸೌಹಾರ್ದ ಸಂಭಾಷಣೆ ನಡೆಸಲು ಮಾಡಿದ ಅಪೇಕ್ಷೆಯನ್ನು ಹಝ್ರತ್ ಸಾಹೇಬರು ಸ್ವೀಕರಿಸಿದರು. ಲಂಡನಿನಲ್ಲಾಗಲೀ ಇನ್ನಿತರ ಯಾವುದೇ ಸ್ಥಳದಲ್ಲಾಗಲೀ ಸಂಭಾಷಣೆಗೆ ಅಹ್ಮದಿಯರು ಸಿದ್ಧರಿದ್ದರೆಂದು ಅವರು ವ್ಯಕ್ತಗೊಳಿಸಿದರು. (ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್‌ನವರ ಅಪೇಕ್ಷೆ ಯನ್ನೂ ಹಝ್ರತ್ ಸಾಹೇಬರ ಉತ್ತರವನ್ನೂ ಇದೇ ಸಂಚಿಕೆಯ ಬೇರೆಡೆಯಲ್ಲಿ ಕೊಡಲಾಗಿದೆ. —ಸಂ.)

**ಪ್ರದರ್ಶನ:** ಪ್ರಸ್ತುತ ಸಮ್ಮೇಳನಕ್ಕೆ ಸಂಬಂಧಿಸಿ ಹೆಚ್ಚಿನ ವಿವರಣೆಗಳನ್ನು ನೀಡುವ ಒಂದು ಪ್ರದರ್ಶನವನ್ನು ಕೋಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನ ಒಂದು ಹಾಲ್‌ನಲ್ಲಿ ಏರ್ಪಡಿಸಲಾಗಿತ್ತು. ಶಿಲುಬಾ ಸಂಭವದ ನಂತರ ಯೇಸು ಕ್ರಿಸ್ತರು ಯಾತ್ರೆಮಾಡಿದ ಮಾರ್ಗದ ಕುರಿತು ಚಿತ್ರಗಳು, ಚಾರಿತ್ರಿಕ ಲೇಖನಗಳು, ಸಮ್ಮೇಳನದಲ್ಲಿ ಪ್ರತಿಪಾದಿಸಲಾದ ವಿಷಯಗಳಿಗೆ ಸಂಬಂಧಿಸಿದ ಇಂಗ್ಲಿಷ್, ಉರ್ದು, ಹಿಂದಿ, ಸ್ಪಾನಿಶ್, ಸ್ವೀಡಿಶ್, ಫ್ರೆಂಚ್, ಜರ್ಮನ್, ಡಚ್, ಪರ್ಶಿಯನ್ ಮತ್ತು ಅರೆಬಿಕ್ ಭಾಷೆಗಳಲ್ಲಿ ಬರೆಯಲಾದ ವಿವಿಧ ಗ್ರಂಥಗಳು ಅಲ್ಲಿ ಪ್ರದರ್ಶಿತವಾಗಿದ್ದುವು.

---

(7ನೇ ಪುಟದಿಂದ)

ಪಡೆಯಬೇಕೆಂದು ವಿಧಿಸಿದೆ. ಏಕೆಂದರೆ ಅದು ಸ್ತ್ರೀಯರ ಸ್ವಾತಂತ್ರ್ಯ ರಂಗವಾಗಿದೆ. ಆದರೆ, ಸ್ತ್ರೀಯರು ಹೊರಗೆ ಸಂಚರಿಸಲು ಪುರುಷರ ಒಪ್ಪಿಗೆಯನ್ನು ಪಡೆಯಬೇಕೆಂಬ ನಿಬಂಧನೆ ಇಲ್ಲ. ಆದರೂ ಮೇಲೆ ಪ್ರಸ್ತಾವಿಸಿದ ರೀತಿಯ ಮುಂಜಾಗ್ರತೆಯನ್ನು ಕೈಗೊಳ್ಳಲು ವಿಧಿಸಿದೆ. ಸ್ತ್ರೀಯರಿಗೆ ರಸ್ತೆಗಳಲ್ಲೂ ಸಾರ್ವಜನಿಕ ಸ್ಥಳಗಳಲ್ಲೂ ನ್ಯಾಯೋಚಿತ ಅವಶ್ಯಕತೆ ಇರಬಹುದು. ಆದುದರಿಂದ ಪುರುಷರ ಸಮ್ಮತಿ ಇಲ್ಲದೆ ಅವರು ಹೊರಗೆ ಸಂಚರಿಸಬಹುದಾಗಿದೆ. ಆದರೆ ಪುರುಷರಿಗೆ ಅನ್ಯಗೃಹದೊಳಗೆ, ಒಳಗಿರುವವರ ಅನುಮತಿ ಇಲ್ಲದೆ ನ್ಯಾಯೋಚಿತವಾದ ಒಂದು ಅವಶ್ಯಕತೆ ಉಂಟಾಗಬಾರದುದರಿಂದ, ಅವರ ಸಮ್ಮತಿ ಪಡೆಯದೆ ಒಳಗೆ ಪ್ರವೇಶಿಸಬಾರದೆಂಬ ಒಂದು ನಿಬಂಧನೆಯನ್ನು ಇಸ್ಲಾಂ ನಿರ್ದೇಶಿಸಿರುತ್ತದೆ. ಒಟ್ಟಾರೆ ಪರದಾ ಸಂಪ್ರದಾಯಕ್ಕೆ ಸಂಬಂಧಿಸಿದ ಈ ನಿಬಂಧನೆ ಸ್ತ್ರೀಗಾಗಲೀ ಪುರುಷನಿಗಾಗಲೀ ಅಪಮಾನಕರವೆಂಬ ಪ್ರಶ್ನೆಗೆ ಅವಕಾಶವಿಲ್ಲ. ಈ ಪರದಾ ಸಂಪ್ರದಾಯವಾದರೋ, ಸದಾಚಾರ ಪರವಾದ ಪರಿಷ್ಕರಣಕ್ಕಿರುವ ಒಂದು ಪರಿಪೂರ್ಣ ಪದ್ಧತಿಯಾಗಿದೆ.

---


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ಸೌಹಾರ್ದ ಸಂಭಾಷಣೆಗೆ ಆಹ್ವಾನ ಮತ್ತು ಸ್ವೀಕಾರ

ಲಂಡನ್ ನಗರದ ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ಜೂನ್ 2ರಿಂದ 4ರ ವರೆಗೆ "ಶಿಲುಬೆಯಿಂದ ಯೇಸುವಿನ ವಿಮೋಚನೆ" ಎಂಬ ವಿಷಯದ ಕುರಿತು ಅಹ್ಮದಿಯಾ ಸಂಘಟನೆಯ ವತಿಯಿಂದ ನಡೆದ ಒಂದು ಅಂತಾರಾಷ್ಟ್ರೀಯ ಮಹಾಸಮ್ಮೇಳನದ ಸಂದರ್ಭದಲ್ಲಿ, ಲಂಡನಿನ ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಕ್ರೈಸ್ತಧರ್ಮ ಮತ್ತು ಇಸ್ಲಾಂ ಧರ್ಮದ ಮಧ್ಯವಿರುವ ನಂಬಿಕೆಗಳ ಭಿನ್ನಾಭಿಪ್ರಾಯದ ಕುರಿತು ಸ್ನೇಹಪೂರ್ವಕ ಸಂಭಾಷಣೆ ನಡೆಸಲು ಅಹ್ಮದಿಯಾ ಸಂಘಟನೆಗೆ ಕರೆಯಿತ್ತಿದೆ.

ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್, ಕ್ರಿಶ್ಚಿಯನ್ ಪ್ರೊಟೆಸ್ಟಂಟ್ ಚರ್ಚುಗಳ ಜಾಗತಿಕ ಸಂಸ್ಥೆಯಾದ ವರ್ಲ್ಡ್ ಕೌನ್ಸಿಲ್ ಅಫ್ ಚರ್ಚಸಿನ ಸಹಸಂಸ್ಥೆಯಾಗಿದೆ.

ಜೂನ್ 4ರಂದು ಅಹ್ಮದಿಯಾ ಸಂಘಟನೆಯ ಈಗಿನ ಸರ್ವೋನ್ನತ ನಾಯಕರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ಖಲೀಫತುಲ್ ಮಸೀಹ್ III)ರವರು ಸಮ್ಮೇಳನದ ಕೊನೆಯ ಅಧಿವೇಶನದ ತನ್ನ ಚಾರಿತ್ರಿಕ ಭಾಷಣದಲ್ಲಿ ಈ ಆಹ್ವಾನವನ್ನು ಸ್ನೇಹಪೂರ್ವಕ ಸ್ವೀಕರಿಸಿದರು.

## I
## ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಬರೆದ ಪತ್ರ

The British Council of Churches
2, Eaton Gate, London SWIW 9 BL
Telephone No. 01-730 9611.

—ಗೆ

25ನೆ ಮೇ 1978.

ಮಿಸ್ಟರ್ ಬಿ. ಎ. ರಫೀಕ್,
ಲಂಡನ್ ಮಸೀದಿಯ ಇಮಾಮ್,
16, ಗ್ರೆಸ್ಸನ್ ಹಾಲ್ ರೋಡ್,
ಲಂಡನ್ S. W. 18

ಪ್ರಿಯ ಮಿಸ್ಟರ್ ರಫೀಕ್,

ನೀವು ಮುಂದಿನವಾರ ಲಂಡನ್ ನಗರದಲ್ಲಿ ನಡೆಸಲಿರುವ ಅಂತಾರಾಷ್ಟ್ರೀಯ ಸಮ್ಮೇಳನದ ಕುರಿತು ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಹೊರಡಿಸಿದ ಹೇಳಿಕೆಯ ಒಂದು ಪ್ರತಿಯನ್ನು ಕಳುಹಿಸಿರುತ್ತೇನೆ.

ಈ ಹೇಳಿಕೆಯ ಸುದ್ದಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಾಶಿತವಾಗುವ ಮೊದಲೇ ನಿಮಗೊಂದು ಪ್ರತಿ ತಲುಪಲಿಯೆಂದು ಇದನ್ನು ರವಾನಿಸಿರುತ್ತೇವೆ. ನಾವು ಹೊರಡಿಸಿದ ಹೇಳಿಕೆಯು ನಿಮಗೆ ವಿಕೃತಗೊಳಿಸಲ್ಪಟ್ಟು ತಲುಪದಿರಲಿಯೆಂಬುದೇ ಹೀಗೆ ನಾವು ನೇರವಾಗಿ ಕಳುಹಿಸಿದ ಉದ್ದೇಶವಾಗಿದೆ.

ನಮ್ಮ ಹೇಳಿಕೆಯ ಪೂರ್ಣಪ್ರತಿಯ ಕೊನೆಯಲ್ಲಿ ನಾವು ಸೂಚಿಸಿದ ಮೂರಂಶಗಳ ಪೈಕಿ ಎರಡನೆಯ ಅಂಶಕ್ಕೆ ನಿಮ್ಮ ಗಮನವನ್ನು ಹರಿಯಿಸಲು ಇಚ್ಛಿಸುತ್ತೇವೆ. ಸದ್ಯೋಭವಿಷ್ಯದಲ್ಲಿ ನಿಮ್ಮ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮತ್ತು ನಮ್ಮ ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಸಂಘಟನೆಯ ಕೆಲವು ಪ್ರತಿನಿಧಿಗಳ ಮಧ್ಯೆ ಮಾತುಕತೆ ನಡಸುವುದುಚಿತವೆಂದು ನಾವು ಭಾವಿಸುತ್ತೇವೆ.

ಇತಿ ನಿಮ್ಮವ,

ರೆವರೆಂಡ್ ಸೆಸಿಲ್ ಹಾರ್‌ಗ್ರೀವ್ಸ್.

II

## ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಹೊರಡಿಸಿದ ಹೇಳಿಕೆ

ಹೊಸದಾಗಿ ರಚಿತವಾದ ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಿಸಿನ "ಇತರ ಮತಸ್ಥರೊಂದಿಗೆ ಸಂಬಂಧ ಸ್ಥಾಪಿಸುವ ಸಮಿತಿ"ಯು ಮೇ ತಿಂಗಳ 23ನೆ ದಿನಾಂಕ ಸಭೆಸೇರಿ ಲಂಡನಿನ ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ಜೂನ್ 2ರಿಂದ 4ರ ತನಕ ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ವತಿಯಿಂದ ಜರುಗಲಿರುವ ಸಮ್ಮೇಳನದ ಕುರಿತು ಯಾವ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಬೇಕೆಂಬುದರ ಕುರಿತು ಕ್ರೈಸ್ತಧರ್ಮಾವಲಂಬಿಗಳಿಗೆ ಮಾರ್ಗದರ್ಶನವನ್ನು ನೀಡಿದೆ.

ಈ ಸಮಿತಿಯು ಅಹ್ಮದಿಯಾ ಸಂಘಟನೆ ಮತ್ತು ಇತರ ಮತಧರ್ಮಗಳ ಅನುಯಾಯಿಗಳೊಡನೆ ಬಹಿರಂಗವಾಗಿ ರಚನಾತ್ಮಕ ಸಂಭಾಷಣೆಗಳನ್ನು ನಡೆಸಲು ಸನ್ನದ್ಧವಾಗಿದೆಯೆಂಬ ಸಂಗತಿಯನ್ನು ಈ ಮೂಲಕ ಪ್ರಕಟಿಸುತ್ತದೆ. ಅಹ್ಮದಿಯಾ ಸಂಘಟನೆ ನಡೆಸಲು ಉದ್ದೇಶಿಸಿದ ಸಮ್ಮೇಳನದ ಕುರಿತು ಮಾಡಿದ ಪ್ರಚಾರ ಭಿನ್ನಾಭಿಪ್ರಾಯಗಳನ್ನು ಉದ್ರೇಕಿಸುವುದೆಂದೂ ಅಚ್ಚರಿಯನ್ನೂ ಆಘಾತವನ್ನೂ ಉಂಟುಮಾಡುವುದೆಂದೂ ಈ ಸಮಿತಿ ಮನಗಂಡಿದೆ. ಯೇಸುಕ್ರಿಸ್ತರು ಯೆರುಸಲೇಮಿನಲ್ಲಿ ಶಿಲುಬೆಯ ಮೇಲೆ ಮೃತರಾದರೆಂದೂ ಅವರನ್ನು ದಫನುಗೊಳಿಸಲಾಯಿತೆಂದೂ ಅವರು ಮೂರನೆಯ ದಿನ ದೇವರಿಂದ ಪುನರುತ್ಥಾನಗೊಳಿಸಲ್ಪಟ್ಟರೆಂದೂ ಇನ್ನು ಎಂದೆಂದಿಗೂ ಜೀವಿಸಿರುವರೆಂದೂ ಇರುವ ಕ್ರೈಸ್ತಚರ್ಚಿನ ವಿಶ್ವಾಸವನ್ನು ನಾವು ಬ್ರಿಟನಿನಲ್ಲಿರುವ ಕ್ರೈಸ್ತಧರ್ಮಾವಲಂಬಿಗಳ ಪರವಾಗಿ ಸ್ಪಷ್ಟಗೊಳಿಸಲು ಇಚ್ಛಿಸುತ್ತೇವೆ.

(ಹೆಚ್ಚಿನ ವಿವರಗಳನ್ನು ಇದರೊಂದಿಗೆ ಲಗತ್ತೀಕರಿಸಲಾಗಿದೆ).

ಹೆಚ್ಚಿನ ವಿವರಣೆಗಳಿಗೆ ಈ ಕೆಳಗಿನ ವಿಳಾಸಗಳಲ್ಲಿ ವ್ಯವಹರಿಸಿರಿ:

1. ಡಾಕ್ಟರ್ ಡೇವಿಡ್ ಕೆರ್, ಸೆಲ್ಲಿಓಕ್ ಕಾಲೇಜಸ್, ಬರ್ಮಿಂಗ್‌ಹ್ಯಾಮ್. ಫೋನ್: (021)472 4231
2. ರೈಟ್ ರೆವರೆಂಡ್ ಬ್ರೌನ್, ಗಿಲ್ಡ್ ಫೋರ್ಡಿನ ಬಿಶಪ್ಪರು. ಫೋನ್: (0483) 73922

III

## ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಹೊರಡಿಸಿದ ಹೇಳಿಕೆಯ ಪೂರ್ಣರೂಪ

ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆಯು ಲಂಡನ್ ನಗರದಲ್ಲಿ 2ರಿಂದ 4ನೇ ಜೂನ್ ತನಕ 'ಶಿಲುಬೆಯಲ್ಲಿ ಯೇಸುವಿನ ವಿಮೋಚನೆ' ಎಂಬ ವಿಷಯದಲ್ಲಿ ಒಂದು ಸಮ್ಮೇಳನ ನಡೆಸಲು ಏರ್ಪಾಡು ಮಾಡಿದೆಯೆಂಬ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಯೇಸುಕ್ರಿಸ್ತರು ಜೀವಂತರಾಗಿ ಶಿಲುಬೆಯಿಂದ ಶಿಷ್ಯರ ಸಹಾಯದಿಂದ ಇಳಿಸಲ್ಪಟ್ಟರೆಂದೂ ಅನಂತರ ಅವರು ತನ್ನ ಗಾಯಗಳಿಂದ ಗುಣಹೊಂದಿದ ನಂತರ ರಹಸ್ಯವಾಗಿ ಇರಾನ್, ಅಫ್‌ಘಾನಿಸ್ಥಾನ ಮತ್ತು ಕಾಶ್ಮೀರಕ್ಕೆ ಪ್ರಯಾಣಿಸಿದರೆಂದೂ ಕಾಶ್ಮೀರದಲ್ಲಿ ಈಗಲೂ ಇರುವ ಒಂದು ಸಮಾಧಿಯಲ್ಲಿ ದಫನುಗೊಳಿಸಲ್ಪಟ್ಟರೆಂದೂ

ಸುಮಾರು 89 ವರ್ಷಗಳಷ್ಟು ಹಿಂದೆ ಸ್ಥಾಪಿತವಾದ ಅಹ್ಮದಿಯಾ ಸಂಘಟನೆ ತನ್ನ ಪ್ರಮುಖ ಧಾರ್ಮಿಕ ಸಿದ್ಧಾಂತಗಳಲ್ಲೊಂದಾಗಿ ಸ್ವೀಕರಿಸಿದ್ದು, ಈ ಸಿದ್ಧಾಂತಕ್ಕೆ ಸಂಬಂಧಿಸಿರುವ ವಿವಿಧ ವಿಷಯಗಳ ಕುರಿತು ಮೇಲೆ ಸೂಚಿಸಿದ ಸಮ್ಮೇಳನದಲ್ಲಿ ಚರ್ಚಿಸಲಾಗುವುದೆಂದು ನಾವು ತಿಳಿದಿದ್ದೇವೆ. ಅಹ್ಮದಿಯಾ ಸಂಘಟನೆಯು ಮಿರ್ಝಾ ಗುಲಾಮ್ ಅಹ್ಮದ್ ಎಂಬವರ ಉಪದೇಶಗಳ ಮತ್ತು ಅವರು ರೂಪಿಸಿದ ಕಾರ್ಯಕ್ರಮಗಳ ಫಲವಾಗಿ ಭಾರತದ ಪಂಜಾಬಿನ ಪೂರ್ವಭಾಗದಲ್ಲಿ ಹತ್ತೊಂಭತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸ್ಥಾಪಿತವಾಯಿತೆಂದು ನಾವು ಈ ಸಂದರ್ಭದಲ್ಲಿ ನೆನಪಿಸುತ್ತೇವೆ.

ನಾವು ಲಂಡನ್ ಸಮ್ಮೇಳನದ ಕುರಿತು ಯಾವುದೇ ಬಹಿರಂಗ ಹೇಳಿಕೆಯನ್ನು ಕೊಡಲು ಉತ್ಸುಕರಾಗಿಲ್ಲ.

ಯೇಸುಕ್ರಿಸ್ತರು ಕಾಶ್ಮೀರಕ್ಕೆ ಹೋದನಂತರ ಮನುಷ್ಯಸಹಜವಾಗಿ ಮರಣಹೊಂದಿದರೆಂದು ಅಹ್ಮದಿಯಾ ಸಂಘಟನೆಯವರು ಹೇಳುವ ವಾದವನ್ನು ಸಂಪ್ರದಾಯವಾದಿಗಳಾದ ಮುಸ್ಲಿಮ್ ಮತ ಪಂಡಿತರು ಅಲ್ಲಗಳೆದು ಅದು ಖುರ್‌ಆನಿಗೆ ವಿರುದ್ಧವೆಂದು ದೀರ್ಘಕಾಲದಿಂದ ಹೇಳುತ್ತಾ ಬಂದಿರುವರು. ಆದುದರಿಂದ ಲಂಡನಿನಲ್ಲಿರುವ ಸಂಪ್ರದಾಯವಾದಿಗಳಾದ ಮುಸ್ಲಿಮರೇ ಈ ಸಮ್ಮೇಳನ ಮತ್ತದರ ಚರ್ಚಾವಿಷಯದ ಕುರಿತು ಅಗತ್ಯವಾದ ವಿಮರ್ಶೆ ಪ್ರಾಯಶಃ ಮಾಡಬೇಕಾಗಿದೆ.

ನಾವು ಬಹಿರಂಗ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಒಲ್ಲದಿರುವ ಕಾರಣವೇನೆಂದರೆ ಕ್ರೈಸ್ತ ಧರ್ಮದ ಅತಿ ಪ್ರಧಾನ ನಂಬಿಕೆಯ ಮೇಲೆ ಈಗ ಅಹ್ಮದಿಯಾ ಮುಸ್ಲಿಮರು ನಡೆಸುತ್ತಿರುವಂತಹ ಆಕ್ರಮಣಗಳನ್ನು ಹಿಂದೆ ಕ್ರೈಸ್ತ ಧರ್ಮಾವಲಂಬಿಗಳು ಕೈಗೊಂಡು ಇತರ ಮತ ಧರ್ಮಗಳ ಪ್ರಧಾನ ನಂಬಿಕೆಗಳ ಮೇಲೆ ಕೆಣಕುವ ಹಾಗೂ ಪ್ರತಿಷೇಧಕ ಆಕ್ರಮಣಗಳನ್ನು ಮಾಡುತ್ತಿದ್ದರೆಂದು ನಮಗೆ ಗೊತ್ತಿರುವುದರಿಂದಾಗಿದೆ. ಈಗ ನಮ್ಮ ಮೇಲೆ ಇಂತಹ ಆಕ್ರಮಣಗಳು ನಡೆಯುತ್ತಿರುವಾಗ ಅಗತ್ಯಕ್ಕಿಂತ ಹೆಚ್ಚು ಆತ್ಮರಕ್ಷಣೆ ಮಾಡಲು ನಾವು ಇಚ್ಛಿಸುವುದಿಲ್ಲ.

ಆದರೆ, ಪರ–ವಿರೋಧ ಭಾವನೆಗಳು ಉದ್ರೇಕಿಸಲ್ಪಡುವಂತೆ ಈ ಸಮ್ಮೇಳನದ ಕುರಿತು ಪ್ರಚಾರಗಳನ್ನು ಕೈಗೊಂಡುದರಿಂದ ನಾವು ಈ ಕೆಳಗಿನ ಮೂರು ಹೇಳಿಕೆಗಳನ್ನು ಕೊಡಲು ಇಚ್ಛಿಸುತ್ತೇವೆ:

1. ಯೇಸುಕ್ರಿಸ್ತರು ಶಿಲುಬೆಗೇರಿಸಲ್ಪಟ್ಟರೆಂದೂ ಅದರ ಫಲವಾಗಿ ಮರಣ ಹೊಂದಿದರೆಂದೂ ನಾಲ್ಕು ಸುವಾರ್ತೆಗಳ ಮತ್ತು ಕ್ರೈಸ್ತ ಧರ್ಮದ ಆರಂಭ ಕಾಲದ ಐಕ್ಯಮತ್ಯದಿಂದ ಪರಂಪರಾಗತವಾಗಿರುವ ನಂಬಿಕೆಗಳ ಆಧಾರದಿಂದ ಸ್ಥಾಪಿತವಾದ ನಮ್ಮ ವಿಶ್ವಾಸವನ್ನು ಪುನರುಚ್ಚರಿಸುತ್ತೇವೆ. ಯೇಸು ಕ್ರಿಸ್ತರು ಶಿಲುಬೆಯ ಮೇಲೆ ಮೃತರಾದುದು ಅಪಕೀರ್ತಿಕರವೆಂದೂ ದೈವಿಕ ನ್ಯಾಯನೀತಿಯನ್ನು ಪ್ರಶ್ನಿಸುವಂತಿದೆಯೆಂದೂ ತೋರಬಹುದೆಂದು ನಮಗೆ ಗೊತ್ತಿದೆ. ಆದರೆ ಯೇಸುಕ್ರಿಸ್ತರು ಶಿಲುಬೆ ಮೇಲೆ ಮರಣ ಹೊಂದಿದುದರಿಂದ ಇತರರಿಗಾಗಿ ಕಷ್ಟಕ್ಕೊಳಗಾಗಲು ಸಿದ್ಧವಿರುವ ದೈವಿಕ ಪ್ರೇಮವನ್ನು ಕಾಣುತ್ತೇವೆ. ಹಾಗೂ ಪ್ರಾಯಶ್ಚಿತ್ತವಿಲ್ಲದೆ ಕ್ಷಮಾಪಣೆ ಸಾಧ್ಯವಿಲ್ಲವೆಂದೂ ತಿಳಿಯುತ್ತೇವೆ.

2. ದೇವರ ಕೃಪೆ ಮತ್ತು ದಯಾಗುಣದ ಕುರಿತು ಹಾಗೂ ಯೇಸುಕ್ರಿಸ್ತರಿಗೆ ಸಂಬಂಧಿಸಿದ ವಿಷಯಗಳ ಕುರಿತು ಲಂಡನಿನಲ್ಲಿ ಮತ್ತು ಇತರ ಸ್ಥಳಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಮತ್ತು ಕ್ರಿಶ್ಚಿಯನರ ಮಧ್ಯೆ (ಬಹಿರಂಗ ಪ್ರಚಾರ ನಡೆಸದೆ) ಚರ್ಚೆಗಳನ್ನು ನಡೆಸಲು ನಾವು ನಿರೀಕ್ಷೆಯಿಂದಿದ್ದೇವೆ.

3. ಯೇಸು ಕ್ರಿಸ್ತರು ಮಧ್ಯ ಏಶಿಯಾವನ್ನಾಗಲೀ ಭಾರತ ಉಪಖಂಡವನ್ನಾಗಲೀ ಸಂದರ್ಶಿಸಿದ್ದರೆಂಬುದಕ್ಕೆ ದೃಢವಾದ ಸಾಕ್ಷ್ಯಗಳಿವೆಯೆಂಬುದನ್ನು ನಾವು ಒಪ್ಪುವುದಿಲ್ಲವಾದರೂ, ಯೇಸುವೆಂಬ ಪ್ರತಿಬಿಂಬ ಜೀವಂತ ಕ್ರಿಸ್ತನಾಗಿದ್ದು, ಅವನು ಎಲ್ಲಾ ಜನಾಂಗಗಳಿಗೂ ರಾಷ್ಟ್ರಗಳಿಗೂ ಸೇರಿದವನಾಗಿರುವುದರಿಂದ ಕ್ರೈಸ್ತ ಧರ್ಮ ಮತ್ತು ಇತರ ಸಂಸ್ಕೃತಿಗಳೊಂದಿಗೆ ಆದಿ ಶತಮಾನಗಳಿಂದ ಇದ್ದ ಸಂಬಂಧಗಳ ಕುರಿತು ಸಂಶೋಧನೆ ಬಹಳ ಶ್ರದ್ಧಾಪೂರ್ವಕವಾಗಿ ನಡೆಸಬೇಕಾಗಿದೆಯೆಂದು ನಾವು ಸಮ್ಮತಿಸುತ್ತೇವೆ.

ಪ್ರಕಟನೆಯ ದಿನಾಂಕ: 26ನೇ ಮೇ 1978.

## ಅಹ್ಮದಿಯಾ ಸಂಘಟನೆಯ ಇಮಾಮರ ಉತ್ತರ

ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್‌ಗೆ ಸಂಬಂಧಿಸಿದ ಹೊಸತ್ತಾಗಿ ರಚಿಸಲ್ಪಟ್ಟ "ಇತರ ಮತಸ್ಥರೊಂದಿಗೆ ಸಂಬಂಧ ಸ್ಥಾಪಿಸುವ ಸಮಿತಿ"ಯು ಲಂಡನಿನಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ನಡೆಯುತ್ತಿರುವ "ಶಿಲುಬೆಯಿಂದ ಯೇಸುಕ್ರಿಸ್ತರ ವಿಮೋಚನೆ" ಎಂಬ ವಿಷಯದ ಸಮ್ಮೇಳನದ ಕುರಿತು ಒಂದು ಪತ್ರಿಕಾ ಪ್ರಕ

ಟಣೆ ಹೊರಡಿಸಿ ಅಹ್ಮದಿಯಾ ಸಂಘಟನೆಯ ಪ್ರತಿನಿಧಿಗಳೊಂದಿಗೆ ರಚನಾತ್ಮಕ ಸಂಭಾಷಣೆಗಳನ್ನು ನಡೆಸಲು ತನ್ನ ಸನ್ನದ್ಧತೆಯನ್ನು ಪ್ರಕಟಿಸಿದೆ. ಈ ಸಮ್ಮೇಳನದ ಕುರಿತು ಮಾಡಿದ ಪ್ರಚಾರ "ಆಘಾತಕರವಾಗಬಹುದೆ"ಂಬ ಭಯವನ್ನು ಈ ಹೇಳಿಕೆಯಲ್ಲಿ ವ್ಯಕ್ತಗೊಳಿಸಲಾಗಿದೆ. ಅಹ್ಮದಿಯಾ ಸಂಘಟನೆ ಏರ್ಪಡಿಸಿದ ಈ ಸಮ್ಮೇಳನ ಯಾರನ್ನೂ ಆಘಾತಗೊಳಿಸಲು ಉದ್ದೇಶಿಸಿಲ್ಲ; ಆ ರೀತಿ ಯಾರೂ ಭಾವಿಸಬಾರದು. ಯೇಸುಕ್ರಿಸ್ತರನ್ನು ನಾವು ಸತ್ಯವಂತರಾದ ಪ್ರವಾದಿಯೆಂದು ನಂಬುತ್ತೇವೆ ಮತ್ತು ಅವರಿಗೆ ಅತ್ಯಂತ ಆದರ ಸೂಚಿಸಿ ಅವರ ಕುರಿತು ಸಮ್ಮೇಳನದಲ್ಲಿ ಪ್ರತಿಪಾದಿಸಲಾಗಿದೆ.

ಚರ್ಚ್ ಕೌನ್ಸಿಲಿನ ಹೇಳಿಕೆಯಲ್ಲಿ, ಅಹ್ಮದಿಯಾ ಸಂಘಟನೆಗೂ ಸಂಪ್ರದಾಯವಾದಿ ಮುಸ್ಲಿಮ್ ಪಂಡಿತರಿಗೂ ಇರುವ ಅಭಿಪ್ರಾಯ ಭಿನ್ನತೆಯನ್ನು ಎತ್ತಿ ತೋರಿಸಲಾಗಿದೆ. ಆದರೆ ದೇವರು ಒಬ್ಬನೇ ಎಂದೂ ಪೈಗಂಬರ್ ಮುಹಮ್ಮದರು (ದೇವರ ಇಷ್ಟಾಶೀರ್ವಾದ ಅವರ ಮೇಲಿರಲಿ) ಸತ್ಯಪ್ರವಾದಿಗಳೆಂದೂ, ಪ್ರವಾದಿಗಳ ಮುದ್ರಿಕೆಯೆಂದೂ ಎಲ್ಲರಿಗಿಂತ ಶ್ರೇಷ್ಠರೆಂದೂ ಎಲ್ಲಾ ಮುಸ್ಲಿಮ್ ಪಂಗಡಗಳು ಐಕ್ಯಮತ್ಯದಿಂದ ಒಪ್ಪುತ್ತಾರೆ. ಬೇರೆ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ದೇವರ ಏಕತೆ ಮತ್ತು ತ್ರಿದೇವ ವಿಶ್ವಾಸಗಳ ಕುರಿತು ಎಲ್ಲಾ ಮುಸ್ಲಿಮರು ಏಕಾಭಿಪ್ರಾಯ ಹೊಂದಿದ್ದಾರೆ. ನಮಗೂ ಇತರ ಮುಸ್ಲಿಮರಿಗೂ ಈ ವಿಷಯಗಳಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ.

ಚರ್ಚ್ ಕೌನ್ಸಿಲಿನ ಹೇಳಿಕೆಯಲ್ಲಿ, ಕ್ರೈಸ್ತಧರ್ಮದ ಅತಿಪ್ರಧಾನ ನಂಬಿಕೆಯ ಮೇಲೆ ಈಗ ಅಹ್ಮದಿಯಾ ಮುಸ್ಲಿಮರು ನಡೆಸುತ್ತಿರುವಂತಹ ಆಕ್ರಮಣಗಳನ್ನು ಹಿಂದೆ ಕ್ರೈಸ್ತಧರ್ಮಾವಲಂಬಿಗಳು ಕೈಗೊಂಡು ಇತರ ಮತಧರ್ಮಗಳ ಪ್ರಧಾನ ನಂಬಿಕೆಗಳ ಮೇಲೆ ಅಕ್ರಮವಾದ ನಿಷೇಧಾತ್ಮಕ ಆಕ್ರಮಣಗಳನ್ನು ಮಾಡುತ್ತಿದ್ದರು ಎಂದು ಹೇಳಲಾಗಿದೆ. ಕ್ರೈಸ್ತಧರ್ಮವು ಇತರ ಧರ್ಮಗಳ ಪ್ರಧಾನ ನಂಬಿಕೆಗಳ ಮೇಲೆ ಅಕ್ರಮವಾದ ನಿಷೇಧಾತ್ಮಕ ಆಕ್ರಮಣಗಳನ್ನು ಹೆಚ್ಚಾಗಿ ಅತಿ ವಿರೋಧವನ್ನು ಉದ್ರೇಕಿಸುವಂತಹ ಕಟು ಭಾಷೆಯಲ್ಲಿ ಮಾಡುತ್ತಿದ್ದುದು ಸರಿಯಾದರೂ ಅಹ್ಮದಿಯರು ಯೇಸುಕ್ರಿಸ್ತರ ಕುರಿತು ಅವರ ದೈವದತ್ತವಾದ ಪ್ರವಾದಿಸ್ಥಾನಕ್ಕೆ ವಿರೋಧವಾಗುವಂತೆ ಏನನ್ನೂ ಹೇಳಬಾರದೆಂದು ನಂಬಿ ಅದನ್ನು ಪ್ರಚಾರಗೊಳಿಸುವುದರಿಂದ, ಹಿಂದೆ ಕ್ರೈಸ್ತಧರ್ಮೀಯರು ಕೈಗೊಂಡ ಅಕ್ರಮಕರವಾದ ಪ್ರತಿಷೇಧಾತ್ಮಕ ಆಕ್ರಮಣಗಳಿಗೆ ಅದು ಸಮಾನವೆಂದು ಹೇಳುವುದನ್ನು ನಾವು ಒಪ್ಪಲಾರೆವು.

ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದುದು ಅಪಕೀರ್ತಿಕರವೆಂದೂ ದೈವಿಕ ನ್ಯಾಯನೀತಿಯನ್ನು ಪ್ರಶ್ನಿಸುವಂತಿದೆಯೆಂದೂ "ತೋರಬಹುದು" ಎಂಬ ಸಮಿತಿಯ ಹೇಳಿಕೆ ಸ್ವಾಗತಾರ್ಹವಾಗಿದೆ. ನಮ್ಮ ಕ್ರೈಸ್ತ ಬಾಂಧವರಿಗೆ ಯಥಾರ್ಥ ಸಂಗತಿಗಳನ್ನು ವಿವರವಾಗಿ ಪ್ರೀತಿಯಿಂದ ಚೆನ್ನಾಗಿ ಬೋಧಿಸಿದರೆ ಅವರು ತಮ್ಮ ತಪ್ಪು ನಂಬಿಕೆಗಳನ್ನು ತೊರೆದು, ಯೇಸುಕ್ರಿಸ್ತರ ಶಿಲುಬೆಯ ಮೇಲಿನ ಮರಣ ಮತ್ತು ತಪ್ಪು ಮಾಡಿದವರ ಬದಲಿಗೆ ನಿರಪರಾಧಿ ಶಿಕ್ಷೆಗೆ ಗುರಿಯಾಗುವುದು ಆಭಾಸಕರವೆಂಬುದು ಕೇವಲ "ತೋರುವುದು" ಮಾತ್ರವಲ್ಲ ಅದು ನಿಜವಾಗಿ ಅಪಮಾನಕರವೂ ದೈವಿಕ ನ್ಯಾಯನೀತಿಗೆ ಕಳಂಕಪ್ರಾಯವೆಂದೂ ತಿಳಿಯುವರು.

ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್‌ನ ಪ್ರಸ್ತುತ ಸಮಿತಿ ಅಹ್ಮದಿಯಾ ಸಂಘಟನೆಯನ್ನು ಮಾತುಕತೆಗಾಗಿ ಲಂಡನ್ ಮತ್ತು ಇತರ ಸ್ಥಳಗಳಲ್ಲಿ ಕರೆದಿರುವುದು ನಮಗೆ ಸಂತೋಷಕರವಾಗಿದೆ.

ನಾವು ಈ ಆಹ್ವಾನವನ್ನು ಸ್ವೀಕರಿಸುತ್ತೇವೆ. ಈ ಸಂಭಾಷಣೆಗಳು ಪ್ರೇಮ ಮತ್ತು ಸೌಜನ್ಯತೆಯ ವಾತಾವರಣದಲ್ಲಿ ನಡೆಯಬೇಕಾಗಿದೆ. ಈ ಸಂಭಾಷಣೆಗಳು ಲಂಡನ್, ರೋಮ್, ಯಾವುದಾದರೊಂದು ಪಶ್ಚಿಮ ಆಫ್ರಿಕನ್ ರಾಷ್ಟ್ರದ ರಾಜಧಾನಿ, ಯಾವುದಾದರೊಂದು ಏಶ್ಯನ್ ರಾಷ್ಟ್ರದ ರಾಜಧಾನಿ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಮುಂಚಿತವಾಗಿ ನಿಶ್ಚಯಿಸಲ್ಪಡುವ ದಿನಗಳಲ್ಲಿ ನಡೆಯಲಿಯೆಂದು ನಾವು ಅಪೇಕ್ಷಿಸುತ್ತೇವೆ.

ನಾವು ರೋಮನ್ ಕೆಥೋಲಿಕ್ ಚರ್ಚಿನ ಪ್ರತಿನಿಧಿಗಳೊಂದಿಗೆಯೂ, ಅವರೊಡನೆ ಪ್ರತ್ಯೇಕವಾಗಿಯಾಗಲೀ ಅಥವಾ ಇನ್ನಾವುದೇ ಚರ್ಚಿನೊಂದಿಗೆ ಸೇರಿಯಾಗಲೀ (ಅದು ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಆದರೂ ಸರಿ) ನಮ್ಮ ನಂಬಿಕೆಗಳ ಭಿನ್ನತೆಯ ಕುರಿತು ಚರ್ಚಿಸಲು ಇಚ್ಛಿಸುತ್ತೇವೆ.

(ಭಾಷಾಂತರ: M. U. R.)

# ಜಗತ್ಪ್ರಸಿದ್ಧ ಅಹ್ಮದಿ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮರ ಕ್ರಾಂತಿಕಾರಕ ಸಂಶೋಧನೆ

**ಅವರು ಜಗತ್ತಿನ ಮುಂದಿರಿಸಿದ ಯುನಿಫೈಡ್ ಥಿಯರಿ (Unified Theory)ಯನ್ನು ಅನೇಕ ರಿಕದ ವಿಜ್ಞಾನಿಗಳು ಪರೀಕ್ಷಿಸಿ ಸಮರ್ಥಿಸಿರುವರು.**

**ನ್ಯೂಟನ್ ಮಹಾಶಯನು ಮುನ್ನೂರು ವರ್ಷಗಳ ಹಿಂದೆ ಕಂಡುಹಿಡಿದ ಗುರುತ್ವಾಕರ್ಷಣ ಸಿದ್ಧಾಂತದ ನಂತರ ಈ ಹೊಸ ಸಿದ್ಧಾಂತ ಭೌತಶಾಸ್ತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತಿದೆ.**

**ಇಂತಹ ಅಮೂಲ್ಯ ಸಂಶೋಧನೆಗಾಗಿ ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ತಮ್ಮ ಅಭಿನಂದನೆಗಳನ್ನು ವ್ಯಕ್ತಗೊಳಿಸಿರುವರು.**

ದೇವರ ಅನುಗ್ರಹದಿಂದ ಪ್ರಸಿದ್ಧ ಅಹ್ಮದಿ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮ್ ಅವರು ವಿಜ್ಞಾನದ ಪ್ರಪಂಚದಲ್ಲಿ ಒಂದು ಕ್ರಾಂತಿಕಾರಕ ಸಂಶೋಧನೆಯನ್ನು ಮಾಡಿರುವರು. ಅಣುಗಳ ಮೇಲೆ ಪ್ರಭಾವ ಬೀರುವ ಇಲೆಕ್ಟ್ರೋಮೇಗ್ನೆಟಿಕ್ ಶಕ್ತಿಯ ಆಂತರಿಕ ಮತ್ತು ಬಾಹ್ಯ ಪ್ರಭಾವಗಳ ಕುರಿತು ಹೊಸದಾದೊಂದು ಸಿದ್ಧಾಂತವನ್ನು ಅವರು ರೂಪಿಸಿರುವರು. ಅವರ ಸಿದ್ಧಾಂತದ ಯಥಾರ್ಥತೆ ಅಮೇರಿಕದಲ್ಲಿ ವಿಜ್ಞಾನಿಗಳಿಂದ ನಡೆಸಲಾದ ಸೂಕ್ಷ್ಮಪ್ರಯೋಗಗಳಿಂದ ಸಾದರಗೊಂಡಿದೆ. ಸರ್ ಐಸಾಕ್ ನ್ಯೂಟನ್ ಮುನ್ನೂರು ವರ್ಷಗಳ ಹಿಂದೆ ಕಂಡುಹಿಡಿದ ಗುರುತ್ವಾಕರ್ಷಣ ಶಕ್ತಿಯ ಸಿದ್ಧಾಂತದಷ್ಟೇ ಈ ಸಿದ್ಧಾಂತವೂ ಮಹತ್ವದ್ದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು.

ಲಾಹೋರಿನಿಂದ ಪ್ರಕಟವಾಗುವ ಪಾಕಿಸ್ತಾನ್ ಟೈಮ್ಸ್ ತನ್ನ 1–8–78ರ ಸಂಚಿಕೆಯಲ್ಲಿ ಈ ಸಂಬಂಧವಾಗಿ ಈ ಕೆಳಗಿನ ವರದಿಯನ್ನು ಪ್ರಕಟಿಸಿದೆ:—

"ರಾವಲ್‌ಪಿಂಡಿ, ಜುಲಾಯಿ 31— ಪಾಕಿಸ್ತಾನ್ ಎಟೋಮಿಕ್ ಎನರ್ಜಿ ಕಮಿಷನ್ ಈ ಕೆಳಗಿನ ಮಾಹಿತಿಯನ್ನಿತ್ತಿದೆ: ಪ್ರಸಿದ್ಧ ಪಾಕಿಸ್ತಾನಿ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮ್ ಮತ್ತು ಅಮೇರಿಕದ ಪ್ರೊಫೆಸರ್ ಎಸ್. ವೈನ್‌ಬರ್ಗ್ (S. WEINBERG) ತಮ್ಮ ಸ್ವಂತ ಪ್ರಯೋಗಗಳ ಮೂಲಕ ರೂಪಿಸಿದ "ಯುನಿಫೈಡ್ ಥಿಯರಿ" ಎಂಬ ಭೌತಶಾಸ್ತ್ರ (PHYSICS) ಸಂಬಂಧವಾದ ಹೊಚ್ಚಹೊಸ ಸಿದ್ಧಾಂತವನ್ನು ಅಮೇರಿಕನ್ ವಿಜ್ಞಾನಿಗಳು ಪರೀಕ್ಷಿಸಿ ಸಮರ್ಥಿಸಿರುವರು.

ಪಾಕಿಸ್ತಾನ್ ಎಟೋಮಿಕ್ ಎನರ್ಜಿ ಕಮಿಷನ್ ವತಿಯಿಂದ ಪ್ರಕಟವಾಗುತ್ತಿರುವ "ಪಾಕ್ ಏಟಮ್" ಎಂಬ ಮಾಸ ಪತ್ರಿಕೆಯಲ್ಲಿ ಈ ವಿಷಯದ ಬಗ್ಗೆ ಅಮೇರಿಕನ್ ವಿಜ್ಞಾನಿಗಳು ಈ ಸಿದ್ಧಾಂತಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಅಮೇರಿಕದ ಸ್ಟಾನ್‌ಫೋರ್ಡ್ ಯುನಿವರ್ಸಿಟಿ (STANFORD UNIVERSITY)ಯಲ್ಲಿ ಮಾಡಿರುವ ವಿವರಗಳನ್ನಿತ್ತಿದೆ.

ಮುನ್ನೂರು ವರ್ಷಗಳ ಹಿಂದೆ ಸರ್ ಐಸಾಕ್ ನ್ಯೂಟನ್ ಭೌತಶಾಸ್ತ್ರಕ್ಕೆ ಗುರುತ್ವಾಕರ್ಷಣ ಶಕ್ತಿಯ ಸಿದ್ಧಾಂತ ಮೂಲಕ ಇತ್ತ ಕೊಡುಗೆಯ ನಂತರ ಪ್ರೊಫೆಸರ್ ಅಬ್ದುಸ್ಸಲಾಮ್ ಅವರ ಈ ಸಿದ್ಧಾಂತ ಅತ್ಯಂತ ಮಹತ್ವವುಳ್ಳದ್ದು ಮತ್ತು ಅಮೂಲ್ಯವಾದುದೆಂದು ಪರಿಗಣಿಸಲಾಗಿದೆ.

ಇಲೆಕ್ಟ್ರೋಮೇಗ್ನೆಟಿಕ್ ಶಕ್ತಿ ಎಲ್ಲಾ ಅಣುಗಳ ಮಧ್ಯದಲ್ಲಿ ಕಾರ್ಯನಿರ್ವಾಹ ಮಾಡುತ್ತದೆ. ಈ ಶಕ್ತಿಗೆ ನೆಗೆಟಿವ್, ಪೊಸಿಟಿವ್ ಎಂಬ ವ್ಯತ್ಯಾಸವಿಲ್ಲ. ಎಲ್ಲಾ ಮೂಲ ವಸ್ತುಗಳ ಅಣುಗಳನ್ನು ಈ ಶಕ್ತಿ ಸಂಯುಕ್ತವಾಗಿರುವಂತೆ ಮಾಡುತ್ತದೆ. ಕ್ಷೀಣಶಕ್ತಿ (WEAK FORCE) ಉಷ್ಣವನ್ನು ಸೃಜಿಸುತ್ತದೆ. ಅದರಲ್ಲಿ ನೆಗೆಟಿವ್ ಮತ್ತು ಪೊಸಿಟಿವ್ ಎಂಬ ವ್ಯತ್ಯಾಸವಿದೆ...... ಪ್ರೊಫೆಸರ್ ಅಬ್ದುಸ್ಸಲಾಮರ ಸಿದ್ಧಾಂತದ ಸಾರಾಂಶವೇನೆಂದರೆ ಎಲೆಕ್ಟ್ರೋಮೇಗ್ನೆಟಿಕ್ ಶಕ್ತಿ ಮತ್ತು ಕ್ಷೀಣಶಕ್ತಿ (Weak Force) ಒಂದೇ ಶಕ್ತಿಯ ಭಿನ್ನ ರೂಪಗಳಾಗಿವೆ. ಜಡವಸ್ತುಗಳನ್ನು ಭೂಮಿಯ ಕಡೆಗೆ ಆಕರ್ಷಿಸುವ ಶಕ್ತಿ ಮತ್ತು ಗ್ರಹಗಳನ್ನು ಸೂರ್ಯನ ಸುತ್ತಲೂ ತಮ್ಮ ವಲಯಗಳಲ್ಲಿ ತಿರುಗುವಂತೆ ಮಾಡುವ ಶಕ್ತಿ ಒಂದೇ ಶಕ್ತಿಯ ಭಿನ್ನರೂಪಗಳೆಂದು ನ್ಯೂಟನ್ ಮಹಾಶಯನು ಸ್ಪಷ್ಟಪಡಿಸಿದಂತೆ ಈ ಸಿದ್ಧಾಂತವನ್ನು ಸ್ಪಷ್ಟಪಡಿಸಲಾಗಿದೆ".

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಹೌಸ್ ಓಫ್ ಕಾಮನ್ಸ್‌ನಲ್ಲಿ ಅಹ್ಮದಿಯಾ ಖಲೀಫರಿಗೆ ಸತ್ಕಾರ

ಲಂಡನಿನಲ್ಲಿ ಕಳೆದ ಜೂನ್ 2ರಿಂದ 4ರ ತನಕ ಅಹ್ಮದಿಯಾ ಸಂಘಟನೆಯ ವತಿಯಿಂದ ಜರಗಿದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ ಅಹ್ಮದಿಯಾ ಸರ್ವೋನ್ನತ ನಾಯಕರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ಖಲೀಫತುಲ್ ಮಸೀಹ್ III) ಅವರಿಗೆ ಲಂಡನಿನ ಹೌಸ್ ಓಫ್ ಕಾಮನ್ಸ್ (House of Commons)ನ ಸದಸ್ಯರ ಡೈನಿಂಗ್ ರೂಮಿನಲ್ಲಿ ಜೂನ್ 7ರಂದು ಪಾರ್ಲಿಮೆಂಟ್ ಸದಸ್ಯ ಮಿ। ಟಾಮ್ ಕಾಕ್ಸ್ (Tom Cox) ಅವರು ಒಂದು ವಿಶೇಷ ಸತ್ಕಾರವನ್ನು ನೀಡಿದರು. ಅಲ್ಲಿ ಖಲೀಫರು ಅನೇಕ ಧಾರ್ಮಿಕ ಗಣ್ಯರನ್ನೂ ರಾಜಕೀಯ ಧುರೀಣರನ್ನೂ ಭೇಟಿಯಾದರು. ಪಾರ್ಲಿಮೆಂಟಿನ ಸದಸ್ಯರ ಪೈಕಿ ಆಕ್ಸ್‌ಫರ್ಡ್‌ನಲ್ಲಿ ತನ್ನ ಸಹಪಾಠಿಯಾಗಿದ್ದ ಮಾಜಿಪ್ರಧಾನಿ ಮಿ। ಎಡ್ವರ್ಡ್ ಹೀತ್‌ರವರನ್ನೂ ಅನೇಕ ಮೇಯರುಗಳನ್ನೂ ವಿವಿಧ ದೇಶಗಳ ಹೈಕಮಿಷನರುಗಳನ್ನೂ ಅವರು ಭೇಟಿಯಾದರು. ಎಲ್ಲರೊಡನೆಯೂ ಅವರು ಬಹಳ ಸ್ನೇಹ ಮತ್ತು ಸಂತಸದಿಂದ ಮಾತುಕತೆ ನಡೆಸಿದರು. ಖುರ್‌ಆನಿನ ಅಧ್ಯಾಪನೆಗಳ ಮತ್ತು ಇಸ್ಲಾಮಿನ ವಿಶೇಷತೆಗಳ ಕುರಿತೂ ಅವರು ಅತಿಥಿಗಳೊಡನೆ ಮಾತಾಡಿದರು. ನಂತರ ಅವರನ್ನು ಹೌಸ್ ಓಫ್ ಕಾಮನ್ಸ್‌ನ ಸಂದರ್ಶಕರ ಸ್ಪೆಶಲ್ ಗ್ಯಾಲರಿಗೆ ಕರಕೊಂಡು ಹೋಗಲಾಯಿತು. ಹೌಸ್ ಓಫ್ ಕಾಮನ್ಸ್‌ನಲ್ಲಿ ಆಗ ನಡೆಯುತ್ತಿದ್ದ ಚರ್ಚೆಯನ್ನು ಅವರು ಅಲ್ಲಿಂದ ವೀಕ್ಷಿಸಿದರು.

## ಪ್ರೊಫೆಸರ್ ಡಾ। ಅಬ್ದುಸ್ಸಲಾಮರಿಗೆ ಅಮೇರಿಕಾದ ಗೌರವ

ಪ್ರಖ್ಯಾತ ಅಹ್ಮದಿ ವಿಜ್ಞಾನಿ ಡಾ। ಅಬ್ದುಸ್ಸಲಾಮ್ ಅವರನ್ನು ಅಮೇರಿಕನ್ ಇನ್‌ಸ್ಟಿಟ್ಯೂಟ್ ಓಫ್ ಫಿಸಿಕ್ಸ್‌ನ ಪರವಾಗಿ 'ಜಾನ್‌ಟೊರೆನ್ಸಿ ಸ್ಟೇಟ್ ಮೆಡಲ'ನ್ನು ಪಡೆಯುವ ಹಕ್ಕುದಾರನನ್ನಾಗಿ ಆರಿಸಲಾಗಿದೆ. ಈ ಪ್ರಶಸ್ತಿ ಗಳಿಸಿದ ಪ್ರಖ್ಯಾತ ವಿಜ್ಞಾನಿಗಳಲ್ಲಿ ಡಾ। ಅಬ್ದುಸ್ಸಲಾಮ್ 4ನೆಯವರಾಗಿದ್ದಾರೆ. ಸಪ್ಟೆಂಬರ್ ಮಾಸದಲ್ಲಿ ಜರಗುವ ಪ್ರಸ್ತುತ ಇನ್‌ಸ್ಟಿಟ್ಯೂಟಿನ ಕೋರ್ಪೊರೇಟ್ ಅಸೋಸಿಯೆಟ್ಸ್‌ನ ವಾರ್ಷಿಕ ಸಮ್ಮೇಳನದಲ್ಲಿ ಈ ಬಿರುದನ್ನು ಅವರಿಗೆ ನೀಡಲಾಗುವುದು. ಡಾ। ಅಬ್ದುಸ್ಸಲಾಮರು ಹಲವು ವರ್ಷಗಳಿಂದ ಇಟೆಲಿಯ 'ಇಂಟರ್‌ನೇಶನಲ್ ಸೆಂಟರ್ ಫೋರ್ ಥಿಯೊರಿಟಿಕಲ್ ಟ್ರಸ್ಟ್'ನ ಡೈರೆಕ್ಟರರಾಗಿದ್ದಾರೆ.

(ಪಾಕಿಸ್ತಾನ್ ಟೈಮ್ಸ್, ಲಾಹೋರ್: 31–5–1978)

## ಭುವನೇಶ್ವರದಲ್ಲಿ ಸಮ್ಮೇಳನ

ಅಹ್ಮದಿಯಾ ಜಮಾಅತಿನ ವತಿಯಿಂದ, ಒರಿಸ್ಸಾದ ಮಾಜಿ ಮುಖ್ಯಮಂತ್ರಿ ಹಾಗೂ ಬೊಂಬಾಯಿಯ ಗವರ್ನರರಾಗಿದ್ದ ಶ್ರೀ ಹರೇಕೃಷ್ಣ ಮೆಹತಾಬರ ಅಧ್ಯಕ್ಷತೆಯಲ್ಲಿ, ಭುವನೇಶ್ವರ ಸುಚನಭವನ ಹವಾನಿಯಂತ್ರಿತ ಸಭಾಂಗಣದಲ್ಲಿ ಎಪ್ರಿಲ್ 30ರಂದು ಒಂದು ಸಭೆ ಜರಗಿತು. 'ರಾಷ್ಟ್ರೀಯ ಭಾವೈಕ್ಯ ಮತ್ತು ಅಂತಾರಾಷ್ಟ್ರೀಯ ಭ್ರಾತೃತ್ವ' ಎಂಬ ವಿಷಯದಲ್ಲಿ ಅಲ್‌ಹಾಜ್ ಮೌಲಾನ ಶರೀಫ್ ಅಹ್ಮದ್ ಸಾಹೇಬ್ ಅಮೀನಿ ಎಚ್. ಎ. ಮಾತನಾಡಿದರು. ಅಲ್ಲದೆ ಮೌಲಾನ ಬಶೀರ್ ಅಹ್ಮದ್ ಸಾಹೇಬ್ ಎಚ್. ಎ. ಮತ್ತು ಮೌಲಾನ ಅಬ್ದುಲ್ ಹಕ್ ಸಾಹೇಬರು ಸಹ ಭಾಷಣ ಮಾಡಿದರು.

ಅಹ್ಮದಿಯಾ ಜಮಾಅತಿನೊಂದಿಗೆ ತನಗೆ 20 ವರ್ಷ ಕಾಲದ ಸಂಬಂಧವಿದೆಯೆಂದು ಶ್ರೀ ಹರೇಕೃಷ್ಣ ಮೆಹತಾಬ್ ಹೇಳಿದರು. ಮುಸ್ಲಿಂ ಪಂಡಿತರು ಏನೇ ಹೇಳಿದರೂ ಅಹ್ಮದಿಯಾ ಸಂಘಟನೆ ಶಾಂತಿ–ಸಮಾಧಾನವನ್ನು ಬೋಧಿ

ಸುತ್ತಿದೆಯೆಂದೂ ಅದನ್ನು ತಾನು ಬೆಂಬಲಿಸುತ್ತಿದ್ದೇನೆಂದೂ ಅವರು ನುಡಿದರು. ಲೋಕದಲ್ಲಿ ಸಮಾಧಾನವೂ ನೀತಿಯೂ ಸ್ಥಾಪಿತವಾಗಬೇಕಾದರೆ ಧರ್ಮತತ್ವಗಳನ್ನನುಸರಿಸಿ ಜೀವಿಸಲೇಬೇಕೆಂದು ಅವರು ಅಭಿಪ್ರಾಯಪಟ್ಟರು.

## ಶ್ರೀಲಂಕಾ ಅಹ್ಮದಿಯಾ ಸಮ್ಮೇಳನ

ಶ್ರೀಲಂಕಾ ಅಹ್ಮದಿಯಾ ಸಮ್ಮೇಳನ ಕೊಲಂಬೊದ ಅಹ್ಮದಿಯಾ ಮಿಶನ್ ಹೌಸಿನಲ್ಲಿ ಎಪ್ರಿಲ್ 16ನೆ ಆದಿತ್ಯವಾರ ಜರಗಿತು. ಮೌಲವಿ ಮುಹಮ್ಮದ್ ಉಮರ್ ಸಾಹೇಬ್ ಎಚ್. ಎ. ಅಧ್ಯಕ್ಷತೆ ವಹಿಸಿದರು. 'ದೂತನ್' ಪತ್ರಿಕೆಯ ಸಂಪಾದಕ ಅಬ್ದುಲ್ ಮಜೀದ್ ಸಾಹೇಬರು ಉದ್ಘಾಟಿಸಿದರು.

ಸ್ಥಳೀಯ ಕೇಂದ್ರ ಸಮಿತಿ ಮುಖ್ಯ ಕಾರ್ಯದರ್ಶಿ ಮುಹಮ್ಮದ್ ರಫೀಉದ್ದೀನ್ ಸಾಹೇಬ್ ದೈವಾಸ್ತಿಕ್ಯವನ್ನು ಸಂಬಂಧಿಸಿ, ಎಂ. ಟಿ. ಅಹ್ಮದ್ ಸಾಹೇಬ್ ಲೋಕಶಾಂತಿಯ ಬಗ್ಗೆ, ಮಾಜಿ ಅಮೀರ್ ಎಂ. ಎಂ. ಅಬ್ದುಲ್ ಖಾದಿರ್ ಸಾಹೇಬ್ ಈಸಾನಬಿಯ ಮರಣದ ಕುರಿತು ಭಾಷಣ ಮಾಡಿದರು.

## ಕೆನಡಾದ ಪ್ರಧಾನ ಮಂತ್ರಿಗೆ ಖುರ್‌ಆನಿನ ಪಾರಿತೋಷಕ

ಕೆನಡಾದ ಪ್ರಧಾನ ಮಂತ್ರಿ Pierre Elliot Trudeau ಅವರಿಗೆ ಅವರ 10 ವರ್ಷಗಳ ಯಶಸ್ವಿ ಆಡಳಿತದ ಸುಸಂಧಿಯ ಸಂದರ್ಭದಲ್ಲಿ ಸ್ಥಳೀಯ ಅಹ್ಮದಿಯಾ ಶಾಖೆಯಿಂದ ಸಂಘಟನೆಯ ಕಾರ್ಯದರ್ಶಿ ಝಕರಿಯಾ ವಿರ್ಕ್‌ರವರ ಶುಭಾಶಯದ ಸಂದೇಶದೊಂದಿಗೆ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರದ ಒಂದು ಪ್ರತಿಯನ್ನು ಕಾಣಿಕೆಯಾಗಿ ನೀಡಲಾಯಿತು. ಪ್ರಧಾನಿಯವರು ಅದನ್ನು ಸ್ವೀಕರಿಸಿ ಕೃತಜ್ಞತೆಯನ್ನು ಸಲ್ಲಿಸಿದರು.

ನಿಧನ ವಾರ್ತೆಗಳು:

## ಜನಾಬ್ ಚೌಧರಿ ಫೈಝ್ ಅಹ್ಮದ್ ಸಾಹೇಬ್ ಗುಜರಾತಿ

ಜನಾಬ್ ಚೌಧರಿ ಫೈಝ್ ಅಹ್ಮದ್ ಸಾಹೇಬ್ ಗುಜರಾತಿ (ನಾಝಿರ್ ಬೈತುಲ್ ಮಾಲ್-ಆಮದ್) ಅವರು ಅಗೋಸ್ತು 28ರಂದು ರಾತ್ರೆ ಖಾದಿಯಾನಿನಲ್ಲಿ ಹೃದಯಸ್ತಂಭನದಿಂದ ಮೃತಪಟ್ಟರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ಚೌಧರಿ ಸಾಹೇಬರು ಅಂದು ಬೆಳಗಾತ ಸಹ ಕಾರ್ಯಾಲಯಕ್ಕೆ ಬಂದು ತನ್ನ ಕರ್ತವ್ಯವನ್ನು ನಿರ್ವಹಿಸಿದ್ದರು. ಸಂಜೆಯ ಹೊತ್ತಿಗೆ ಅವರಿಗೆ ಅಸ್ವಾಸ್ಥ್ಯ ಉಂಟಾಯಿತು.

ಜನಾಬ್ ಚೌಧರಿ ಸಾಹೇಬರು ನಿಷ್ಕಳಂಕರೂ ಧೈರ್ಯಶಾಲಿಯೂ ಸುಸ್ವಭಾವಿಯೂ ಪ್ರಭಾವಶಾಲಿಯೂ ವಿದ್ವಾಂಸರೂ ಆಗಿದ್ದರು. ಅವರು ಮೊದಲಿಗೆ ಸೈನ್ಯದಲ್ಲಿ ಸೇವೆಸಲ್ಲಿಸಿದ್ದರು. ಅದರ ನಂತರ ಅವರು ಖಾದಿಯಾನಕ್ಕೆ ಬಂದು ಸಂಘಟನೆಯ ಸೇವೆಯಲ್ಲಿ ನಿರತರಾದರು. ಹಝ್ರತ್ ಖಲೀಫತುಲ್ ಮಸೀಹ್ IIರವರ ಖುತ್‌ಬಾ ಮತ್ತು ಇನ್ನಿತರ ಉಪದೇಶ ನಿರ್ದೇಶಗಳನ್ನು ಬರಕೊಳ್ಳುವ ಸೇವೆಯಲ್ಲಿಯೂ ಅವರು ಹಲವು ವರ್ಷಗಳನ್ನು ಕಳೆದಿದ್ದರು. ಮೃತರು ತನ್ನ ಹಿಂದೆ ಪತ್ನಿಯನ್ನೂ ಇಬ್ಬರು ಹೆಮ್ಮಕ್ಕಳನ್ನೂ ಬಿಟ್ಟುಹೋಗಿರುವರು.

## ಜನಾಬ್ ಯು. ಎಂ. ಎ. ಮೊಹಿಯುದ್ದೀನ್ ಸಾಹೇಬ್

ಹುಟ್ಟೂರು ಮಂಜೇಶ್ವರದವರಾದ, ಕೊಡಗು ಜಿಲ್ಲೆಯ ಕೊಯನಾಡಿನ ನಿವಾಸಿಯಾಗಿದ್ದ ಜನಾಬ್ ಯು. ಎಂ. ಎ. ಮೊಹಿಯುದ್ದೀನ್ ಸಾಹೇಬರು ತನ್ನ 75ನೇ ಪ್ರಾಯದಲ್ಲಿ ಅಲ್ಪ ಕಾಲದ ಅಸ್ವಾಸ್ಥ್ಯತೆಯಿಂದ ಮೃತಪಟ್ಟರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್).

ಮೊಹಿಯುದ್ದೀನ್ ಸಾಹೇಬರು ಸಮಾಜ ಸೇವಕರೂ ವೈದ್ಯರೂ ಆಗಿದ್ದರು. ಅವರ ಪರಿಶ್ರಮದ ಫಲವಾಗಿ 1951ರಲ್ಲಿ ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತು ರೂಪೀಕರಿಸಲ್ಪಟ್ಟಿತು. ಅವರ ಮೃತದೇಹವನ್ನು ಮಡಿಕೇರಿಯಲ್ಲೇ ದಫನ ಮಾಡಲಾಯಿತು. ಮೃತರು ಪತ್ನಿಯನ್ನೂ ನಾಲ್ವರು ಗಂಡುಮಕ್ಕಳನ್ನೂ ನಾಲ್ವರು ಹೆಣ್ಣುಮಕ್ಕಳನ್ನೂ ಅನೇಕ ಅಭಿಮಾನಿಗಳನ್ನೂ ಅಗಲಿ ಹೋಗಿದ್ದಾರೆ.

ನಿಧನ ಹೊಂದಿದ ಇಬ್ಬರ ಆತ್ಮಗಳಿಗೂ ಅಲ್ಲಾಹು ಚಿರಶಾಂತಿಯನ್ನೂ ಮೃತರ ಬಂಧುಮಿತ್ರಾದಿಗಳಿಗೆ ಸಹನೆಯನ್ನೂ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

# ಸಂಪಾದಕರಿಗೆ ಪತ್ರ

ಪ್ರಿಯರೇ,

ನಮ್ಮ ಗುರಿ ಜಾತ್ಯಾತೀತ ಸಮಾಜದ ರಚನೆ. ಪ್ರತೀ ವ್ಯಕ್ತಿ ಅವನವನ ಧರ್ಮವನ್ನು ಪಾಲಿಸಿಕೊಂಡು ಬರಲು, ಅವನಿಗೆ ಇಷ್ಟವಾದ ದೇವರನ್ನು ಪೂಜಿಸಲು ಸ್ವತಂತ್ರನು. ಮೂಢನಂಬಿಕೆಗೆ ಹೊರತಾದ, ಯಾವದೇ ಯಾರೇ ಹೊಂದಿರಲಿ, ಅದನ್ನು ನಾವು ಗೌರವಿಸಬೇಕು. ದೇವರು ಒಬ್ಬನೇ, ನಾಮ ಹಲವು — ಈಶ್ವರ ಅಲ್ಲಾ ತೇರೆ ನಾಮ್. ಇದು ನಾವು ಒಪ್ಪುವ ಸೂತ್ರ. ದೇವರು ಇಲ್ಲ ಎನ್ನುವವರೊಡನೆಯೂ ನಮಗೆ ಜಗಳವಿಲ್ಲ.

ಈ ಭಾವನೆಗಳನ್ನು ಪ್ರಚುರಪಡಿಸುವ ಗುರಿ ನಿಮ್ಮ ಪತ್ರಿಕೆಯದ್ದಾಗಲಿ. ಈಗಲೂ ಅದೇ ಆಗಿದೆ ಎಂದು ನಿಮ್ಮ ಪತ್ರಿಕೆಯ ಪುಟಗಳನ್ನು ಒಟ್ಟಾರೆ ಅವಲೋಕಿಸಿದಾಗ ನನಗೆ ಅನ್ನಿಸಿತು. ತಿಳಿವಳಿಕೆ ಹೆಚ್ಚಿಸುವ ದೃಷ್ಟಿಯಿಂದ ಎಷ್ಟು ಪತ್ರಿಕೆ ಪ್ರಕಟವಾದರೂ ಅದು ಹೆಚ್ಚಲ್ಲ. ನಿಮ್ಮ ಪತ್ರಿಕೆಗೆ ಎಲ್ಲ ಯಶಸ್ಸೂ ಕೋರುತ್ತೇನೆ.

ಹಾಫಿಸರ ಕತೆಗಳನ್ನೂ ಕುರಾನಿನ ಕತೆಗಳನ್ನೂ ಸಾಧ್ಯವಾದರೆ ಪ್ರಕಟಿಸಿ.

ಬ್ರಹ್ಮಾವರ — **ಬೈಕಾಡಿ ವೆಂಕಟಕೃಷ್ಣರಾಯ.**

***

ಪ್ರಿಯರೇ,

ನನ್ನ ನೆಚ್ಚಿನ ಪತ್ರಿಕೆಯಾದ "ಯುಗರಶ್ಮಿ"ಯನ್ನು ಸುಮಾರು ಎರಡು ವರ್ಷಗಳಿಂದಲೂ ನೋಡುತ್ತಾ ಬಂದಿರುವೆನು. ನಿಜಕ್ಕೂ ಸತ್ಯಾಂಶವನ್ನು ಒರೆಗಲ್ಲಿಗಚ್ಚಿ ತಿಳಿದು ಧರ್ಮ, ಬೋಧನೆಗಳನ್ನು ಪ್ರಕಟಿಸುತ್ತಿರುವ ಏಕೈಕ ಪತ್ರಿಕೆ ಯುಗರಶ್ಮಿಯೊಂದೇ ಎಂದು ತಿಳಿಯಿತು. ಈ ಶತಮಾನದಲ್ಲೂ ಹಲವು ಧರ್ಮಗಳನ್ನು ತಿಳಿಯಬಯಸುವುದು ಯುಗರಶ್ಮಿಯಂತಹ ಪತ್ರಿಕೆಯಿಂದಲೇ. ಯುಗರಶ್ಮಿ ನಾಲ್ಕನೆ ವರ್ಷದಲ್ಲಿ ಹೆಜ್ಜೆಯಿಡುತ್ತಿರುವುದಕ್ಕೆ ನನ್ನ ಶುಭಹಾರೈಕೆ.

ಬೇರೆ ಧರ್ಮಗಳ ಪರಿಚಯ ಇನ್ನೂ ಅಗತ್ಯ.

**ಮೈಸೂರು** — **ಮಂಚಯ್ಯ**
ಸಂಚಾಲಕ, ಗಾಂಧಿನಗರ ವಿದ್ಯಾರ್ಥಿಗಳ ಸಂಘ.

***

**ಮಾನ್ಯರೇ,**

ನಿಮ್ಮ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ಯುಗರಶ್ಮಿ" ಸಂಚಿಕೆ ನೋಡಿದೆ. ಸಂತೋಷವಾಯಿತು. ನಮ್ಮ ಸಮಾಜದ ಎಲ್ಲ ಧರ್ಮಗಳ ಬಗ್ಗೆ ಉದಾತ್ತ ಮನೋಭಾವವನ್ನು ಹೊಂದಿರುವ ತಾವು "ಯುಗರಶ್ಮಿ"ಯ ಮೂಲಕ ಅದನ್ನು ಹೊರಹೊಮ್ಮಿಸುತ್ತಿರುವುದು ಕನ್ನಡಿಗರಾದ ನಾವು ಹೆಮ್ಮೆ ಪಡುವಂತಹದು.

**ಮೈಸೂರು** — ಪಿ. ಆರ್. ತಿಪ್ಪೇ ಸ್ವಾಮಿ
ಕಲಾವಿದ ಮತ್ತು ಪುರಾತತ್ವ ವಸ್ತುಸಂಗ್ರಹಾಲಯದ ಕ್ಯೂರೇಟರ್, ಮಾನಸಗಂಗೋತ್ರಿ.

***

ಮಾನ್ಯ ಸಂಪಾದಕರೆ,

.........ತಾವು ಮುಸ್ಲಿಂ ಮತದವರಾದರೂ ಹಿಂದು, ಕ್ರೈಸ್ತ, ಬುದ್ಧ ಮುಂತಾದ ಇತರ ಮತಗಳನ್ನೂ ಗೌರವ, ವಿಶ್ವಾಸದಿಂದ ಕಾಣುವುದು ಬೇರೆಯವರಿಗೆ ದರ್ಶಕರಾಗಿರುವುದು ನನಗೆ ಸಂತೋಷ.

**ಬೆಂಗಳೂರು** — **ಓರ್ವ ಹಿಂದೂ ಅಧ್ಯಾಪಿಕೆ.**

ಪ್ರಿಯರೆ,

ಕೆಲವು ತಿಂಗಳುಗಳಿಂದ ನಾನು ನಿಮ್ಮ "ಯುಗರಶ್ಮಿ" ಪತ್ರಿಕೆಯನ್ನು ಓದುತ್ತಿದ್ದೇನೆ. ಅದು ಧಾರ್ಮಿಕ ವಿಚಾರಗಳಿಂದ ತುಂಬಿಕೊಂಡಿದೆ. ನಿಮ್ಮ ಪತ್ರಿಕೆಯ ಮೂಲಕ ಇಸ್ಲಾಮ್ ಧರ್ಮದ ಬಗ್ಗೆ ಇನ್ನೂ ಹೆಚ್ಚನ್ನು ಕಲಿಯಲು ನಾನು ಇಚ್ಛಿಸುತ್ತೇನೆ. ಇಸ್ಲಾಂ ಮತ್ತು ಇತರ ಧರ್ಮಗಳ ಬಗ್ಗೆ ಯಥಾರ್ಥ ವಿಚಾರಗಳನ್ನು ತಿಳಿಯುವರೆ ಅದರ ವಾಚಕರಿಗೆ ನಿಮ್ಮ ಪತ್ರಿಕೆ ಸಹಾಯಕಾರಿಯಾಗಲೆಂದು ಹಾರೈಸುತ್ತೇನೆ. ನಿಮ್ಮ ಪತ್ರಿಕೆಗೆ ಉಜ್ವಲ ಯಶಸ್ಸನ್ನು ಕೋರುತ್ತೇನೆ.

ಓರ್ವ ಮುಸ್ಲಿಂ ಓದುಗ.

ಚಿಕ್ಕಮಗಳೂರು

ಮಾನ್ಯರೆ,

ಜಲಾಲುದ್ದೀನ್ ಶಮ್ಸ್‌ರವರ "ಯೇಸುಕ್ರಿಸ್ತರು ಮೃತರಾದುದು ಎಲ್ಲಿ?" ಉತ್ತಮ ನಿರೂಪಣೆಯಿಂದ ಮನಸ್ಸನ್ನಾಕರ್ಷಿಸಿತು. ಬುದ್ಧಿಗೆ ಮತ್ತು ವಿವೇಕಕ್ಕೆ ಪ್ರಾಧಾನ್ಯತೆಯಿರುವ ಈ ಯುಗದಲ್ಲಿ ಮಾನವನಿಗೆ ಈ ವಿಷಯದಲ್ಲಿ ಇದಕ್ಕಿಂತಲೂ ಸುಸ್ಪಷ್ಟವಾಗಿ ವಿವರಿಸಿ ತಿಳಿಸುವ ಗ್ರಂಥದ ಆವಶ್ಯಕತೆಯಿಲ್ಲವೆಂದು ತೋರುತ್ತದೆ. ಜಗತ್ತಿನ ಮುಕ್ಕಾಲುಭಾಗವೂ ಈ ಸ್ಪಷ್ಟ ವಾಸ್ತವಿಕತೆಯಿಂದ ವಂಚಿತವಾಗಿರುವುದು ಆಶ್ಚರ್ಯ ಮತ್ತು ದೊಡ್ಡ ದುರಂತ. 'ಅಬೂತಾಹಿರ್'ರವರ ಸರಳ ಭಾಷಾಂತರ ಇಲ್ಲಿ ಎದ್ದು ಕಾಣುವಂತಹದು.

ಟಿ. ಅಹ್ಮದ್ ರಶೀದ್.

ದುಬೈ

(22ನೆ ಪುಟದಿಂದ)

ಸೇವೆಗಳಿಗೆ ಅರ್ಹರಾದ ಮುಸ್ಲಿಮರು ಅಲಭ್ಯವಾಗಿದ್ದ ಕಾಲಘಟ್ಟದಲ್ಲಿ ಕೂಡ, ಅಧ್ಯಾತ್ಮಕ್ಕೆ ತುಸುವಾದರೂ ಕುಂದುಂಟಾಗದ ರೀತಿಯಲ್ಲಿ ಭೌತಿಕ ಜೀವನದ ಔನ್ನತ್ಯಕ್ಕೆ ಏರಿಹೋಗಲು ಅಹ್ಮದಿಯರಿಗೆ ಸಾಧ್ಯವಾದುದು ಆ ಕ್ರಮವನ್ನು ಅವರು ಅವಲಂಬಿಸಿದುದರಿಂದಾಗಿತ್ತು......"

ಸೌದಿ ಅರೇಬ್ಯ. ಬಶೀರ್ ಮೊಗ್ರಾಲ್.

("ಮಾತೃಭೂಮಿ" ಮಲೆಯಾಳಿ ವಾರಪತ್ರಿಕೆಯಲ್ಲಿ ಭಾರತೀಯ ಮುಸ್ಲಿಮರ ಕುರಿತು ಪ್ರಕಟವಾದ ಒಂದು ಲೇಖನಕ್ಕೆ, ವಾಚಕರೋರ್ವರ ಪ್ರತಿಕ್ರಿಯೆ — "ಮಾತೃಭೂಮಿ" ವಾರಪತ್ರಿಕೆ, ಆಗೋಸ್ತು 13ರ ಸಂಚಿಕೆಯಿಂದ.

—ಸಂ.)

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

".........ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

".........ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore575 001.

# ಓದಿದ್ದು ............!

"ಪಾಕಿಸ್ತಾನದ ಲಷ್ಕರಿ ಆಡಳಿತೆಗಾರ ಕೈಗೊಂಡ ಕಾರ್ಯಕ್ರಮಗಳನ್ನು ಸೌದಿ ಅರೇಬಿಯಾದ ಇಸ್ಲಾಮಿ ಶಿಕ್ಷಾನಿಯಮಗಳಿಗೆ ನೀವು ಹೋಲಿಸಿರುವಿರಿ.

ಸೌದಿ ಅರೇಬಿಯದಲ್ಲಿ ಜಾರಿಯಲ್ಲಿರುವ ವಂಶ ಪಾರಂಪರ್ಯದ ರಾಜ್ಯಾಡಳಿತೆಯೇ ಅನಿಸ್ಲಾಮಿಕವಾಗಿದೆ. ಇಸ್ಲಾಮ್ ದೊರೆತನವನ್ನು ಅಂಗೀಕರಿಸುವುದಿಲ್ಲ. ಖಾಲಿದ್ ರಾಜ ತನ್ನ ರಾಜ ಕುಟುಂಬದ ಸದಸ್ಯರಿಂದ ಚುನಾಯಿಸಲ್ಪಟ್ಟಿರುವರೇ ಹೊರತು ಪ್ರಜೆಗಳಿಂದ ಚುನಾಯಿತರಾಗಿಲ್ಲವಷ್ಟೆ? ಅವರಿಗೆ ಇಸ್ಲಾಮೀ ನಿಯಮಗಳನ್ನು ಜಾರಿಯಲ್ಲಿ ತರಲು ಯಾವ ಅಧಿಕಾರವಿದೆ? ಅವರು ಝಕಾತ್ ಕೊಡುತ್ತಿರುವರೇ? ಖುಲಫಾವುರ್ರಾಶಿದೀನ್ (ಪ್ರಥಮ ನಾಲ್ವರು ಖಲೀಫರು) ನಡೆಸಿದ ಜೀವಿತಕ್ರಮಕ್ಕೆ ಈ ಖಾಲಿದ್ ರಾಜರ ಐಷಾರಾಮದ ಜೀವನ ಅತ್ಯಲ್ಪವಾದ ಹೋಲಿಕೆಯನ್ನಾದರೂ ಹೊಂದಿದೆಯೇ? ಒಬ್ಬ ಕಳ್ಳನ ಕೈಗಳನ್ನು ತುಂಡರಿಸುವ ಮೊದಲು ಮತ್ತು ಒಬ್ಬ ರಾಜಕುಮಾರಿಯನ್ನು ವ್ಯಭಿಚಾರಕ್ಕಾಗಿ ತಲೆಗಡಿಯುವ ಮೊದಲು ತನ್ನ ರಾಜ್ಯದಲ್ಲಿ ಇಸ್ಲಾಮ್ ಧರ್ಮ ವಿಧಿಸಿರುವ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ನಿಯಮಗಳನ್ನು ಖಾಲಿದ್ ರಾಜ ಜಾರಿಗೆ ತಂದಿರುವರೇ? ಪವಿತ್ರ ಖುರ್‌ಆನ್ ವ್ಯಭಿಚಾರಕ್ಕೆ ತಲೆಗಡಿಯುವ ಶಿಕ್ಷೆಯನ್ನು ಸೂಚಿಸಿಲ್ಲ. ಅದು ಒಂದು ನೂರು ಛಡಿಯೇಟುಗಳ ಶಿಕ್ಷೆಯನ್ನು ವ್ಯಭಿಚಾರಕ್ಕೆ ವಿಧಿಸಿದೆ. (ಪವಿತ್ರ ಖುರ್‌ಆನ್, 24:2); ಮಾತ್ರವಲ್ಲ ಒಬ್ಬ ವ್ಯಭಿಚಾರಿ ಹೆಂಗಸು ವ್ಯಭಿಚಾರಿ ಗಂಡಸನ್ನು ಮದುವೆಯಾಗಬಹುದು. (ಪವಿತ್ರ ಖುರ್‌ಆನ್, 24:3).

ಸೌದಿ ರಾಜ ಮಾಡುವ ಕೆಲಸಗಳು ವರ್ಲ್ಡ್ ಮುಸ್ಲಿಮ್ ಕಾನ್‌ಫರೆನ್ಸ್ (ರಾಬಿತತ್) ಅನುಮೋದಿಸಿ ಸ್ತುತಿಸುವಂತೆ ಮಾಡಲಿಕ್ಕಾಗಿದೆ. ರಾಬಿತ ತನ್ನ ಇರುವಿಕೆಗೆ ಸೌದಿ ರಾಜರ ಔದಾರ್ಯವನ್ನು ಆಶ್ರಯಿಸಿದ್ದು, ಸಿಕ್ಕಾಪಟ್ಟೆ ಅನಿಸ್ಲಾಮಿಕ ತೀರ್ಪುಗಳನ್ನು ಹೊರಡಿಸುತ್ತಾ ಇದೆ. (ಉತ್ತಮ ಮುಸ್ಲಿಮರಾದ ಅಹ್ಮದಿಯರನ್ನು ಅಮುಸ್ಲಿಮರೆಂದು ಘೋಷಿಸಿದುದು ರಾಬಿತದ ತೀರ್ಮಾನಗಳಲ್ಲೊಂದಾಗಿದೆ!).

**ಕೊಚ್ಚಿನ್ ಡಾಕ್ಟರ್ ಪಿ. ಮುಹಮ್ಮದ್ ಅಲಿ.**

**("ಇಲ್ಲಸ್ಟ್ರೇಟೆಡ್ ವೀಕ್ಲೀ ಆಫ್ ಇಂಡಿಯಾ" ದ ಜೂನ್ 25ರ ಸಂಚಿಕೆಯಲ್ಲಿ ಪ್ರಕಟವಾದ ಸಂಪಾದಕರಿಗೆ ಬರೆದ ಪತ್ರ.** ಡಾಕ್ಟರ್ ಪಿ. ಮುಹಮ್ಮದ್ ಅಲಿ, M.B.E., M.B.B.S., D.P.H. ಅವರು ಕೊಚ್ಚಿಯಿಂದ ಹೊರಡುವ "ಕೃಪಾ" ಎಂಬ ಮುಸ್ಲಿಂ ತ್ರೈಮಾಸ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ. —ಸಂ.)

---

"ಭಾರತದ ಮುಸ್ಲಿಮರ ಚರಿತ್ರೆಯನ್ನು ಬರೆಯುವವರಿಗೆ ಮರೆತುಬಿಡಲು ಅಸಾಧ್ಯವಾದ ಒಂದು ಸಂಭವ, ಈ ಶತಮಾನದಲ್ಲಿ ಭಾರತದಲ್ಲಿ ಜನ್ಮತಾಳಿದ ಅಹ್ಮದಿಯಾ ಸಂಘಟನೆಯ ಚರಿತ್ರೆಯಾಗಿದೆ. ಮತಲೋಕದಲ್ಲಿ ಸಾಮಾನ್ಯವಾಗಿಯೂ ಮುಸ್ಲಿಮರೆಡೆಯಲ್ಲಿ ವಿಶಿಷ್ಟವಾಗಿಯೂ ಅದು ಉಂಟುಮಾಡಿದ ಪರಿವರ್ತನೆಗಳೂ ಪರಿಷ್ಕರಣಗಳೂ ಗಣನೀಯ. ಮತಾಚಾರ್ಯರ ಜನ್ಮಭೂಮಿಯಾದ ಭಾರತದಲ್ಲಿ ಜನ್ಮವೆತ್ತಿದ ಒಂದು ಮುಸ್ಲಿಂ ಸಂಘಟನೆಯೆಂಬ ನೆಲೆಯಲ್ಲಿ ಅಹ್ಮದಿಯಾ ಸಂಘಟನೆಯೂ ಅದರ ಸ್ಥಾಪಕರಾದ ಹಝ್ರತ್ ಅಹ್ಮದ್ (ಅ) ಅವರೂ ಲೋಕದ ವಿಶೇಷಗಮನಕ್ಕೆ ಪಾತ್ರರಾದರು.

'ಒಡಕನ್ನುಂಟುಮಾಡಿ ಆಳುವ' ಬ್ರಿಟಿಷರ ಗುಪ್ತ ಯೋಜನೆಗೆ ಗುರಿಯಾಗಿ ಮುಸ್ಲಿಮರೂ ಹಿಂದೂಗಳೂ ಪರಸ್ಪರ ಹೊಡೆದಾಡಲು ತೊಡಗಿ, ಒಂದು ಸಮುದಾಯದ ರಕ್ತಕ್ಕಾಗಿ ಮತ್ತೊಂದು ಸಮುದಾಯ ಹಾತೊರೆಯುತ್ತಿದ್ದ ಒಂದು ಕಾಲಘಟ್ಟದಲ್ಲಿ ಧರ್ಮಸಾಮರಸ್ಯದ ದೀವಟಿಗೆಯೊಂದಿಗೆ ರಂಗವೇಶಮಾಡಿ ಮತಮೈತ್ರಿಯ ಒಂದು ಹೊಸ ಯುಗಕ್ಕೆ ನಾಂದಿಯನ್ನುಂಟುಮಾಡಿದ ಹಝ್ರತ್ ಅಹ್ಮದರ ಚರಿತ್ರೆಯನ್ನು ಲೇಖಕನು ಬರೆಯದೆ ಬಿಟ್ಟದ್ದು ಚಂದವೆನಿಸಲಿಲ್ಲ.

ಭೌತಿಕ ವಿದ್ಯಾಭ್ಯಾಸಕ್ಕೆದುರಾಗಿ ಸಂಪ್ರದಾಯವಾದಿ ಪುರೋಹಿತರು ಒಂದು ಕಡೆಯಲ್ಲೂ ಭೌತಿಕ ವಿದ್ಯಾಭ್ಯಾಸಕ್ಕೆ ಮಾತ್ರ ಪ್ರಾಧಾನ್ಯವನ್ನಿತ್ತು ಸರ್‌ಸಯ್ಯದ್ ಇನ್ನೊಂದು ಕಡೆಯಲ್ಲೂ ಭಿನ್ನತೆಯನ್ನು ಸೃಷ್ಟಿಸಿದಾಗ, ಆಧ್ಯಾತ್ಮಿಕ ಮತ್ತು ಭೌತಿಕ ಪ್ರಯೋಜನಗಳನ್ನು ಒಟ್ಟಿಗೆ ಗಳಿಸಲು ಪರ್ಯಾಪ್ತವಾದ ಒಂದು ಜೀವನ ಕ್ರಮವನ್ನು ತನ್ನ ಸಮುದಾಯಕ್ಕೆ ಅವರು ತೋರಿಸಿಕೊಟ್ಟರು. ಸರಕಾರಿ

(21ನೆ ಪುಟಕ್ಕೆ)

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

★

ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್

★

ಅನುವಾದಕ:

ಮುಹಮ್ಮದ್ ಯೂಸುಫ್



# ಹಝ್ರತ್ ಅಹ್ಮದ್

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರು 1835ರಲ್ಲಿ ಖಾದಿಯಾನಿನಲ್ಲಿ (ಪಂಜಾಬ್) ಜನಿಸಿದರು. ಅವರು ಕಿರಿಯ ವಯಸ್ಸಿನಲ್ಲೇ ಖುರ್ಆನ್ ಪಠನದಲ್ಲೂ ಮತಪರವಾದ ಅಧ್ಯಯನದಲ್ಲೂ ಮಗ್ನರಾಗಿದ್ದರು. ತನ್ನ ಜೀವಿತ ಪರ್ಯಂತ ಖುರ್ಆನಿನ ಮತ್ತು ಇಸ್ಲಾಮಿನ ಪ್ರಭಾವವನ್ನು ಪ್ರಕಾಶಗೊಳಿಸಲಿಕ್ಕಾಗಿಯೂ ಪರಮಾತ್ಮನ ಮಹತ್ವವನ್ನು ಎತ್ತಿತೋರಿಸಲಿಕ್ಕಾಗಿಯೂ ಅವರು ಬದ್ಧಕಂಕಣರಾಗಿದ್ದರು. ಇಸ್ಲಾಂ ಧರ್ಮ ನೀಚರೀತಿಯ ಆಕ್ಷೇಪ-ಆಕ್ರಮಣಗಳಿಗೆ ಬಲಿಯಾಗಿ, ಮುಸ್ಲಿಮರ ಲೌಕಿಕ ಅಭಿವೃದ್ಧಿಗೆ ಹಾನಿಯುಂಟಾಗಿ, ಅವರ ಮತವಿಶ್ವಾಸ ಸಂದೇಹವಿತರ್ಕಗಳಿಗೆ ಗುರಿಯಾಗಿ ಕೇವಲ ನಾಮಮಾತ್ರವಾಗಿದ್ದ ಸಂದರ್ಭದಲ್ಲಿ ಅವರು ಇಸ್ಲಾಂ ಧರ್ಮದ ನ್ಯಾಯಸಮರ್ಥನೆಗೂ ತತ್ವವಿಶದೀಕರಣಕ್ಕೂ ಉದ್ಯುಕ್ತರಾದರು. ಇಸ್ಲಾಂ ಸಜೀವಧರ್ಮವೆಂದೂ ಅದನ್ನು ಅನುಸರಿಸಿದರೆ ಮನುಷ್ಯನಿಗೆ ಪರಮಾತ್ಮನೊಡನೆ ಸಂಪರ್ಕವನ್ನು ಸ್ಥಾಪಿಸಲಿಕ್ಕೂ ಅವನ ದಿವ್ಯ ವಾಣಿಯನ್ನು ಆಲಿಸಲಿಕ್ಕೂ ಸಾಧ್ಯವಾಗುವುದೆಂದೂ ಅವರು ಸಿದ್ಧಾಂತಿಸಿದರು. ಖುರ್ಆನಿನ ಪಾಠಗಳೂ ಆದರ ನಿಯಮ ಪ್ರಮಾಣಗಳೂ ಮನುಷ್ಯನನ್ನು ನೈತಿಕವಾಗಿಯೂ ಮಾನಸಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಉನ್ನತಿಗೇರಿಸಿ ಪೂರ್ಣತೆಗೆ ತಲಪಿಸಲು ಪರ್ಯಾಪ್ತವಾಗಿವೆಯೆಂದು ಅವರು ರುಜುಪಡಿಸಿದರು. ತಾನು ಖುರ್ಆನ್ ಮತ್ತು ಬೈಬಲಿನಲ್ಲಿರುವ ಭವಿಷ್ಯೋಕ್ತಿಗಳನುಸಾರ "ವಾಗ್ದತ್ತ ಮಸೀಹಾ" ಆಗಿ ದೈವನಿಯುಕ್ತನಾಗಿರುವೆನೆಂದು ಅವರು ಘೋಷಿಸಿದರು. 1889ರಲ್ಲಿ ಅವರು ಸ್ವಶಿಷ್ಯತ್ವಕ್ಕೆ ಜನರನ್ನು ಸ್ವೀಕರಿಸತೊಡಗಿದರು. ಅವರು ಸ್ಥಾಪಿಸಿದ ಈ ಸಂಘಟನೆ (ಅಹ್ಮದಿಯಾ ಸಂಘಟನೆ) ಲೋಕದ ನಾನಾ ಭಾಗಗಳಲ್ಲಿ ಪ್ರಚಾರ ಕೇಂದ್ರಗಳನ್ನೂ ಮಸೀದಿಗಳನ್ನೂ ಸ್ಥಾಪಿಸಿ ಧರ್ಮಸೇವೆ ಮಾಡುತ್ತಿದೆ. ಅವರು ವಿರಚಿಸಿದ ಸುಮಾರು ಎಂಭತ್ತು ಪುಸ್ತಕಗಳಲ್ಲಿ ಹೆಚ್ಚಿನವು ಉರ್ದುಭಾಷೆಯಲ್ಲಿವೆ; ಕೆಲವು ಅರಬಿ ಭಾಷೆಯಲ್ಲೂ ಪಾರ್ಸಿ ಭಾಷೆಯಲ್ಲೂ ಇವೆ. 1908ರಲ್ಲಿ ಅವರು ಇಹಲೋಕ ತ್ಯಜಿಸಿದರು.

# ಮುನ್ನುಡಿ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರು ಉರ್ದುವಿನಲ್ಲಿ ಬರೆದ ಈ ಉಪನ್ಯಾಸವನ್ನು, 1896ನೇ ಇಸವಿ ಡಿಸೆಂಬರ್ 26ರಿಂದ 29ರ ವರೆಗೆ ಲಾಹೋರಿನಲ್ಲಿ ಜರಗಿದ "ಸರ್ವಧರ್ಮ ಸಮ್ಮೇಳನ"ದಲ್ಲಿ, ಅವರ ಶಿಷ್ಯ ಪ್ರಮುಖರಾದ ಮೌಲವಿ ಅಬ್ದುಲ್ ಕರೀಂ ಸಿಯಾಲ್ ಕೋಟಿ ಅವರು ಓದಿದರು. ಈ ಸಮ್ಮೇಳನವನ್ನು ಓರ್ವ ಹಿಂದೂ ಶ್ರೇಷ್ಠಸಾಧು ಸ್ವಾಮಿ ಶೋಗನ್‌ಚಂದರ್ ಅವರು ವ್ಯವಸ್ಥಾಪಿಸಿದ್ದರು. ಪ್ರಸ್ತುತ ಧರ್ಮಸಮ್ಮೇಳನದ ಕಾರ್ಯನಿರ್ವಾಹಕ ಸಮಿತಿಯು ಐದು ಪ್ರಧಾನ ಪ್ರಶ್ನೆಗಳನ್ನು ಎಲ್ಲಾ ಮತಧರ್ಮಗಳ ಮುಂದಿರಿಸಿದ್ದಿತು. ಆ ನಿರ್ದಿಷ್ಟ ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರವನ್ನು ಈ ಉಪನ್ಯಾಸದಲ್ಲಿ ಪ್ರತಿಪಾದಿಸಲಾಗಿದೆ. ಆ ಪ್ರಶ್ನೆಗಳು ಈ ಕೆಳಗಿನವು:

1. ಮನುಷ್ಯನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.

2. ಮನುಷ್ಯನ ಮರಣಾನಂತರದ ಸ್ಥಿತಿ.

3. ಮನುಷ್ಯನ ಐಹಿಕ ಜೀವಿತೋದ್ದೇಶ ಮತ್ತು ಸಂಪ್ರಾಪ್ತಿ ಮಾರ್ಗಗಳು.

4. ಧರ್ಮಾನುಸರಣೆ ಇಹ-ಪರ ಜೀವಿತದಲ್ಲುಂಟು ಮಾಡುವ ಫಲಗಳು.

5. ದೈವಜ್ಞಾನಸಿದ್ಧಿಯ ಮಾರ್ಗಗಳು.

ಈ ಸಮ್ಮೇಳನದಲ್ಲಿ ಇಸ್ಲಾಂ, ಕ್ರೈಸ್ತ, ಸನಾತನ ಧರ್ಮ, ಬ್ರಹ್ಮಸಮಾಜ, ಆರ್ಯಸಮಾಜ, ಸಿಖ್, ಫ್ರೀ ಥಿಂಕರ್ಸ್ (Free Thinkers), ರಿಲೀಜಿಯನ್ ಆಫ್ ಹಾರ್ಮನಿ (Religion of Harmony), ಥಿಯೋಸೊಫಿಕಲ್ ಸೊಸೈಟಿ (Theosophical Society) ಮೊದಲಾದ ಧರ್ಮ ಪ್ರತಿನಿಧಿಗಳು ಭಾಷಣಮಾಡಿದ್ದರು. ಈ ಸಭೆಯಲ್ಲಿ ಏಳೆಂಟು ಸಾವಿರ ವಿದ್ಯಾವಂತರು ಶ್ರೋತೃಗಳಾಗಿದ್ದರು.

ಈ ಉಪನ್ಯಾಸವು ಎರಡನೆಯ ದಿನದ ಸಮ್ಮೇಳನದಲ್ಲಿ ಓದಲು ಆರಂಭಿಸಲ್ಪಟ್ಟಿತು. ನಿಶ್ಚಯಿಸಲ್ಪಟ್ಟ ಎರಡು ಗಂಟೆಗಳೊಳಗೆ ಉಪನ್ಯಾಸವು ಓದಿ ಮುಗಿಯದ ಕಾರಣದಿಂದ ಕಾರ್ಯಕ್ರಮ ಪ್ರಕಾರ ನಂತರದ ಭಾಷಣಗಾರರಾಗಿದ್ದ ಜನಾಬ್ ಮೌಲವಿ ಅಬೂ ಯೂಸುಫ್ ಮುಬಾರಕಲಿ ಅವರು ತನ್ನ ಭಾಷಣದ ಸಮಯವನ್ನೆಲ್ಲಾ ಇದಕ್ಕಾಗಿ ಬಿಟ್ಟುಕೊಟ್ಟರು. ಮಾತ್ರವಲ್ಲ, ಸಂಜೆ $4\frac{1}{2}$ ಗಂಟೆಗೆ ವಿಸರ್ಜಿಸಲ್ಪಡಲಿದ್ದ ಸಮ್ಮೇಳನವನ್ನು $5\frac{1}{2}$ ಗಂಟೆಯ ವರೆಗೆ ಮುಂದುವರಿಸಲು ಕಾರ್ಯನಿರ್ವಾಹಕ ಸಮಿತಿ ತೀರ್ಮಾನಿಸಿತು. ಇಷ್ಟು ದೀರ್ಘ ಅವಧಿ ಸಿಕ್ಕಿದರೂ ಸಹ ಈ ಉಪನ್ಯಾಸವನ್ನು ಓದಿ ಮುಗಿಸಲಾಗದುದರಿಂದ, ಅದರ ಬಾಕಿ ಅಂಶವನ್ನು ಸಹ ಓದಿ ಮುಗಿಸಲಿಕ್ಕಾಗಿ ಸಮ್ಮೇಳನವನ್ನು ಒಂದುದಿನ ಮುಂದುವರಿಸಿಕೊಂಡು ಹೋಗಬೇಕೆಂಬ ಸದಸ್ಯರ ಅಪೇಕ್ಷೆಯ ಕುರಿತು ಆಲೋಚಿಸಲು ಕಾರ್ಯನಿರ್ವಾಹಕ ಸಮಿತಿಯು ಪ್ರೇರೇಪಿಸಲ್ಪಟ್ಟಿತು. ಮೊದಲು ನಿಶ್ಚಯಿಸಿದ ಪ್ರಕಾರ ಮೂರು ದಿನಗಳ ಕಾರ್ಯಕ್ರಮಗಳಿಂದ ಕೂಡಿದ ಸಮ್ಮೇಳನವನ್ನು ಮುಂದು

ವರಿಸಿಕೊಂಡು ಹೋಗಲು ಸಮ್ಮೇಳನ ಸ್ಥಳವಾದ ಇಸ್ಲಾಮಿಯಾ ಕಾಲೇಜಿನ ಅಧಿಕಾರಿಗಳಿಂದ ಅನುಮತಿ ಲಭಿಸಬೇಕಿತ್ತು. ಆ ಸಂದರ್ಭದಲ್ಲಿ ಅಲ್ಲಿ ಹಾಜರಿದ್ದ ಕಾಲೇಜು ಅಧಿಕೃತರು ಅನುಮತಿ ನೀಡಿದುದನ್ನನುಸರಿಸಿ, ಕಾರ್ಯನಿರ್ವಾಹಕ ಸಮಿತಿಯ ತೀರ್ಮಾನದ ಮೇರೆಗೆ ಸಮ್ಮೇಳನವು ನಾಲ್ಕನೆಯ ದಿನವೂ ಮುಂದುವರಿಯುವುದೆಂದು ಸಭಾಧ್ಯಕ್ಷರು ಪ್ರಖ್ಯಾಪಿಸಿದರು. ನಾಲ್ಕನೆಯ ದಿನದ ಸಮ್ಮೇಳನದಲ್ಲಿ ಈ ಉಪನ್ಯಾಸವನ್ನು ಓದಿ ಮುಗಿಸಲಾಯಿತು. ಹೀಗೆ ಈ ಭಾಷಣವನ್ನು ಸಂಪೂರ್ಣವಾಗಿ ಶ್ರವಿಸಲು ಸಂದರ್ಭ ಲಭಿಸಿದುದರಿಂದ ಸಭಿಕರು ಆಹ್ಲಾದಭರಿತರಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಈ ಉಪನ್ಯಾಸದ ಕುರಿತು ಆ ಕಾಲದ ಪತ್ರಿಕೆಗಳು ಪ್ರಕಟಿಸಿದ ನಿರೂಪಣೆಗಳಿಂದ ಇದರ ಪ್ರಾಧಾನ್ಯತೆ ಸ್ಪಷ್ಟವಾಗುತ್ತದೆ. ಸಮ್ಮೇಳನದ ಕಾರ್ಯನಿರ್ವಾಹಕ ಸಮಿತಿ ಪ್ರಕಟಿಸಿದ ಸಂಪೂರ್ಣ ವರದಿಯಿಂದ ಈ ಉಪನ್ಯಾಸದ ಮಹತ್ವವನ್ನು ಚೆನ್ನಾಗಿ ತಿಳಿಯಬಹುದಾಗಿದೆ. ವಿವಿಧ ಧರ್ಮದ ಪ್ರತಿನಿಧಿಗಳು ಮಾಡಿದ ಭಾಷಣಗಳನ್ನು ಆ ವರದಿಯಲ್ಲಿ ಕ್ರೋಢೀಕರಿಸಲಾಗಿದೆ.

ಈ ಉಪನ್ಯಾಸವು ಗ್ರಂಥರೂಪದಲ್ಲಿ ಭಾರತದ ಅನೇಕ ಭಾಷೆಗಳಲ್ಲಿ ಮಾತ್ರವಲ್ಲ, ಅರಬಿ, ಪಾರ್ಸಿ, ಚೀನಿ, ಬರ್ಮಿ, ಮಲಾಯಿ, ಪಶ್ತೋ, ಇಂಗ್ಲಿಷ್, ಫ್ರೆಂಚ್, ಜರ್ಮನಿ, ಸ್ಪಾನಿಷ್, ಸ್ವಾಹಿಲಿ, ಯೋರುಬಾ ಲುಗಾಂಡಾ ಮುಂತಾದ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟಿದೆ. ಇದರ ಇಂಗ್ಲಿಷ್ ಭಾಷಾಂತರವಾದ ''The Teachings of Islam''ನ್ನು ಕರ್ನಾಟಕ ವಿಶ್ವವಿದ್ಯಾಲಯವು 1973–74ರ ಸಾಲಿನಲ್ಲಿ B.A. ತರಗತಿಗಾಗಿ ಧಾರ್ಮಿಕ ವಿಷಯಗಳ ಪೈಕಿ ಇಸ್ಲಾಮಿನ ಅಧ್ಯಯನಕ್ಕೆ ಆಯ್ಕೆಮಾಡಿತ್ತು. ಇತ್ತೀಚೆಗೆ ಇದರ ಇಂಗ್ಲಿಷ್ ಭಾಷಾಂತರದ ಒಂದೊಂದು ಲಕ್ಷ ಪ್ರತಿಗಳು ಲಂಡನಿನಿಂದ ಮತ್ತು ರಬ್ವಾ (ಪಾಕಿಸ್ತಾನ)ದಿಂದ ಪ್ರಕಾಶಿಸಲ್ಪಟ್ಟಿವೆ.

ಈ ಗ್ರಂಥವನ್ನು ಪವಿತ್ರ ಖುರ್‌ಆನಿನ ಒಂದು ಕೈಪಿಡಿಯೆಂದು ಹೇಳಬಹುದಾಗಿದೆ. ಖುರ್‌ಆನಿನ ವ್ಯಾಖ್ಯಾನಸಂಗ್ರಹವನ್ನು ಇದು ನೀಡುತ್ತದೆ. ಈ ಗ್ರಂಥದಲ್ಲಿ ಉದ್ಧರಿಸಲಾದ ಹೆಚ್ಚಿನ ಖುರ್‌ಆನ್ ವಚನಗಳಿಗೆ ಗ್ರಂಥಕರ್ತರು ಭಾವಾರ್ಥವನ್ನು–ಶಬ್ದಾರ್ಥವನ್ನಲ್ಲ – ಕೊಟ್ಟಿರುವರು. ನಿಷ್ಪಕ್ಷಪಾತದಿಂದಲೂ ನೀತಿಬೋಧದಿಂದಲೂ ಈ ಗ್ರಂಥವನ್ನು ಸಂಪೂರ್ಣವಾಗಿ ಓದಿದ ಯಾರಿಗೂ ಇದರಲ್ಲಿ ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಮನೋಹರತೆಯು ಗೋಚರಿಸಬಹುದು.

—ಅನುವಾದಕ.

# ಇಸ್ಲಾಂ ಮತ ತತ್ತ್ವಜ್ಞಾನ

## ವಾದಗಳ ಮೂಲಾಧಾರ ದೈವಿಕ ಗ್ರಂಥಗಳಿಂದ ಆರಿಸಲ್ಪಡಬೇಕು

ವಿವಿಧ ಮತಪ್ರತಿನಿಧಿಗಳು ನಿರ್ದಿಷ್ಟ ಪ್ರಶ್ನೆಗಳನ್ನನುಸರಿಸಿ ತಮ್ಮ ತಮ್ಮ ಮತಗಳ ವಿಶೇಷತೆಗಳ ಕುರಿತು ಪ್ರತಿಪಾದಿಸುವ ಉದ್ದೇಶದಿಂದ ಉಪಸ್ಥಿತರಾಗಿರುವ ಈ ಸರ್ವಮತ ಸಮ್ಮೇಳನದಲ್ಲಿ ನಾನು ಇಸ್ಲಾಂ ಮತದ ಪ್ರತಿನಿಧಿಯೆಂಬ ನೆಲೆಯಲ್ಲಿ ಅದರ ಮಹತ್ವಗಳನ್ನೂ ಉತ್ಕೃಷ್ಟತೆಗಳನ್ನೂ ವಿಶದೀಕರಿಸುವೆನು. ವಿಷಯವನ್ನು ಆರಂಭಿಸುವ ಮೊದಲಾಗಿ, ನಾನು ಇದರಲ್ಲಿ ಪ್ರತಿಪಾದಿಸುವ ಸಂಗತಿಗಳೆಲ್ಲವೂ ದೈವಿಕ ಗ್ರಂಥವಾದ ಪವಿತ್ರ ಖುರ್‌ಆನಿನಿಂದ ಸಂಗ್ರಹಿಸಲ್ಪಟ್ಟವುಗಳಾಗಿವೆಯೆಂದು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಪ್ರತಿನಿಧಿಯೂ ತತ್ವ ಪ್ರತಿಪಾದನೆಗೆ ಆವಶ್ಯಕವಾದ ಎಲ್ಲಾ ಆಧಾರಗಳನ್ನೂ ತಾನು ದೈವಿಕವೆಂದು ನಂಬುವ ಪವಿತ್ರಗ್ರಂಥದಿಂದ ಮಾತ್ರವೇ ಉದ್ಧರಿಸಬೇಕಾದದ್ದೂ ಅದಕ್ಕೆ ವ್ಯತಿರಿಕ್ತವಾಗಿ ಹೊಸ ಒಂದು ಗ್ರಂಥವನ್ನು ರಚಿಸುವ ರೀತಿಯಲ್ಲಿ ತಾನು ನಂಬುವ ಪವಿತ್ರಗ್ರಂಥಕ್ಕೆ ಹೊರತಾದ ಹೊಸ ಆದರ್ಶಗಳನ್ನೂ ಹೊಸ ಆಧಾರಗಳನ್ನೂ ಅವಲಂಬಿಸಿ ತನ್ನ ಪ್ರಾತಿನಿಧ್ಯಾಧಿಕಾರವನ್ನು ಉಲ್ಲಂಘಿಸದಿರಬೇಕಾದದ್ದೂ ಅತ್ಯಾವಶ್ಯಕವಾಗಿದೆ. ಆದುದರಿಂದ ಪವಿತ್ರ ಖುರ್‌ಆನಿನ ಮಹಿಮಾ ವಿಶೇಷತೆಗಳನ್ನು ಸಮರ್ಥಿಸಲಿಕ್ಕೂ ಅದರ ಶ್ರೇಷ್ಟತೆಯನ್ನು ಸ್ಪಷ್ಟಪಡಿಸಲಿಕ್ಕೂ ಉದ್ದೇಶಿಸುವ ನಾನು ಅದರಿಂದ ವ್ಯಕ್ತವಾಗುವ ತತ್ವಗಳನ್ನು ಮಾತ್ರವೇ ಅವಲಂಬಿಸಿ ವಿಷಯ ಪ್ರತಿಪಾದನೆಯನ್ನು ಆ ಪವಿತ್ರ ಖುರ್‌ಆನಿನ ಪರಿಧಿಯೊಳಗೆ ನಿಯಂತ್ರಿಸುವೆನು. ಇತರ ಪ್ರತಿನಿಧಿಗಳೂ ಈ ನಿಯಮವನ್ನನುಸರಿಸಿ ನಡೆಯುವವರಾದರೆ ವಿವೇಕಿಗಳಿಗೆ ಮತಗಳ ತಾರತಮ್ಯತೆಯನ್ನು ತಿಳಿದು ಅವುಗಳ ಮಹತ್ವವನ್ನು ನಿರ್ಣಯಿಸಲು ಸಾಧ್ಯವಾಗುವುದು. ಹೀಗೆ ಎಲ್ಲಾ ಪ್ರತಿನಿಧಿಗಳೂ ತಮ್ಮ ತಮ್ಮ ಮತಗ್ರಂಥಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಆಯಾಯ ಗ್ರಂಥದ ವಚನಗಳನ್ನು ಮಾತ್ರ ಸಾಕ್ಷ್ಯವಾಗಿ ಉದ್ಧರಿಸಬೇಕಾದುದರಿಂದ ನಾನು ಮುಹಮ್ಮದ್ ಪೈಗಂಬರರ ವಚನಗಳನ್ನಾಗಲೀ ಇಲ್ಲಿ ಆಧಾರವಾಗಿ ಉದ್ಧರಿಸುವುದಿಲ್ಲ. ಯಥಾರ್ಥ ಪೈಗಂಬರರ ವಚನಗಳು ಪರಿಶುದ್ಧ ಖುರ್‌ಆನಿನಿಂದ ಸಂಗ್ರಹಿಸಲ್ಪಟ್ಟವುಗಳಾಗಿವೆ. ಆದುದರಿಂದ ಪರಿಪೂರ್ಣವೂ ಅಂತಿಮವೇದವೂ ಆದ ಪವಿತ್ರ ಖುರ್‌ಆನಿನಿಂದ ಹೊರತಾದ ಯಾವುದೇ ಆಧಾರವನ್ನೂ ನಾನಿಲ್ಲಿ ಪ್ರಸ್ತಾಪಿಸುವುದಿಲ್ಲ. ಸಂಕ್ಷಿಪ್ತವಾಗಿ, ಇಂದು ಪವಿತ್ರ ಖುರ್‌ಆನಿನ ಮಹತ್ವ ಪ್ರಕಾಶಿತವಾಗುವ ಶುಭದಿನವಾಗಿದೆ. ಈ ಸುಕೃತ್ಯವನ್ನು ನಿರ್ವಹಿಸಲು ಅಲ್ಲಾಹು ನನಗೆ ಸಹಾಯವನ್ನೀಯಲಿ. ಆಮೀನ್.

ಪ್ರಾರಂಭದಲ್ಲಿ ಪ್ರಸ್ತಾಪಿಸಲ್ಪಡುವ ಕೆಲವು ಸಂಗತಿಗಳು ಪ್ರತಿಪಾದನೀಯ ವಿಷಯಕ್ಕೆ ಸಂಬಂಧಿಸಿದ್ದವಲ್ಲವೆಂದು ಮೊದಲನೆಯ ನೋಟದಲ್ಲಿ ಕೆಲವರಿಗೆ ಭಾಸವಾಗಬಹುದು. ಆದರೆ ವಿಷಯವನ್ನು ಪೂರ್ಣವಾಗಿ ಗ್ರಹಿಸಲಿಕ್ಕೆ ಅವು ಅತ್ಯಗತ್ಯವಾದ ಸಂಗತಿಗಳಾದುದರಿಂದ ಅವುಗಳನ್ನು ಇಲ್ಲಿ ಸೇರಿಸಲು ನಾನು ಪ್ರೇರಿತನಾಗಿದ್ದೇನೆ.

## ಪ್ರಥಮ ಪ್ರಶ್ನೆಯ ಉತ್ತರ
## ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು

ಮೊದಲನೆಯ ಪ್ರಶ್ನೆಯು ಮನುಷ್ಯನ ಶಾರೀರಿಕ, ನೈತಿಕ ಹಾಗೂ ಆಧ್ಯಾತ್ಮಿಕ ಎಂಬೀ ಸ್ಥಿತಿಗಳ ಕುರಿತಾಗಿದೆ. ಪವಿತ್ರ ಖುರ್‌ಆನ್ ಈ ಮೂರು ಅವಸ್ಥೆಗಳಿಗೂ ಬೇರೆ ಬೇರೆ ಉಗಮ ಸ್ಥಾನಗಳನ್ನು ನಿಶ್ಚಯಿಸಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಮೂರು ಸ್ಥಿತಿಗಳು ಬೇರೆ ಬೇರೆಯಾಗಿ ಸ್ಫುರಣಗೊಳ್ಳುವ ಮೂರು ಉದ್ಭವ

ಸ್ಥಾನಗಳನ್ನು ಅದು ಸೂಚಿಸುತ್ತದೆ. ಇವುಗಳಲ್ಲಿ ಮೊದಲನೆಯ ಶಾರೀರಿಕಾವಸ್ಥೆಯ ಉದ್ಭವ ಸ್ಥಾನವನ್ನು **"ನಫ್ಸ್‌ಅಮ್ಮಾರ" ಅಥವಾ "ದುಷ್ಪ್ರೇರಕ ಆತ್ಮ"** ಎಂದು ಖುರ್‌ಆನ್ ನಾಮಕರಣ ಮಾಡಿರುತ್ತದೆ. ಖುರ್‌ಆನ್ ಹೀಗೆನ್ನುತ್ತದೆ: "ಇನ್ನನ್ನಫ್ಸ ಲಅಮ್ಮಾರಥುನ್ ಬಿಸ್ಸೂಇ" (12:54). ನಫ್ಸ್‌ಅಮ್ಮಾರ ಎಂದರೆ ಮನುಷ್ಯನನ್ನು ಅವನ ಪರಿಪೂರ್ಣತೆಗೂ ಧಾರ್ಮಿಕೋತ್ಕರ್ಷಕ್ಕೂ ಹಾನಿಕರವಾದ ದುರ್ಮಾರ್ಗಕ್ಕೆ ಪ್ರೇರೇಪಿಸುವ ಹಾಗೂ ಅಹಿತವೂ ಧರ್ಮವಿರುದ್ಧವೂ ಆದ ಮಾರ್ಗದಲ್ಲಿ ಅವನನ್ನು ನಡೆಸುವ ಸ್ವಭಾವದ ಆತ್ಮವಾಗಿದೆ. ಸಂಕ್ಷಿಪ್ತವಾಗಿ, ದುರ್ಮಾರ್ಗಕ್ಕೂ ಅನೀತಿಗೂ ಪ್ರೇರೇಪಿಸುವ ಈ ಸ್ವಭಾವವು ಮನುಷ್ಯಸಹಜವಾದುದಾಗಿದೆ. ನೈತಿಕಾವಸ್ಥೆಯು ಉದ್ಭವಿಸುವ ಮೊದಲು ಮನುಷ್ಯನಲ್ಲಿ ಈ ತಾಮಸಗುಣವನ್ನು ಸ್ಪಷ್ಟವಾಗಿ ಕಾಣಬಹುದು. ವಿವೇಕ ಹಾಗೂ ಜ್ಞಾನದ ಪ್ರಕಾಶದಲ್ಲಿ ನಡೆಯದೆ, ಮೃಗಗಳಂತೆ ಕೇವಲ ತಿನ್ನುವುದು, ಕುಡಿಯುವುದು, ನಿದ್ರಿಸುವುದು, ಕೋಪಗೊಳ್ಳುವುದು, ಉದ್ವೇಗಗೊಳ್ಳುವುದು ಮೊದಲಾದ ಸಹಜ ಸ್ವಭಾವಗಳಿಗೆ ಮನುಷ್ಯನು ವಿಧೇಯನಾಗಿರುವ ತನಕ ಅವನಲ್ಲಿ ಈ ಶಾರೀರಿಕಾವಸ್ಥೆಯು ಗೋಚರಿಸುತ್ತವೆ.

ಮನುಷ್ಯನು ವಿವೇಚನೆಯಿಂದಲೂ ವಿವೇಕದಿಂದಲೂ ತನ್ನ ಇಚ್ಛೆಗಳನ್ನು ನಿಯಂತ್ರಿಸಿ, ಮಿತವನ್ನು ಅಭ್ಯಸಿಸುವಾಗ ಅವನ ಸ್ವಭಾವಗಳು ಶಾರೀರಿಕಾವಸ್ಥೆಯನ್ನು ಬಿಟ್ಟು ನೈತಿಕಾವಸ್ಥೆಯನ್ನು ಪ್ರವೇಶಿಸುವುದು. ಎಂದರೆ ಮೃಗತುಲ್ಯವಾದ ಸ್ವಭಾವದಿಂದ ಸದಾಚಾರಕ್ಕೆ ಪರಿವರ್ತಿತವಾಗುವುದು.

ಎರಡನೆಯ ಘಟ್ಟವಾದ ಈ ನೈತಿಕಾವಸ್ಥೆಯ ಉಗಮಸ್ಥಾನಕ್ಕೆ **"ನಫ್ಸ್‌ಲವ್ವಾಮ"** ಅಥವಾ **"ಸ್ವಯಂ ದೂಷಿಸುವ ಆತ್ಮ"** ಎಂದಾಗಿದೆ ಹೆಸರು. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ವಲಾ ಉಖ್‌ಸಿಮು ಬಿನ್ನಫ್‌ಸಿಲ್ಲವ್ವಾಮಥಿ" (75;3) ಅಂದರೆ ಅಪರಾಧಗಳನ್ನೂ ದುಷ್ಕೃತ್ಯಗಳನ್ನೂ ಕುರಿತು ನಾನು ಸ್ವಯಂ ದೂಷಿಸುವ ಆತ್ಮದ ಪ್ರಮಾಣ ಮಾಡುತ್ತೇನೆ. ನೈತಿಕಾವಸ್ಥೆಯ ಉದ್ಭವ ಸ್ಥಾನವಾದ ಈ ನಫ್ಸ್‌ಲವ್ವಾಮವು ಮನುಷ್ಯಾವಸ್ಥೆಯ ದ್ವಿತೀಯ ಘಟ್ಟವಾಗಿದೆ. ಈ ಸ್ಥಿತಿಯನ್ನು ಪಡೆಯುವ ಮನುಷ್ಯನು ಮೃಗೀಯ ಸ್ವಭಾವದಿಂದ ಮುಕ್ತಿಯನ್ನು ಪಡೆಯುವನು. ಇಲ್ಲಿ ಸ್ವಯಂ ದೂಷಿಸುವ ಆತ್ಮದ ಆಣೆಯನ್ನು ಹಾಕಿದ್ದು ಅದನ್ನು ಮನ್ನಿಸುವುದ ಕ್ಕೋಸ್ಕರವಾಗಿದೆ. ಅನಿಯಂತ್ರಿತ ಸ್ವಭಾವ ಸ್ಥಿತಿಯಿಂದ ತಪ್ಪನ್ನು ಅರಿತು ಸ್ವಯಂ ದೂಷಿಸುವ ಸ್ಥಿತಿಗೆ ಪರಿವರ್ತನೆಗೊಳ್ಳುವುದು ಯಥಾರ್ಥವಾದ ಆತ್ಮಪರಿಶುದ್ಧತೆಯನ್ನು ಸೂಚಿಸುವುದರಿಂದ ಅದು ದೈವದೃಷ್ಟಿಯಲ್ಲಿ ಮಾನ್ಯತೆಗೆ ಪಾತ್ರವಾಗುವುದು. "ಲವ್ವಾಮ" ಎಂಬ ಪದದ ಅರ್ಥವೇ "ಸ್ವಯಂ ದೂಷಿಸುವಂತಹದ್ದು" ಎಂದಾಗಿದೆ. "ನಫ್ಸ್ ಲವ್ವಾಮ" — ಸ್ವಯಂ ದೂಷಿಸುವ ಆತ್ಮ — ಎಂದು ಈ ಅವಸ್ಥೆಯನ್ನು ಹೆಸರಿಸಿದ್ದು ಏಕೆಂದರೆ ಅದು ಗೈದ ಅಪಕೃತ್ಯಗಳ ಕುರಿತು ಸ್ವಯಂ ಪಶ್ಚಾತ್ತಾಪಪಡುತ್ತದೆ; ಮಾತ್ರವಲ್ಲ ಅನಿಯಂತ್ರಿತ ವಿಕಾರಗಳನ್ನೂ ಮೃಗೀಯವಾದ ಇಚ್ಛೆಗಳನ್ನೂ ಕಠಿಣವಾಗಿ ದ್ವೇಷಿಸುತ್ತದೆ. ಉತ್ಕೃಷ್ಟ ಸ್ವಭಾವಗಳನ್ನು ಮತ್ತು ಸದ್ಗುಣಗಳನ್ನು ಮನುಷ್ಯನಲ್ಲಿ ಉತ್ಪಾದಿಸಲಿಕ್ಕೂ ಯಾವುದೇ ರೀತಿಯ ಅಕೃತ್ಯವೂ ಅವನಿಂದ ಉಂಟಾಗದೆ ಜೀವಿತವನ್ನು ಸಮಗ್ರವಾಗಿ ಸ್ವಾಧೀನಪಡಿಸಲಿಕ್ಕೂ ವಿಷಯಾಸಕ್ತಿಗಳನ್ನು ವಿವೇಕದಿಂದ ನಿಯಂತ್ರಿಸಲಿಕ್ಕೂ ಅದು ಇಚ್ಛಿಸುತ್ತದೆ. ಹೀಗೆ "ನಫ್ಸ್ ಲವ್ವಾಮ" ದೈಹಿಕೇಚ್ಛೆಗಳನ್ನು ದ್ವೇಷಿಸಿ, ಅಪರಾಧಗಳನ್ನು ಸ್ವಯಂ ದೂಷಿಸುವುದಾದರೂ ಅದು ಇಚ್ಛೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲೂ ಸುಕೃತ್ಯಗಳನ್ನು ಮಾತ್ರವೇ ಗೈಯ್ಯಲೂ ಶಕ್ತಿಯುತವಲ್ಲ. ಕೆಲವು ಸಂದರ್ಭಗಳಲ್ಲಿ ದೈಹಿಕೇಚ್ಛೆಗಳು ಅದನ್ನು ಮೆಟ್ಟಿನಿಲ್ಲುವುದರಿಂದಾಗಿ, ಅದು ದುಷ್ಕೃತ್ಯಗಳಿಗೆ ಅಧೀನವಾಗಿ ಬಿಡುತ್ತದೆ. ಆತ್ಮದ ಈ ದುರ್ಬಲತೆಯು ಬಾಲ್ಯಾವಸ್ಥೆಯ ಬಲಹೀನತೆಗೆ ಸದೃಶವಾಗಿದೆ. ಮಗುವು ಎಡವಿಬೀಳಲು ಇಚ್ಛಿಸುವುದಿಲ್ಲವಾದರೂ ಅವರ ಕಾಲುಗಳ ಶಕ್ತಿಹೀನತೆಯ ಕಾರಣದಿಂದ ಅದು ಎಡವಿಬೀಳುತ್ತದೆ. ಅದು ತನ್ನ ಅಶಕ್ತಿಯ ಕುರಿತು ಮನಸ್ತಾಪಪಡುತ್ತದೆ. ಇದೇ ಪ್ರಕಾರ, ಈ ಅವಸ್ಥೆಯಲ್ಲಿರುವ ಆತ್ಮವು ಅದಕ್ಕೆ ಸಂಭವಿಸುವ ಪ್ರತಿಯೊಂದು ಮಾರ್ಗಭ್ರಂಶದ ನಂತರ ಪಶ್ಚಾತ್ತಾಪಪಡುತ್ತದೆ. ಅದು ಈ ಘಟ್ಟದಲ್ಲಿ ಉತ್ಕೃಷ್ಟ ಗುಣಗಳನ್ನು ಪಡೆದು, ಮೊದಲನೆಯ ಶಾರೀರಿಕಾವಸ್ಥೆಯ ಆಜ್ಞಾಲಂಘನ ಸ್ವಭಾವವನ್ನು ದ್ವೇಷಿಸುತ್ತದೆ. ಆದರೂ ಪೂರ್ಣವಾದ ನಿಯಂತ್ರಣವು ಸಾಧ್ಯವಾಗುವುದಿಲ್ಲವಾದ್ದರಿಂದ ಅದು ಕೆಲವೊಮ್ಮೆ ತನ್ನ ಕ[illegible]ವ್ಯ ಮಾರ್ಗದಿಂದ ವ್ಯತಿಕ್ರಮಿಸುತ್ತದೆ.

ಮನುಷ್ಯ[illegible] ಮೂರನೆಯ ಘಟ್ಟವನ್ನು ಆಧ್ಯಾತ್ಮಿಕ ಗುಣಗಳ ಉದ್ಭವ ಸ್ಥಾನವೆಂದು ಹೇಳಬಹುದು. ಈ

ಅವಸ್ಥೆಯನ್ನು ಪಡೆಯುವ ಆತ್ಮಕ್ಕೆ ಪವಿತ್ರ ಖುರ್‌ಆನ್ **"ನಫ್ಸ್‌ನುಮುತ್ಮ ಇನ್ನ"** ಎಂದು ಹೆಸರನ್ನಿತ್ತಿದೆ. ಅದರ ಅರ್ಥ **"ಶಾಂತಿಯನ್ನು ಗಳಿಸಿದ ಆತ್ಮ"** ಎಂದಾಗಿದೆ. ಆ ಪವಿತ್ರ ಗ್ರಂಥ ಹೀಗೆನ್ನುತ್ತದೆ: "ಯಾ ಅಯ್ಯತುಹನ್ನ ಫ್ಸುಲ್ ಮುತ್ಮ'ಇನ್ನತುರ್‌ಜಿಈ ಇಲಾ ರಬ್ಬಿಕಿ ರಾದಿಯ ತ(ನ್) ಮ್ಮರ್‌ದಿಯ್ಯ ಫದ್‌ಖುಲೀಫೀ ಇಬಾದೀ ವದ್ ಖುಲೀ ಜನ್ನತೀ" (89:28–31) ಎಂದರೆ: ಎಲೈ ಪರಮಾತ್ಮನಿಂದ ಶಾಂತಿಯನ್ನು ಗಳಿಸಿದ ಆತ್ಮವೇ, ನೀನು ಅವನಲ್ಲಿ ಸಂತೃಪ್ತನಾಗಿಯೂ ಅವನು ನಿನ್ನಲ್ಲಿ ಸಂತೃಪ್ತನಾದ ನೆಲೆಯಲ್ಲೂ ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗು; ನನ್ನ ಭಕ್ತದಾಸರ ಜೊತೆಯಲ್ಲಿ ಸೇರಿ ನನ್ನ ಸ್ವರ್ಗದಲ್ಲಿ ಪ್ರವೇಶಿಸು. ಈ ಉನ್ನತ ಘಟ್ಟದಲ್ಲಿ ಆತ್ಮವು ಸಕಲ ವಿಧದ ದುರ್ಬಲತೆಗಳಿಂದಲೂ ನ್ಯೂನತೆಗಳಿಂದಲೂ ಮುಕ್ತವಾಗಿ ಆಧ್ಯಾತ್ಮಿಕ ಶಕ್ತಿಯಿಂದ ಭರಿತವಾಗುತ್ತದೆ. ಆಗ ಅದಕ್ಕೆ ಪರಮಾತ್ಮನೊಡನೆ ಅವಿಭಾಜ್ಯವಾದ ಒಂದು ಸಂಬಂಧವು ಉಂಟಾಗಿ, ಅವನ ಹೊರತು ಜೀವಿಸಲು ಅದಕ್ಕೆ ಅಸಾಧ್ಯವಾಗುವುದು. ಯಾವ ರೀತಿಯಲ್ಲಿ ಮೇಲಿನಿಂದ ನೀರು ಭರದಿಂದ ನಿರಾತಂಕವಾಗಿ ಕೆಳಗೆ ಹರಿಯುತ್ತದೋ ಅದೇ ರೀತಿಯಲ್ಲಿ ಆತ್ಮವು ಈ ಘಟ್ಟದಲ್ಲಿ ಎಲ್ಲಾ ಪ್ರತಿಬಂಧಕಗಳನ್ನು ಅವಗಣಿಸಿ ತನ್ನ ಸೃಷ್ಟಿಕರ್ತನ ಸನ್ನಿಧಿಗೆ ಪ್ರವಹಿಸುತ್ತದೆ. ಮೇಲೆ ಹೇಳಿದ "ಎಲೈ ಪರಮಾತ್ಮನಿಂದ ಶಾಂತಿಯನ್ನು ಪಡೆದ ಆತ್ಮವೇ, ನೀನು ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗು" ಎಂಬ ದೈವ ವಾಕ್ಯವು ಸೂಚಿಸುವುದು ಇದನ್ನೇ ಆಗಿದೆ. ಆದ್ದರಿಂದ ಇದೇ ಜೀವಿತದಲ್ಲಿಯೇ –ಮರಣಾನಂತರದ ಜೀವಿತದಲ್ಲಲ್ಲ — ಆತ್ಮಕ್ಕೆ ಮಹತ್ತರವಾದ ಪರಿವರ್ತನೆಯುಂಟಾಗಿ, ಇಹಲೋಕದಲ್ಲೇ— ಪರಲೋಕದಲ್ಲಲ್ಲ—ಸ್ವರ್ಗಾನುಭೂತಿಯು ಸಿದ್ಧಿಸುತ್ತದೆ. ಈ ಘಟ್ಟದಲ್ಲಿ ಆತ್ಮವು ತನ್ನ ರಕ್ಷಕನ ಕಡೆಗೆ ಹಿಂತಿರುಗಲು ಆಜ್ಞಾಪಿಸಲ್ಪಟ್ಟಿರುವುದರಿಂದ ಈಗ ಅದರ ಪರಿಪಾಲನೆಯೂ ರಕ್ಷಣೆಯೂ ಪರಮಾತ್ಮನ ಕೈಯಲ್ಲಾಗಿದೆ ಎಂದು ಸ್ಪಷ್ಟವಾಗುತ್ತದೆ. ಈ ಉತ್ಕೃಷ್ಟ ಸ್ಥಿತಿಯಲ್ಲಿ ಪರಮಾತ್ಮನ ಪ್ರೀತಿಯೇ ಅದರ ಆಹಾರವಾಗಿ, ಪ್ರಾಣದಾನ ಮಾಡುವ ಈ ಸರೋವರದಿಂದಲೇ ಜಲಪಾನಮಾಡಿ, ಹಾಗೆ ಮೃತ್ಯುವಿನಿಂದ ಮುಕ್ತಿಯನ್ನು ಪಡೆಯುತ್ತದೆ. ಇದರ ಕುರಿತು ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆನ್ನುತ್ತದೆ: ಖದ್ ಅಫ್ಲಹ ಮನ್ ಝುಕ್ಕಾಹಾ ವ[illegible] ಖಾಬ ಮನ್ ದಸ್ಸಾಹಾ (91:10-11) ಎಂದರೆ: ಯಾವೊಬ್ಬನು ತನ್ನ ಇಂದ್ರಿಯೇಚ್ಛೆಗಳನ್ನು ನಿಗ್ರಹಿಸಿ ಆತ್ಮವನ್ನು ಶುದ್ಧೀಕರಿಸಿದನೋ ಅವನು ವಿಜಯಿಯಾದನು; ಅವನು ನಾಶಹೊಂದಲಿಕ್ಕಿಲ್ಲ. ಯಾವೋರ್ವನು ಅದನ್ನು ಅನಿಯಂತ್ರಿತವಾದ ಇಂದ್ರಿಯೇಚ್ಛೆಗಳಲ್ಲಿ ನಿಮಗ್ನವಾಗುವಂತೆ ಮಾಡಿದನೋ ಅವನು ಪರಾಜಿತನಾದನು; ಅವನು ಜೀವನದಲ್ಲಿ ನಿರಾಶೆಗೊಂಡನು.

ಸಂಕ್ಷಿಪ್ತವಾಗಿ, ಆತ್ಮದ ಈ ಮೂರು ಸ್ಥಿತಿಗಳನ್ನು ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಎಂದು ಹೆಸರಿಸಬಹುದು. ದೈಹಿಕೇಚ್ಛೆಗಳನ್ನು ನೆರವೇರಿಸುವುದರಲ್ಲಿ ಆಸಕ್ತಿಯುಳ್ಳ ಮೊದಲನೆಯ ಘಟ್ಟವಾದ ಶಾರೀರಿಕಾವಸ್ಥೆಯು ವಿಕಾರಗೊಂಡಾಗ ತುಂಬಾ ಹಾನಿಕರವಾಗಿ ಪರಿಣಮಿಸಿ ಆತ್ಮೋನ್ನತಿಯನ್ನು ತಡೆದು ನೈತಿಕ ಹಾಗೂ ಆಧ್ಯಾತ್ಮಿಕ ಸದ್ಗುಣಗಳನ್ನು ನಾಶಪಡಿಸುವುದು. ಆದ್ದರಿಂದ ಆತ್ಮದ ಈ ನೆಲೆಗೆ "ನಫ್ಸ್‌ಅಮ್ಮಾರ" (ದುಷ್ಪ್ರೇರಕ ಆತ್ಮ) ಎಂದು ಪವಿತ್ರ ಖುರ್‌ಆನ್ ಹೆಸರನ್ನಿತ್ತಿದೆ.

ಇನ್ನು ಈ ಶಾರೀರಿಕಾವಸ್ಥೆಯ ಮೇಲೆ ಖುರ್‌ಆನಿನ ಸ್ವಾಧೀನಶಕ್ತಿ ಎಷ್ಟರಮಟ್ಟಿಗಿದೆಯೆಂಬುದನ್ನೂ ತತ್ಸಂಬಂಧವಾಗಿ ಆ ಪವಿತ್ರಗ್ರಂಥ ನಿರ್ದೇಶಿಸುವ ಉಪದೇಶಗಳೇನೆಂಬುದನ್ನೂ ನೈಸರ್ಗಿಕ ವಿಕಾರಗಳಿಗೆ ಅದು ನಿಶ್ಚಯಿಸಿದ ಪರಿಮಿತಿ ಎಷ್ಟೆಂಬುದನ್ನೂ ಪರ್ಯಾಲೋಚಿಸೋಣ. ಮನುಷ್ಯನ ಈ ಶಾರೀರಿಕಾವಸ್ಥೆಗೆ ನೈತಿಕವೂ ಆಧ್ಯಾತ್ಮಿಕವೂ ಆದ ಅವಸ್ಥೆಗಳೊಂದಿಗೆ ಸುದೃಢವಾದ ಸಂಬಂಧವಿದೆಯೆಂಬುದಾಗಿ ಪವಿತ್ರ ಖುರ್‌ಆನಿನಿಂದ ತಿಳಿದುಬರುತ್ತದೆ. ಆಹಾರ ಪಾನೀಯಾದಿಗಳನ್ನು ಸೇವಿಸುವ ಕ್ರಮಗಳೂ ಸಹ ಮನುಷ್ಯನ ನೈತಿಕ ಹಾಗೂ ಆಧ್ಯಾತ್ಮಿಕ ಗುಣಗಳನ್ನು ರೂಪೀಕರಿಸುವುದರಲ್ಲಿ ಪಾತ್ರವಹಿಸುತ್ತವೆ. ಸ್ವಭಾವಸಿದ್ಧವಾದ ವಿಕಾರಗಳನ್ನೂ ಶಕ್ತಿಗಳನ್ನೂ ಧರ್ಮಶಾಸ್ತ್ರ (ಶರೀಅತ್ತು)ದ ನಿಯಮ ನಿರ್ದೇಶಗಳನ್ನನುಸರಿಸಿ ಉಪಯೋಗಪಡಿಸುವುದಾದರೆ ಉಪ್ಪಿನ ಗಣಿಯಲ್ಲಿ ಬಿದ್ದ ಪ್ರತಿಯೊಂದು ವಸ್ತು ಉಪ್ಪೇ ಆಗುವ ಹಾಗೆ ಅವೂ ನೈತಿಕ ಗುಣಗಳಾಗಿ ಪರಿವರ್ತಿತವಾಗಿ ಆಧ್ಯಾತ್ಮಿಕಾವಸ್ಥೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ಈ ಕಾರಣದಿಂದಲೇ ಉಪಾಸನಾಕರ್ಮಗಳಿಗೂ ದೈವಾರಾಧನೆಗೂ ಏಕಾಗ್ರಚಿತ್ತತೆಗೂ ಬಾಹ್ಯ ಶುಚಿತ್ವವನ್ನೂ ಶಾರೀರಿಕ ನಿರ್ಮಲತೆಯನ್ನೂ ವಿನಯಶೀಲತೆಯನ್ನೂ ಅಂಗವಿನ್ಯಾಸವನ್ನೂ ಪವಿತ್ರ ಖುರ್‌ಆನ್ ಕಡ್ಡಾಯವಾಗಿ ವಿಧಿಸಿರುತ್ತದೆ.

ಬಾಹ್ಯೇಂದ್ರಿಗಳ ವಿವಿಧ ಚಟುವಟಿಕೆಗಳನ್ನೂ ಅವು ಮನುಷ್ಯನ ಆತ್ಮದ ಮೇಲೆ ಉಂಟುಮಾಡುವ ಪ್ರಭಾವದ ಕುರಿತೂ ಗಾಢವಾಗಿ ಆಲೋಚಿಸಿದರೆ, ಮನುಷ್ಯನ ಶರೀರಕ್ಕೂ ಆತ್ಮಕ್ಕೂ ಇರುವ ನಿಕಟ ಬಂಧವು ವ್ಯಕ್ತವಾಗುತ್ತದೆ. ನಮ್ಮ ಬಾಹ್ಯ ಚಟುವಟಿಕೆಗಳು ಶರೀರಕ್ಕೆ ಸಂಬಂಧಿಸಿವೆಯಾದರೂ ಅವು ಆತ್ಮಿಕ ಸ್ಥಿತಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸುತ್ತವೆಯೆಂಬುದನ್ನು ಕಾಣಬಹುದು. ಉದಾಹರಣೆಗಾಗಿ, ಅಳಲು ಪ್ರಾರಂಭಿಸಿದಾಗ, ಅದು ಕೃತ್ರಿಮವಾಗಿದ್ದರೂ ಸರಿ, ಆ ಭಾಷ್ಪಧಾರೆಯಿಂದ ನಿರ್ಗಮಿಸುವ ಜ್ವಾಲಾತರಂಗವು ಶೀಘ್ರವಾಗಿ ಹೃದಯವನ್ನು ತಲಪುತ್ತದೆ; ಹೃದಯವು ಕಣ್ಣುಗಳನ್ನು ಅನುಕರಿಸಿ ಶೋಕಭರಿತವಾಗುತ್ತದೆ. ಕೃತ್ರಿಮವಾಗಿ ನಗುವುದಾದರೂ ಸರಿ, ಆ ಕಾರಣದಿಂದ ಹೃದಯವು ಹರ್ಷಭರಿತವಾಗುತ್ತದೆ. ಇದೇ ಪ್ರಕಾರ ಪ್ರಾರ್ಥನೆಯಲ್ಲಿ ಮಾಡುವ ಶಾರೀರಿಕ ಪ್ರಣಾಮವು ಆತ್ಮದಲ್ಲೂ ಭಕ್ತಿ ವಿನಯಾದಿ ನಮ್ರಭಾವಗಳನ್ನು ಉಂಟುಮಾಡುತ್ತದೆ. ತದ್ವಿರುದ್ಧವಾಗಿ, ಎದೆಯನ್ನು ಮುಂದಕ್ಕೆ ದೂಡಿ, ಕತ್ತನ್ನು ನೇರವಾಗಿ ನಿಲ್ಲಿಸಿ ನಡೆಯುವುದಾದರೆ ಅದು ಅಹಂಭಾವವನ್ನೂ ದುರಭಿಮಾನವನ್ನೂ ಉಂಟುಮಾಡುವುದು. ಈ ಉದಾಹರಣೆಗಳಿಂದ ಬಾಹ್ಯಾಂಗಗಳ ಚಟುವಟಿಕೆಗಳು ಆತ್ಮದ ಸ್ಥಿತಿಯನ್ನು ತದನುಸಾರವಾಗಿ ಸ್ವಾಧೀನಪಡಿಸುತ್ತವೆಯೆಂದು ಸ್ಪಷ್ಟವಾಗುತ್ತದೆ.

ಇದೇ ಪ್ರಕಾರವೇ ವಿವಿಧ ತರದ ಆಹಾರ ಪದಾರ್ಥಗಳು ಹೃದಯ ಮತ್ತು ಮಾನಸಿಕ ಶಕ್ತಿಗಳ ಮೇಲೆ ಪ್ರಭಾವವನ್ನು ಬೀರುತ್ತವೆಯೆಂಬುದು ಅನುಭವದಿಂದ ತಿಳಿಯಬಹುದು. ಉದಾಹರಣೆಗಾಗಿ, ಮಾಂಸಾಹಾರವನ್ನು ಸಂಪೂರ್ಣವಾಗಿ ತ್ಯಜಿಸುವ ಸಸ್ಯಾಹಾರಿಗಳ ಧೈರ್ಯಶಕ್ತಿಯು ಕ್ರಮೇಣ ಕುಂದುತ್ತಾ ಅವರು ಅಧೈರ್ಯವಂತರಾಗಿ ಕೊನೆಗೆ ಶೌರ್ಯದಂತಹ ದೈವದತ್ತವಾದ ಸ್ತುತ್ಯಾರ್ಹ ಗುಣವನ್ನು ಕಳೆದುಕೊಳ್ಳುವರು. ಇದಕ್ಕೆ ಪ್ರಾಕೃತಿಕವಾದ ಧಾರಾಳ ದೃಷ್ಟಾಂತಗಳಿವೆ. ಮಾಂಸಾಹಾರಿ ಮೃಗಗಳಿಗಿರುವಷ್ಟು ಧೈರ್ಯ ಸಸ್ಯಾಹಾರಿ ಮೃಗಗಳಿಗಿರುವುದಿಲ್ಲ. ಪಕ್ಷಿಗಳ ಸಂಬಂಧಿಸಿಯೂ ಇದೇ ಪ್ರಕಾರದ ಸ್ವಭಾವಗುಣವನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಆಹಾರ ಕ್ರಮದಿಂದಾಗಿ ಸ್ವಭಾವದಲ್ಲಿ ವ್ಯತ್ಯಾಸವುಂಟಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಮಾಂಸಾಹಾರವನ್ನು ತ್ಯಜಿಸಿದ ಕಾರಣದಿಂದ ಕೆಲವು ನ್ಯೂನತೆಗಳು ಉಂಟಾಗುವಂತೆಯೇ, ಅದನ್ನು ಮಿತಿಮೀರಿ ತಿಂದರೂ ಸ್ವಭಾವವು ಹಾನಿಕರವಾಗುತ್ತದೆ. ಸಸ್ಯಾಹಾರವನ್ನು ಬಹಳ ಕಡಿಮೆ ಮಾಡಿ ಮಾಂಸಾಹಾರವನ್ನು ಅಧಿಕವಾಗಿ ಭಕ್ಷಿಸಿದರೆ ಸಹನೆ' ಸೌಮ್ಯತೆ ಎಂಬೀ ಗುಣಗಳು ಕುಂದಿಹೋಗುತ್ತವೆ. ಆದರೆ ಆಹಾರ ಸೇವನಾಕ್ರಮದಲ್ಲಿ ಒಂದು ಮಧ್ಯನೆಲೆಯನ್ನು ಕೈಗೊಳ್ಳುವವರಿಗೆ, ಧೈರ್ಯವಿದ್ದ ಹಾಗೆಯೇ ಸಹನೆ, ಸೌಮ್ಯತೆ ಎಂಬೀ ಗುಣಗಳೂ ಇರುತ್ತವೆ. ಈ ತತ್ವವನ್ನು ಪರಿಗಣಿಸಿ ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸುತ್ತದೆ: "ಕುಲು ವಷ್‌ರಬೂ ವಲಾ ತುಸ್ರಿಫೂ" (7:32). ಅಂದರೆ (ಮಾಂಸವನ್ನೂ ಮತ್ತಿತರ ಆಹಾರಗಳನ್ನೂ) ತಿನ್ನಿರಿ; (ಸ್ವಭಾವವೂ ಆರೋಗ್ಯವೂ ಹಾನಿಕರವಾಗದಿರಲಿಕ್ಕೋಸ್ಕರ ಯಾವುದೇ ವಸ್ತುವನ್ನೂ) ಅಮಿತವಾಗಿ ಸೇವಿಸಬೇಡಿರಿ.

ಶಾರೀರಿಕ ಚಟುವಟಿಕೆಗಳೂ ಕ್ರಿಯೆಗಳೂ ಆತ್ಮದ ಮೇಲೆ ಪ್ರಭಾವವನ್ನು ಬೀರುವಂತೆಯೇ, ಆತ್ಮಶಕ್ತಿಯೂ ಶರೀರದ ಮೇಲೆ ಪ್ರಭಾವವನ್ನು ಬೀರುತ್ತದೆ. ಶೋಕಭರಿತ ವ್ಯಕ್ತಿಯ ಕಣ್ಣುಗಳು ಕಣ್ಣೀರಿನಿಂದ ತುಂಬುವ ರೀತಿಯಲ್ಲೇ ಸಂತೋಷವುಂಟಾಗುವಾಗ ಅವನು ಮಂದಸ್ಮಿತನಾಗುತ್ತಾನೆ. ಹಾಗೆಯೇ ತಿನ್ನುವುದು, ಕುಡಿಯುವುದು, ನಿದ್ರಿಸುವುದು, ಎಚ್ಚರಗೊಳ್ಳುವುದು, ಚಲಿಸುವುದು, ಪರಿಶ್ರಮಿಸುವುದು, ವಿಶ್ರಾಂತಿ ಪಡೆಯುವುದು, ಸ್ನಾನಮಾಡುವುದು ಮುಂತಾದ ಶಾರೀರಿಕವಾದ ಎಲ್ಲಾ ಕ್ರಿಯೆಗಳೂ ದಿಟವಾಗಿ ನಮ್ಮ ಆತ್ಮದ ಮೇಲೆ ವಿವಿಧ ರೀತಿಯ ಪರಿಣಾಮಗಳನ್ನುಂಟುಮಾಡುತ್ತವೆ. ನಮ್ಮ ಶರೀರ ರಚನೆ ನಮ್ಮ ಮಾನವೀಯತೆಗೆ ಅನುಯೋಜ್ಯವಾದ ರೀತಿಯಲ್ಲಿದೆ. ಮಿದುಳಿನ ಒಂದು ಭಾಗದ ಮೇಲೆ ಏಟುಬಿದ್ದರೆ ಜ್ಞಾಪಕ ಶಕ್ತಿಯು ನಷ್ಟವಾಗುತ್ತದೆ. ಇನ್ನೊಂದು ಭಾಗದ ಮೇಲೆ ಏಟುಬಿದ್ದರೆ ಬೋಧರಹಿತವಾಗುತ್ತದೆ. ಪ್ಲೇಗು ರೋಗದ ವಿಷಾಣುಗಳು ಬೆರೆತ ವಾಯು ಮೊದಲು ಶರೀರವನ್ನು ಪ್ರವೇಶಿಸಿ ನಂತರ ಮನಸ್ಸನ್ನು ಬಾಧಿಸಿ ಕೆಲವು ಘಂಟೆಗಳೊಳಗೆ ಅದು ನೈತಿಕ ಗುಣಗಳ ವಾಸಸ್ಥಳವಾದ ಅಂತರಿಕ ವ್ಯವಸ್ಥೆಯನ್ನು ಅಲ್ಲೋಲಕಲ್ಲೋಲ ಮಾಡುತ್ತದೆ. ಕೊನೆಗೆ ಈ ರೋಗಪೀಡಿತನು ಹುಚ್ಚನಂತಾಗಿ ಸ್ವಲ್ಪ ಹೊತ್ತಿನೊಳಗೆ ಮರಣವನ್ನಪ್ಪುವನು. ಸಂಕ್ಷಿಪ್ತವಾಗಿ, ಶಾರೀರಿಕ ಪೀಡೆಗಳು ವಿವಿಧ ರೀತಿಯ ಅಂತರಿಕ ಪರಿಣಾಮಗಳಿಗೆ ಕಾರಣವಾಗುತ್ತವೆ. ಶರೀರಕ್ಕೂ ಆತ್ಮಕ್ಕೂ ಪರಸ್ಪರ ಗೂಢವಾದೊಂದು ದೃಢಸಂಬಂಧವಿದೆಯೆಂದೂ ಈ

ರಹಸ್ಯವನ್ನು ಬೇಧಿಸಲು ಮಾನವನು ಶಕ್ತನಲ್ಲವೆಂದೂ ಇದರಿಂದ ವ್ಯಕ್ತವಾಗುತ್ತದೆ.

### ಆತ್ಮದ ಉಗಮ

ಆತ್ಮಕ್ಕೂ ಶರೀರಕ್ಕೂ ಅನ್ಯೋನ್ಯವಿರುವ ಪ್ರಸ್ತುತ ಬಂಧವನ್ನು ರುಜುಪಡಿಸಲು ಬಲವತ್ತಾದ ಇನ್ನೊಂದು ಸಾಕ್ಷ್ಯ ಶರೀರವು ಆತ್ಮದ ಜನ್ಮದಾತೆಯೆಂಬ ಸಿದ್ಧಾಂತ ವಾಗಿದೆ. ಆತ್ಮವೆಂದರೆ ಅಂತರಿಕ್ಷದಿಂದಲೋ ಅಥವಾ ಬೇರೆಲ್ಲಿಂದಲೋ ಬಂದು ಗರ್ಭಿಣಿಯ ಉದರದಲ್ಲಿ ಪ್ರವೇ ಶಿಸುವ ವಸ್ತುವಲ್ಲ. ಅದು ಬೀಜದಲ್ಲಿ ಗುಪ್ತವಾಗಿ ಅಡ ಗಿರುವಂತಹ ಹಾಗೂ ಗರ್ಭಾಶಯದಲ್ಲಿ ಮಾಂಸಪಿಂಡದ ಬೆಳವಣಿಗೆಯೊಂದಿಗೆ ಬೆಳೆಯುತ್ತಾ ಬರುವ ಒಂದು ತೇಜ ಸ್ಸಾಗಿದೆ. ಆತ್ಮವೆಂದರೆ ಮಾತೃಗರ್ಭದಲ್ಲಿ ಬೀಜದಿಂದ ತಯಾರಾಗಿ ಮಾಂಸಪಿಂಡದಲ್ಲಿ ಪ್ರಕಾಶಿಸಿ ಬರುವ ಒಂದು ಶಕ್ತಿಯಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅದು ಹೀಗೆನ್ನುತ್ತದೆ: "ಸುಮ್ಮ ಅನ್‌ಷಅ್‌ನಾಹುಖಲ್ ಕನ್ ಆಖರ – ಫತಬಾರಕಲ್ಲಾಹು ಅಹ್‌ಸನುಲ್ ಖಾಲಿ ಕೀನ್" (23:15). ಅಂದರೆ: ನಂತರ ಗರ್ಭಾಶಯಲ್ಲಿ ರೂಪೀಕರಿಸಲ್ಪಟ್ಟ ಪಿಂಡವನ್ನು ನಾವು ಇನ್ನೊಂದು ಮಾದರಿಯಲ್ಲಿ ರೂಪೀಕರಿಸಿ ಆತ್ಮವೆಂಬ ಒಂದು ಸೃಷ್ಟಿ ಯನ್ನು ಬಹಿರಂಗಪಡಿಸುತ್ತೇವೆ; ಅತುಲ್ಯನೂ ಸೃಷ್ಟಿಕರ್ತ ನೂ ಆಗಿರುವ ಅಲ್ಲಾಹು ಉತ್ಕೃಷ್ಟನು.

ಪ್ರಸ್ತುತ ಖುರ್‌ಆನ್ ವಚನದಲ್ಲಿ ಶರೀರದಿಂದಲೇ ಇನ್ನೊಂದು ಸೃಷ್ಟಿಯನ್ನು ಬಹಿರಂಗಪಡಿಸಲಾಗುವುದೆಂದು ಪ್ರಸ್ತಾಪಿಸಿದುದರಲ್ಲಿ, ಆತ್ಮದ ಯಥಾರ್ಥ ಸ್ವರೂಪವನ್ನು ತೋರಿಸುವ ಹಾಗೂ ಶರೀರಕ್ಕೂ ಆತ್ಮಕ್ಕೂ ಪರಸ್ಪರ ವಿರುವ ಗಾಢವಾದ ಸಂಬಂಧವನ್ನು ಸೂಚಿಸುವ ಒಂದು ತತ್ವವು ಅಡಕವಾಗಿದೆ. ಮನುಷ್ಯನ ಪ್ರತಿಯೊಂದು ಕಾಯಾ ವಾಚಾ ಕ್ರಿಯೆಯೂ ಪರಮಾತ್ಮನಿಗಾಗಿ ಅವನ ಪರಿಶುದ್ಧ ನಿಯಮಕ್ಕನುಸಾರವಾಗಿರುವಾಗ ಅದು ಪ್ರಸ್ತುತ ತತ್ವಕ್ಕಧೀನವಾಗಿರುವುದೆಂದು ಇದು ತಿಳಿಸಿಕೊಡುತ್ತದೆ. ಅಂದರೆ ಮನುಷ್ಯನ ಬೀಜದಲ್ಲಿ ಅಡಗಿರುವಂತಹ ಒಂದು ತೇಜಸ್ಸು ಅಂತಃಶುದ್ಧಿಯಿಂದ ಕೂಡಿದ ಅವನ ಎಲ್ಲಾ ಕ್ರಿಯೆಗಳಲ್ಲೂ ಅಡಗಿರುತ್ತದೆ. ಸತ್ಕರ್ಮ ಚಟುವಟಿಕೆ ಗಳಿಂದ ಕೂಡಿದ ಈ ಶರೀರವು ಕ್ರಮೇಣ ಬೆಳೆಯುತ್ತಿ ದ್ದಂತೆಯೇ ಅದರ ಆತ್ಮ ತೇಜಸ್ಸು ಪೂರ್ಣಪ್ರಭಾವದಿಂದ ಪ್ರಕಾಶಿಸಿ ಜ್ಯೋತಿರ್ಮಯವಾದ ಶಕ್ತಿಯನ್ನು ಪ್ರಕಟಪಡಿ ಸುತ್ತದೆ. ಹೀಗೆ ದೇಹವು ಪೂರ್ಣಬೆಳವಣಿಗೆಯನ್ನು ಪಡೆದಾಗ ಅಂತರಂಗದಿಂದ ಮಿಂಚಿನಂತೆ ಒಂದು ಪ್ರಕಾಶ ದೀಪ್ತಿಯು ತಕ್ಷಣವೇ ತೋರಲಾರಂಭಿಸುತ್ತದೆ. ಈ ಸ್ಥಿತಿಯ ಕುರಿತು ಉಪಮಾರೂಪದಲ್ಲಿ ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೀಗೆನ್ನುತ್ತಾನೆ: "ಫಇಜಾ ಸವ್ವಯ್ ತುಹೂ ವ ನಫಖ್ತು ಫೀಹಿ ಮಿ(ನ್)ರೂಹಿ ಫಕಊಲ ಹೂ ಸಾಜಿದೀನ್" (15:30). ಅಂದರೆ: ನಾನು ಆ ಶರೀರವನ್ನು ರೂಪೀಕರಿಸಿ, ಮಹತ್ತಾದ ಪ್ರಕಾಶಗಳನ್ನು ಅದರಲ್ಲಿ ಸಮೀಕರಿಸಿ, ಅದರಲ್ಲಿ ನನ್ನ ಆತ್ಮವನ್ನು ಊದಿ ದೆನು; ನೀವೆಲ್ಲರೂ ಅದಕ್ಕೆ ವಿನಯದಿಂದ ಸಾಷ್ಟಾಂಗ ವನ್ನು ಮಾಡಿರಿ. ಸತ್ಕರ್ಮದಿಂದ ಕೂಡಿದ ಶರೀರವು ಪೂರ್ಣರೂಪವನ್ನು ಪಡೆದಾಗ ಅಂತರಂಗದಿಂದ ಒಂದು ಆತ್ಮತೇಜಸ್ಸು ಪ್ರಕಾಶಿಸಲು ತೊಡಗುತ್ತದೆಯೆಂಬ ಸಂಗತಿ ಯನ್ನೇ ಈ ವಾಕ್ಯ ಸೂಚಿಸುತ್ತದೆ. ಲೌಕಿಕ ವ್ಯವಹಾರ ಗಳಿಂದ ಮನುಷ್ಯನು ಸಂಪೂರ್ಣವಾಗಿ ವಿಮುಕ್ತನಾದ ನಂತರ ರೂಪೀಕರಿಸಲ್ಪಡುವುದರಿಂದಲೇ ಅದರಿಂದ ಪ್ರಕಟವಾಗುವ ತೇಜಸ್ಸಿಗೆ ಪರಮಾತ್ಮನು ತನ್ನೊಂದಿಗೆ ಸಂಬಂಧವನ್ನು ಕಲ್ಪಿಸಿರುವನು. ಮೊದಲು ಮಂದ ವಾಗಿದ್ದ ಆ ಪ್ರಕಾಶವು ಈ ಘಟ್ಟದಲ್ಲಿ ದೇದೀಪ್ಯಮಾನ ವಾಗಿ ಪ್ರಜ್ವಲಿಸುತ್ತದೆ. ದೇವರ ಈ ಮಹತ್ವದ ಮುಂದೆ ಎಲ್ಲರೂ ಸಾಷ್ಟಾಂಗವೆರಗಲು ನಿರ್ಬಂಧಿತರಾಗಿರುತ್ತಾರೆ. ಆದ್ದರಿಂದ ಈ ದಿವ್ಯ ತೇಜಸ್ಸು ಪ್ರಕಟವಾಗುವಾಗ ಅಂಥ ಕಾರದ ಪ್ರೇಮಿಯಾದ ದುರಾತ್ಮ (ಇಬ್ಲೀಸ್, ಪಿಶಾಚಿ) ಹೊರತು ಸಕಲರೂ ಅದರೆಡೆಗೆ ಆಕರ್ಷಿತರಾಗಿ ಅದಕ್ಕೆ ಶಿರಬಾಗುವರು.

ಇನ್ನು ಮೊದಲಿನ ವಿಷಯದ ಕಡೆಗೆ ಹಿಂದಿರು ಗುವಾ. ಆತ್ಮವೆಂದರೆ ಗರ್ಭಾಶಯದಲ್ಲಿ ಬೆಳೆಯುತ್ತಿರುವ ಮಾಂಸಪಿಂಡದಿಂದ ಉದ್ಭವಿಸುವ ಒಂದು ತೇಜಸ್ಸಾಗಿದೆ ಯೆಂದು ಮೇಲೆ ಪ್ರಸ್ತಾಪಿಸಲಾಗಿದೆಯಷ್ಟೇ. ಇಲ್ಲಿ "ಉದ್ಭವಿಸುವುದು" ಎಂಬುದರ ತಾತ್ಪರ್ಯ ಮೊದಲು ನಿಗೂಢವೂ ಅವ್ಯಕ್ತವೂ ಆಗಿರುವ ಆ ಶಕ್ತಿಯು ಶರೀರದ ಪೂರ್ಣ ಬೆಳವಣಿಗೆಯೊಂದಿಗೆ ಕ್ರಮೇಣ ಪ್ರತ್ಯಕ್ಷವಾಗು ತ್ತದೆ ಎಂದಾಗಿದೆ. ಮೊದಲು ಅದು ಬೀಜದಲ್ಲೇ ಅಡಗಿ ರುತ್ತದೆ. ಬೀಜದೊಂದಿಗೆ ಅದಕ್ಕಿರುವ ವರ್ಣನಾತೀತ ವಾದ ಬಂಧ ದೇವರ ಇಚ್ಛೆಗೂ ನಿಯಂತ್ರಣಕ್ಕೂ ಅಧೀನ

ವಾಗಿರುತ್ತದೆ. ಆದುದರಿಂದ ಆತ್ಮವೆಂದರೆ ಬೀಜದಲ್ಲೇ ಇರುವ ಒಂದು ತೇಜಸ್ವಿ ಸತ್ತ್ವವಾಗಿದೆ. ಒಂದು ವಸ್ತುವು ಇನ್ನೊಂದು ವಸ್ತುವಿನ ಅಂಶವೆಂಬ ರೀತಿಯಲ್ಲಿ ಅದನ್ನು ಬೀಜದ ಅಂಶವೆಂದು ಹೇಳಲಾಗುವುದಿಲ್ಲ. ಅಥವಾ ಅದು ಹೊರಗಿನಿಂದ ಬಂದು ಸೇರುವುದೆಂದಾಗಲೀ, ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದು ಬೀಜದೊಂದಿಗೆ ವಿಲೀನವಾಗುವುದೆಂದಾಗಲೀ ಹೇಳಲಾಗುವುದಿಲ್ಲ. ಅದು ಚಕಮಕಿಕಲ್ಲಿನಲ್ಲಿ ಅಗ್ನಿಯು ಅಂತರ್ಗತವಾಗಿರುವಂತೆ ಬೀಜದಲ್ಲಿ ಅಗೋಚರವಾಗಿದ್ದುಕೊಂಡಿರುತ್ತದೆ. ಆತ್ಮವು ಬೇರೊಂದು ವಿಧಾನದಲ್ಲಿ ಆಕಾಶದಿಂದವತರಿಸುವುದು, ಅಥವಾ ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದು ಯಾವುದಾದರೊಂದು ರೂಪದಲ್ಲಿ ಬೀಜದೊಂದಿಗೆ ಸಂಯೋಜಿಸಿ ಗರ್ಭಾಶಯದಲ್ಲಿ ಪ್ರವೇಶಿಸುವುದೆಂಬ ಅಭಿಪ್ರಾಯವನ್ನು ದೈವಿಕ ಗ್ರಂಥವಾದ ಖುರ್‌ಆನ್ ಸಮ್ಮತಿಸುವುದಿಲ್ಲ. ಮಾತ್ರವಲ್ಲ ಆ ಭಾವನೆಯು ಅಸಂಬದ್ಧವೂ ಪ್ರಕೃತಿ ನಿಯಮಕ್ಕೆ ವಿರುದ್ಧವೂ ಆಗಿದೆ. ಕೊಳೆತ ಆಹಾರ ಪದಾರ್ಥಗಳಲ್ಲಿಯೂ ಕೊಳಕು ವ್ರಣಗಳಲ್ಲಿಯೂ ಸಹಸ್ರಾರು ಕ್ರಿಮಿಕೀಟಗಳು ಉಂಟಾಗುವುದನ್ನೂ ಮಲಿನ ಬಟ್ಟೆಗಳಲ್ಲಿ ಹಲವಾರು ಕ್ರಿಮಿಕೀಟಗಳು ಉದ್ಭವಗೊಳ್ಳುವುದನ್ನೂ ಮನುಷ್ಯನ ಜಠರದಲ್ಲಿ ಅನೇಕ ಹುಳಗಳು ಉಂಟಾಗುವುದನ್ನೂ ನಾವು ಕಾಣುತ್ತಿದ್ದೇವೆ. ಈ ಕ್ರಿಮಿಕೀಟಗಳು ಹೊರಗಿನಿಂದ ಬರುತ್ತವೆಯೇ ಅಥವಾ ಆಕಾಶದಿಂದ ಅವತರಿಸುತ್ತವೆಯೇ ಎಂಬುದನ್ನು ಹೇಳಲು ಅಸಾಧ್ಯ. ಆದ್ದರಿಂದ ಆತ್ಮವೆಂದರೆ ಶರೀರದಿಂದಲೇ ಉದ್ಭವಿಸುವ ಒಂದು ಶಕ್ತಿಯೆಂಬ ಸಿದ್ಧಾಂತವು ಸರಿಯಾದುದಾಗಿದೆ. ಇದೇ ಆಧಾರದಿಂದ ಅದೊಂದು ಸೃಷ್ಟಿಯೆಂಬುದು ಸಹ ಸ್ಪಷ್ಟವಾಗುತ್ತದೆ.

ಸರ್ವಶಕ್ತನಾದ ಪರಮಾತ್ಮನು ಶರೀರದಿಂದ ಆತ್ಮವನ್ನು ಸೃಷ್ಟಿಸಿದ ಪ್ರಕಾರ ಅದಕ್ಕೆ ಶರೀದಿಂದಲೇ ಎರಡನೆಯ ಸೃಷ್ಟಿಯನ್ನು ಸಹ ನೀಡಲು ಉದ್ದೇಶಿಸಿರುವನೆಂದು ಈ ಮೇಲಿನ ವಿವರಣೆಗಳಿಂದ ತಿಳಿದುಕೊಳ್ಳಬೇಕಾಗಿದೆ. ಆತ್ಮದ ಚಲನವಲನಗಳು ಶರೀರದ ಚಲವಲನಗಳನ್ನು ಅವಲಂಬಿಸಿವೆ. ನಾವು ಯಾವ ಕಡೆಗೆ ಶರೀರವನ್ನು ತಿರುಗಿಸುತ್ತೇವೆಯೋ ಅದೇ ಕಡೆಗೆ ಆತ್ಮ ಸಹ ತಿರುಗುತ್ತದೆ. ಮನುಷ್ಯನ ಶಾರೀರಿಕಾವಸ್ಥೆಗೆ ಆತ್ಮದೊಂದಿಗಿರುವ ಸಂಬಂಧದ ಪ್ರಾಧಾನ್ಯವನ್ನು ಪರಿಗಣಿಸಿ ದೈವೋಕ್ತ ಧರ್ಮಗ್ರಂಥ ಈ ವಿಷಯದಲ್ಲಿ ಮಾರ್ಗದರ್ಶನವನ್ನೀಯುವುದು ಅತ್ಯಾವಶ್ಯಕವಾಗಿದೆ. ಆದಕಾರಣ ಪವಿತ್ರ ಖುರ್‌ಆನ್ ಮನುಷ್ಯನ ಪ್ರಾಕೃತಿಕ ಜೀವಿತವನ್ನು ಪರಿಷ್ಕರಿಸುವ ಕಾರ್ಯದಲ್ಲಿ ತುಂಬಾ ಶ್ರದ್ಧೆವಹಿಸಿರುವುದನ್ನು ಕಾಣಬಹುದು. ಮಾನವನಿಗೆ ಸಂಬಂಧಿಸಿದ ಎಲ್ಲಾ ಮುಖ್ಯ ಕಾರ್ಯಗಳಲ್ಲೂ ಆ ಪವಿತ್ರಗ್ರಂಥ ಅಮೂಲ್ಯ ನಿರ್ದೇಶಗಳನ್ನು ನೀಡುತ್ತದೆ. ಮಾನವನ ಸುಖ, ದುಃಖ, ಭೋಜನ, ಪಾನೀಯ, ಉಡುಪು, ನಿದ್ರೆ, ಮಾತು, ಮೌನ, ವಿವಾಹ, ಏಕಾಂತತೆ, ನಡೆಯುವುದು, ನಿಲ್ಲುವುದು, ಶುಚಿಗೊಳಿಸುವುದು, ಸ್ನಾನಮಾಡುವುದು ಮೊದಲಾದ ಕಾರ್ಯಗಳ ಸಂಬಂಧಿಸಿ ವಿಧಿಗಳನ್ನೂ ಆರೋಗ್ಯಾವಸ್ಥೆಯಲ್ಲಿ ಹಾಗೂ ಅನಾರೋಗ್ಯಾವಸ್ಥೆಯಲ್ಲಿ ಪಾಲಿಸಬೇಕಾದ ನಿರ್ದಿಷ್ಟ ನಿಯಮಗಳನ್ನೂ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಉಪದೇಶಿಸಿರುತ್ತದೆ. ಹೀಗೆ ಅದು ಮನುಷ್ಯನ ದಿನಚರ್ಯಗಳ ಸಂಬಂಧಿಸಿದ ಸಕಲ ವಿಷಯಗಳಲ್ಲೂ ಅನುಷ್ಠಾನ ಕ್ರಮಗಳನ್ನು ನಿರ್ದೇಶಿಸಿ, ಶಾರೀರಿಕಾವಸ್ಥೆಗೆ ಆತ್ಮಿಕ ಸ್ಥಿತಿಯ ಮೇಲೆ ಎಷ್ಟರಮಟ್ಟಿಗೆ ಸ್ವಾಧೀನಶಕ್ತಿ ಇದೆಯೆಂಬುದನ್ನು ತಿಳಿಸಿಕೊಡುತ್ತದೆ. ಈ ವಿಷಯದಲ್ಲಿ ಖುರ್‌ಆನ್ ನೀಡುವ ನಿರ್ದೇಶಗಳನ್ನು ಸವಿಸ್ತಾರವಾಗಿ ಪ್ರತಿಪಾದಿಸಲಿಕ್ಕೆ ಇಲ್ಲಿ ಸಮಯಾವಕಾಶವಿಲ್ಲ.

(ಮುಂದುವರಿಯುವುದು)

# BOOKS ON ISLAM
# AND
# CONTEMPORARY RELIGIONS

| | | |
|---|---|---|
| 1. | **Ahmadiyyat or The True Islam**<br>By Hazrat Mirza Bashiruddin Mahmud Ahmad | 8-00 |
| 2. | **The Teachings of Islam**<br>By Hazrat Mirza Ghulam Ahmad | 6-00 |
| 3. | **Characteristics of the Quaranic Teachings**<br>By Hazrat Mirza Bashiruddin Mahmud Ahmad | 1-00 |
| 4. | **Where did Jesus Die ?**<br>By J. D. Shams, Ex-Imam, London Mosque | 2-25 |
| 5. | **The Tomb of Jesus**<br>By Sufi M. R. Bengali | 0-75 |
| 6. | **Jesus in India**<br>By Hazrat Mirza Ghulam Ahmad | 2-25 |
| 7. | **The Christian Doctrine of Atonement**<br>By Dr. Mufti Muhammad Sadiq, D.D., LL.D , S.S P. (London) | 1-50 |
| 8. | **An Interpretation of Islam**<br>By Prof. Dr. Laura Veccia Vaglieri | 1-50 |

Write to

**NAZIR DAWAT - O - TABLIGH**

**P. O. QADIAN-143516. (Punjab)**

---


**Please visit for your Photographic Requirements:**

**PHOTO CENTRE**

COURT ROAD, PUTTUR-574 201.


**Prop: G. S. SULAIMAN.**

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, July-September 1978/Wafa-Tabook 1357

# ENGLISH TRANSLATION OF THE HOLY QURAN

WITH

## ARABIC TEXT and EXTENSIVE INDEX




**Price: Rs. 15-00** **Postal Charges Extra**

Write to:

**NAZIR DAWAT-O-TABLIGH**

**QADIAN (Punjab)-143516**

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.